# ಸಂಪ್ರೀತಿ ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ

Sampreethi - Samruddhi | Volume : 6 | Issue : 05 | Sep. 2023 | Pages : 32 | ₹ 20/-
ಸಂಪ್ರೀತಿ ಸಮೃದ್ಧಿ | ಸಂಪುಟ : 6 | ಸಂಚಿಕೆ : 05 | ಸೆಪ್ಟೆಂಬರ್ 2023 | ಪುಟಗಳು : 32 | ₹ 20 ರೂ.





|| Jai Sri Gurudev ||

# SJ BGS POLYTECHNIC



(A Venture of Sri Adichunchanagiri Shikshana Trust ®)

(Approved by All India Council for Technical Education, New Delhi & Recognised by Government of Karnataka)

B G NAGAR, (BGSIT CAMPUS), NAGAMANGALA TALUK, MANDYA DISTRICT.

**COURSES OFFERED:**

- CIVIL ENGINEERING
- MECHANICAL ENGINEERING (General)
- COMPUTER SCIENCE & ENGINEERING
- ELECTRICAL & ELECTRONICS ENGINEERING
- ELECTRONICS & COMMUNICATION ENGINEERING

Eligibility:-
Pass in SSLC or Equivalent Examination with 35% aggregate.



**OUR VISION:**

To Impart Quality Education
Transformation of Child through Excellent Education
Child Centered Education

*Hunt Your Dreams*

**Institution Code : 541**



**Salient Features**

- Highly Qualified and Experienced Faculty
- Spacious well equipped Class Rooms, Labs, Workshops and Seminar Halls
- Internet Facility
- Hostel Facility for Boys & Girls
- Sports Facility
- Transportation
- Canteen Facility
- Library



**For Admissions, Contact :**

**PRINCIPAL**
**SJ BGS POLYTECHNIC,**

BGSIT CAMPUS, BG Nagar (Bellur Cross)
Nagamangala Taluk, Mandya District
Karmataka - 571 448

**E-mail :** ppl.sjbgsp@gmail.com
**Web :** www.sjbgsp.com
**Cell No. :** 9448207483

# ಸಂಪ್ರೀತಿ – ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ


## ಸಂಪಾದಕೀಯ


**ಸೆಪ್ಟಂಬರ್ : 2023**

**ಸಂಪುಟ 6, ಸಂಚಿಕೆ 5**

ಸಂಪಾದಕರು

**ಡಾ॥ ಸಿ. ನಂಜುಂಡಯ್ಯ**

**ಚಂದಾ ವಿವರ :**

| | |
|---|---|
| 10 ವರ್ಷಕ್ಕೆ | ರೂ.2000/– |
| 05 ವರ್ಷಕ್ಕೆ | ರೂ.1000/– |
| 02 ವರ್ಷಕ್ಕೆ | ರೂ.500/– |

ಹಣವನ್ನು ಮನಿಯಾರ್ಡರ್, ಬ್ಯಾಂಕ್ ಡ್ರಾಫ್ಟ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

ಸಂಪಾದಕರು

**ಸಂಪ್ರೀತಿ – ಸಮೃದ್ಧಿ**

ನಂ. 83, ಬಸವಣ್ಣ ದೇವಸ್ಥಾನ ರಸ್ತೆ
ದೊಡ್ಡಸೋಮನಹಳ್ಳಿ,
ಮಾಗಡಿ ತಾಲ್ಲೂಕು,
ರಾಮನಗರ ಜಿಲ್ಲೆ– 562 131.

**#66, ಸಂಪ್ರೀತಿ – ಸದನ**
**ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ,**
**ಮಾಗಡಿ – 562 120 ರಾಮನಗರ ಜಿಲ್ಲೆ.**

ಮುದ್ರಕರು

- **ಕಂಪ್ಯೂಟರ್ ವರ್ಲ್ಡ್**
  ಜಿ.ಟಿ.ವರ್ಲ್ಡ್ ಮಾಲ್ ಹತ್ತಿರ
  ಮಲ್ಲಿಗೆ ತೋಟ, ಮಾಗಡಿ ರಸ್ತೆ,
  ಬೆಂಗಳೂರು – 560 023.

- ಓದುಗರು ತಮ್ಮ ಅಭಿಪ್ರಾಯಗಳನ್ನು ಮತ್ತು ಲೇಖಕರು ಲೇಖನಗಳನ್ನು ಕೆಳಗಿನ ಈ–ಮೇಲ್ ವಿಳಾಸಕ್ಕೆ ಕಳುಹಿಸಬಹುದು.

sampreethisamruddhi@gmail.com

8971608213

ಸಂಪ್ರೀತಿ – ಸಮೃದ್ಧಿ


### ವಿದ್ಯಾರ್ಥಿ ಮತ್ತು ಶಿಕ್ಷಕರ ಸಂಬಂಧ

ಶಿಕ್ಷಣವು ತುಂಬಾ ಪರಿಪೂರ್ಣವಾಗಿರುವುದರಿಂದ ಪ್ರಾಚೀನ ಕಾಲದಲ್ಲಿ ಶಿಕ್ಷಕ ಮತ್ತು ವಿದ್ಯಾರ್ಥಿಯ ನಡುವಿನ ಸಂಬಂಧವು ತುಂಬಾ ಪವಿತ್ರವಾಗಿತ್ತು. ವಿದ್ಯಾರ್ಥಿ ಮತ್ತು ಶಿಕ್ಷಕರ ಸಂಬಂಧಗಳ ಸುತ್ತ ಸುತ್ತುವ ಅನೇಕ ಕಥೆಗಳನ್ನು ನಮ್ಮ ಗ್ರಂಥಗಳಲ್ಲಿ ಬರೆಯಲಾಗಿದೆ. ಇವೆಲ್ಲವುಗಳಲ್ಲಿ, ಏಕಲವ್ಯನು ಮಾಡಿದ ಅತ್ಯುನ್ನತ ತ್ಯಾಗವು ಪ್ರಧಾನ ಪ್ರಾಮುಖ್ಯತೆಯನ್ನು ಹೊಂದಿದೆ ಮತ್ತು ತನ್ನ ಶಿಕ್ಷಕರ ಕಡೆಗೆ ವಿದ್ಯಾರ್ಥಿಯ ಸಮರ್ಪಣೆಯನ್ನು ತೋರಿಸುತ್ತದೆ.

ಅಯ್ಯೋ, ಇತ್ತೀಚಿನ ದಿನಗಳಲ್ಲಿ ಈ ಸಂಬಂಧವು ಕೊರತೆಯಿದೆ. ಇತ್ತೀಚಿನ ದಿನಗಳಲ್ಲಿ, ಇದನ್ನು ಕೇವಲ ವೃತ್ತಿ ಎಂದು ಪರಿಗಣಿಸಲಾಗಿದೆ. ಇದು ಉದಾತ್ತ ವೃತ್ತಿಯೆಂದು ಪರಿಗಣಿಸಲ್ಪಟ್ಟ ಹಿಂದಿನ ದಿನಗಳಿಗೆ ಹೋಲಿಸಿದರೆ ಇದು ವ್ಯಾಪಾರ ಅಥವಾ ಆದಾಯದ ಮೂಲವಾಗಿದೆ. ಈ ಉದಾತ್ತ ವೃತ್ತಿಗೆ ಕಳಂಕ ತರದಂತೆ ಜಾಗೃತರಾಗಿರಬೇಕು ಮತ್ತು ಶಿಕ್ಷಕರ ಮೇಲಿನ ಜನರ ನಂಬಿಕೆಯನ್ನು ಎತ್ತಿ ಹಿಡಿಯುವ ಉದಾಹರಣೆಯನ್ನು ಸೃಷ್ಟಿಸಬಾರದು.

ಭಾರತದಲ್ಲಿ ನಾವು ಶಿಕ್ಷಕರಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದೇವೆ. ಭಾರತೀಯ ಪರಿಕಲ್ಪನೆಯ ಪ್ರಕಾರ, ಶಿಕ್ಷಕನು ಶಿಕ್ಷಕರ ಆಧ್ಯಾತ್ಮಿಕ ಮತ್ತು ಬೌದ್ಧಿಕ ತಂದೆ. ಶಿಕ್ಷಕರ ಸಹಾಯವಿಲ್ಲದೆ ಯಾವುದೇ ಶಿಕ್ಷಣ ಸಾಧ್ಯವಿಲ್ಲ. ಅವರನ್ನು “ಗುರು” ಎಂದು ಪರಿಗಣಿಸಲಾಗುತ್ತದೆ – ಒಬ್ಬ ಊಹಕ, ಒಡನಾಡಿ ಮತ್ತು ಮಾರ್ಗದರ್ಶಿ.

ಪ್ರಾಚೀನ ಭಾರತದಲ್ಲಿ, ಜ್ಞಾನದ ಪ್ರಸರಣವು ಮೌಖಿಕವಾಗಿತ್ತು ಮತ್ತು ಶಿಕ್ಷಕನು ಜ್ಞಾನದ ಏಕೈಕ ಪಾಲಕನಾಗಿದ್ದನು. ಶಿಕ್ಷಕರ ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧವು ಪ್ರಾಚೀನ ಕಾಲದಲ್ಲಿ ಸೌಹಾರ್ದಯುತ ಮತ್ತು ಆಳವಾದದ್ದಾಗಿತ್ತು. ॐ



### ಅನ್ನದಾತರ ಪಾಲಿನ ಮನೆದೇವರು

# ಸರ್ ಎಂ. ವಿಶ್ವೇಶ್ವರಯ್ಯ

ಮಂಡ್ಯ, ಮೈಸೂರು ಜಿಲ್ಲೆಯ ರೈತರಪಾಲಿನ ಮನೆದೇವರು ಇಂದಿಗೂ ಇಂಜಿನಿಯರ್ ಡೇ ಯಂದು ನೆನಪಾಗುವವರು..!

ಇಂಜಿನಿಯರ್ ಎಂದರೆ 'ವಿಶ್ವೇಶ್ವರಯ್ಯನವರ ಹಾಗೆ ಇರಬೇಕು' ಎಂದು ಪ್ರಪಂಚವೇ ಕೊಂಡಾಡಿದ ಭಾರತದ ಅದ್ವಿತೀಯ ಮೇಧಾವಿ 'ಭಾರತರತ್ನ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯ' ನವರು.

ಸರ್.ಎಂ.ವಿ. ಉದ್ಯೋಗ ಪರ್ವದಲ್ಲಿ ದೇಶದ ವಿವಿದೆಡೆ ಮತ್ತು ಮೈಸೂರು ಸಂಸ್ಥಾನದ ದಿವಾನರಾಗಿದ್ದ ಕಾಲದಲ್ಲಿ ಕರ್ನಾಟಕಕ್ಕೆ ನೀಡಿದ ಕೊಡುಗೆ ಅಪಾರ. ಅವರ ಶಿಸ್ತಿನ ಜೀವನ, ಸಮಯಪರಿಪಾಲನೆ, ಕರ್ತವ್ಯನಿಷ್ಠೆ, ಪ್ರಾಮಾಣಿಕತೆ ಇವೆಲ್ಲಾ ಪ್ರಶ್ನಾತೀತ.

## ಬಾಲ್ಯಜೀವನ :

ವಿಶ್ವೇಶ್ವರಯ್ಯನವರ ತಂದೆ ಶ್ರೀನಿವಾಸಶಾಸ್ತ್ರಿ, ತಾಯಿ ವೆಂಕಟಲಕ್ಷ್ಮಮ್ಮ. ವಿಶ್ವೇಶ್ವರಯ್ಯನವರ ತಂದೆ ಸಂಸ್ಕೃತ ವಿದ್ವಾಂಸರು. ಧರ್ಮಶಾಸ್ತ್ರಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದರಲ್ಲದೆ ಆಯುರ್ವೇದ ತಜ್ಞರು ಆಗಿದ್ದರು. ಇವರೀರ್ವರ ಸುಪುತ್ರರಾಗಿ 15 ಸೆಪ್ಟಂಬರ್ 1860 ರಲ್ಲಿ ವಿಶ್ವೇಶ್ವರಯ್ಯನವರು ಜನಿಸಿದ್ದು, ಬೆಂಗಳೂರಿನಿಂದ 45 ಕಿ.ಮೀ ದೂರದಲ್ಲಿರುವ ಚಿಕ್ಕಬಳ್ಳಾಪುರದಿಂದ 5 ಕಿ.ಮೀ ಅಂತರದಲ್ಲಿರುವ ಮುದ್ದೇನಹಳ್ಳಿಯಲ್ಲಿ.

ವಿಶ್ವೇಶ್ವರಯ್ಯನವರ ಪ್ರಾಥಮಿಕ ಶಿಕ್ಷಣ ಚಿಕ್ಕಬಳ್ಳಾಪುರದಲ್ಲಿ ಮತ್ತು ಪ್ರೌಢಶಿಕ್ಷಣ ಬೆಂಗಳೂರಿನಲ್ಲಿ ನಡೆಯಿತು. 1881 ರಲ್ಲಿ ಬಿ.ಎ. ಪದವಿಯನ್ನು ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಪಡೆದರು. ನಂತರ ಪುಣೆಯ ಕಾಲೇಜ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂಜಿನಿಯರಿಂಗ್ ಪದವಿಯನ್ನು ಪಡೆದರು.

## ಸ್ವಯಂ ಚಾಲಿತ ಗೇಟಿನ ಜನಕ :

ವಿಶ್ವೇಶ್ವರಯ್ಯನವರು 1884 ರಲ್ಲಿ ಮುಂಬಯಿ ಸರ್ಕಾರದ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಇಂಜಿನಿಯರ್ ಆಗಿ ವೃತ್ತಿ ಜೀವನ ಆರಂಭವಾಯಿತು. ಇದಾದ ನಂತರ ಭಾರತೀಯ ನೀರಾವರಿ ಕಮಿಷನ್‌ನಿಂದ ಅವರಿಗೆ ಆಮಂತ್ರಣ ಬಂದಿತು. ಈ ಕಮಿಷನ್‌ನ್ನು ಸೇರಿದ ನಂತರ ದಖನ್ ಪ್ರಸ್ಥಭೂಮಿಯಲ್ಲೇ ಉತ್ತಮವಾದ ನೀರಾವರಿ ವ್ಯವಸ್ಥೆಯನ್ನು ವಿಶ್ವೇಶ್ವರಯ್ಯನವರು ಪರಿಚಯಿಸಿದರು. ಸರ್ ಎಂ. ವಿಶ್ವೇಶ್ವರಯ್ಯನವರು ಅರ್ಥರ್ ಕಾಟನ್‌ರವರಿಂದ ಬಹಳಷ್ಟು ಪ್ರಭಾವಿತರಾಗಿದ್ದರು. ಕಾವೇರಿ ನದಿಗೆ ಅಣೆಕಟ್ಟು ಕಟ್ಟುವಲ್ಲಿ ಅವರು ತಿರುಚಿರಾಪಳ್ಳಿಯಲ್ಲಿ ಚೋಳರಾಜರಿಂದ ನಿರ್ಮಿಸಲ್ಪಟ್ಟ ಹಾಗೂ 18ನೇ ಶತಮಾನದ ಅರ್ಧದಲ್ಲಿ ಅರ್ಥರ್ ಕಾಟನ್‌ರವರಿಂದ ಸಂಪೂರ್ಣವಾಗಿ ನವೀಕರಿಸಲ್ಪಟ್ಟ ಬೃಹತ್ ಗ್ರಾಂಡ್ ಅಣೆಕಟ್ಟನ್ನು ನೋಡಿ ಪ್ರಭಾವಿತರಾಗಿದ್ದರು.

ಅಣೆಕಟ್ಟುಗಳಲ್ಲಿ ಉಪಯೋಗಿಸಲಾಗುವ "ಸ್ವಯಂ ಚಾಲಿತ ಫ್ಲಡ್‌ಗೇಟ್ ವಿನ್ಯಾಸ"ವೊಂದನ್ನು ಕಂಡು ಹಿಡಿದು ಅದಕ್ಕಾಗಿ "ಪೇಟೆಂಟ್" ಪಡೆದರು. ಮೊದಲ ಬಾರಿಗೆ 1903ರಲ್ಲಿ ಪುಣೆಯ ಬಳಿ 'ಖಡಕ್‌ವಾಸ್ಲ' ಜಲಾಶಯದಲ್ಲಿ ಈ ವಿಶಿಷ್ಟ ತಂತ್ರಜ್ಞಾನದ ಸ್ವಯಂ ಚಾಲಿತ ಗೇಟುಗಳನ್ನು ಅಳವಡಿಸಿ, ಜಲಾಶಯದ ಈ ತಂತ್ರಜ್ಞಾನವನ್ನು ವಿಶ್ವದಲ್ಲಿಯೇ ಪ್ರಥಮ ಬಾರಿಗೆ ತೋರಿಸಿಕೊಟ್ಟ ಏಕೈಕ ತಂತ್ರಜ್ಞಾನಿ ಐತಿಹಾಸಿಕ ಸಾಕ್ಷಿಯಾಗಿದ್ದಾರೆ.

ವಿಶ್ವೇಶ್ವರಯ್ಯ ಅವರಿಗೆ ಅಂದಿನ ಸರಕಾರವು  ಪೂನಾ, ನಾಸಿಕ್, ಹೈದರಾಬಾದ್ ಮೊದಲಾದ ಕಡೆ ಪ್ರಮುಖ ನೀರಾವರಿ  ಯೋಜನೆಗಳ ಉಸ್ತುವಾರಿಯನ್ನು ವಹಿಸಿತು.

## ದಿವಾನರಾದ ರಾಯರು :

ಇವರು ಮೂಲತಃ ಇಂಜಿನಿಯರ್ ಆದರೂ ಇವರಲ್ಲಿದ್ದ ಕಾರ್ಯತತ್ಪರತೆ, ಪ್ರಾಮಾಣಿಕತೆ ಬುದ್ಧಿಶಕ್ತಿಯನ್ನು ಕಂಡು ಅರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಬೇಡವೆಂದರೂ ಬಿಡದೆ ಇವರನ್ನು ಮೈಸೂರಿನ ದಿವಾನರನ್ನಾಗಿ ನೇಮಿಸಿದರು. 28 ವರ್ಷಗಳ ಕಾಲ ಅಭಿಯಂತರರಾಗಿ, 6 ವರ್ಷಗಳ ಕಾಲ ಮೈಸೂರಿನ ದಿವಾನರಾಗಿ ಸೇವೆ ಸಲ್ಲಿಸಿದ್ದು ಅಲ್ಲದೇ ದಿವಾನ್ ಪದವಿಯಿಂದ ನಿವೃತ್ತರಾದ ನಂತರವೂ ಸಾಕಷ್ಟು ಶ್ರಮಿಸಿದರು. ರಾಷ್ಟ್ರ ಹಾಗೂ ಹೊರರಾಷ್ಟ್ರಗಳು ಸರ್ ಎಂ.ವಿ.ರವರ ಸೇವೆಯನ್ನು ಸಮರ್ಥವಾಗಿ ಬಳಸಿಕೊಂಡವು.

## ಕನ್ನಂಬಾಡಿಯ ಕನಸು ನನಸು :

ಈಗಿನ ಮಂಡ್ಯ ಜಿಲ್ಲೆಯಲ್ಲಿರುವ ಪ್ರಸಿದ್ಧ ಕೃಷ್ಣರಾಜಸಾಗರ ಅಣೆಕಟ್ಟಿನ ವಾಸ್ತುಶಿಲ್ಪಿ ಸರ್.ಎಂ.ವಿ. ಮೈಸೂರಿನ ದಿವಾನರಾಗಿದ್ದ ಕಾಲಾವಧಿಯಲ್ಲಿ, ಕೃಷ್ಣರಾಜಸಾಗರ ಅಣೆಕಟ್ಟು ಕಟ್ಟಿದ್ದಾಗ ಅಂದಿನ ಕಾಲಘಟ್ಟದಲ್ಲಿ ಭಾರತದಲ್ಲೇ ಅತ್ಯಂತ ದೊಡ್ಡ ಅಣೆಕಟ್ಟು. ಜೀವನದಿ ಕಾವೇರಿ ನದಿಗೆ ಕಟ್ಟಲಾದ ಅಣೆಕಟ್ಟನ್ನು ಪ್ರಾರಂಭಿಸಿ 4 ವರ್ಷಗಳಲ್ಲಿ ಮುಗಿಸಿ ಸ್ವಯಂಚಾಲಿತ ಗೇಟುಗಳನ್ನು ಅಳವಡಿಸಿ ಜಗತ್ತಿನಲ್ಲಿ ಯಾರೊಬ್ಬರು ಮಾಡಿರದಂತಹ ಸಾಧನೆ ಮಾಡಿದರು. ಬೇರೆ ಅಣೆಕಟ್ಟುಗಳು ಸಿಮೆಂಟ್, ಕಾಂಕ್ರೀಟ್‌ನಿಂದ ನಿರ್ಮಾಣವಾಗಿದ್ದರೆ, ಕೆ.ಆರ್.ಎಸ್.ಅಣೆಕಟ್ಟು ಸರ್.ಎಂ.ವಿಶ್ವೇಶ್ವರಯ್ಯನವರ ಜಾಣ್ಮೆಯ ತಂತ್ರಜ್ಞಾನದಿಂದ ಸುಣ್ಣ ಮತ್ತು ಬೆಲ್ಲದ ಮಿಶ್ರಣದಿಂದ ಕಟ್ಟಿದ ಮಾನವ ನಿರ್ಮಿತವಾಗಿದ್ದು, ದಾಖಲೆಯೊಂದಿಗೆ ಶತಮಾನದಿಂದ ಮೈಸೂರು, ಮಂಡ್ಯ, ಬೆಂಗಳೂರು, ತಮಿಳುನಾಡಿಗೆ ಜೀವಜಲವನ್ನು ನೀಡುತ್ತಿರುವ ವಾಸ್ತುಶಿಲ್ಪವಾಗಿದೆ. ಎಲ್ಲಿಯಾದರು ದುರಂತ ಸಂಭವಿಸಿದರೆ ಸ್ವಯಂ ಚಾಲಿತ ಗೇಟ್‌ಗಳು ತನ್ನಷ್ಟಕ್ಕೆ ತಾನೇ ತೆರೆದುಕೊಂಡು ಮುನ್ನುಗ್ಗುವ ಅಪಾರ ಪ್ರಮಾಣದ ನೀರು ಯಾರಿಗೂ ತೊಂದರೆಯಾಗದಂತೆ ಹರಿದು ಮುಂದೆ ಸಾಗಲು ಮುಂದಾಲೋಚನೆಯಿಂದ ಅಣೆಕಟ್ಟು ನಿರ್ಮಿಸುವಾಗಲು ಆಳವಾದ ನಾಲೆ ವ್ಯವಸ್ಥೆ ಮಾಡಲಾಗಿದೆ. ಜಗತ್ತಿನ ಅದ್ಭುತಗಳ ಸಾಲಿನಲ್ಲಿ ಬರುವ

ಕೆ.ಆರ್.ಸಾಗರ ಅಣೆಕಟ್ಟು ಒಂದು ಲಕ್ಷ ಇಪ್ಪತ್ತು ಸಾವಿರ ಎಕರೆ ಕೃಷಿ ಭೂಮಿಗೆ ನೀರುಣಿಸಿ ದಕ್ಷಿಣ ಭಾರತದ ಕೋಟ್ಯಾಂತರ ಜೀವಿಗಳಿಗೆ ಜೀವಜಲವನ್ನು ನೀಡಿ ಬೃಂದಾವನ ಉದ್ಯಾನವನದಲ್ಲಿ ವೈವಿಧ್ಯಮಯ, ನರ್ತಿಸುವ ಕುಣಿದು ಕುಪ್ಪಳಿಸುವ ನೀರಿನ ಕಾರಂಜಿಗಳು ಪುಷ್ಪಕಾಶಿಯೊಂದಿಗೆ ಜಗತ್ತಿನ ನಾನಾ ದೇಶದ ಪ್ರವಾಸಿಗರನ್ನು ತನ್ನಡೆಗೆ ಆಕರ್ಷಿಸುವಂತೆ ಮಾಡಿದ ಭಾರತದ ಭಾಗ್ಯವಿದಾತ ಸರ್.ಎಂ. ವಿಶ್ವೇಶ್ವರಯ್ಯನವರನ್ನು ದಕ್ಷಿಣ ಭಾರತದ ಜನತೆ ಎಂದಿಗೂ ಮರೆಯುವಂತಿಲ್ಲ.

## ಆಡಳಿತಕ್ಕೂ ಸೈ :

ಸರ್.ಎಂ.ವಿಶ್ವೇಶ್ವರಯ್ಯನವರು ಮೈಸೂರಿನ ದಿವಾನರಾಗಿ ಸಾಧಿಸಿದ ಸಾಧನೆಗಳು ಅವರೊಬ್ಬ ಉತ್ತಮ ಆಡಳಿತಗಾರ ಎಂಬುದನ್ನು ಸಾಬೀತು ಪಡಿಸಿವೆ. ಅವರ ಪ್ರತಿಭೆಗೆ, ಸೇವಾ ತತ್ಪರತೆಗೆ ಬ್ರಿಟಿಷ್ ಸರಕಾರವೇ ತಲೆದೂಗಿತ್ತು. ಅವರು ದಿವಾನರಾದಾಗ ಆಗಿನ ಬ್ರಿಟಿಷ್ ವೈಸ್‌ರಾಯ್ ಹಾರ್ಡಿಂಜ್ ರಾಜ್ಯದ ಆಂತರಿಕ ವಿಷಯಗಳಲ್ಲಿ ನಿರ್ಧಾರಗಳನ್ನು ಕೈಗೊಳ್ಳಲು ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದರು.

ಇದು ಅವರ ಘನತೆ ಗೌರವಗಳಿಗೆ ಇನ್ನೊಂದು ಗರಿ ಮೂಡಿಸಿತು. ಅವರು ಬೆಂಗಳೂರು, ಮೈಸೂರು ಮಾರುಕಟ್ಟೆ, ಬೀದಿ, ಉದ್ಯಾನವನ, ನಗರ ನೈರ್ಮಲ್ಯ–ಸೌಂದರ್ಯ, ಪೌರಸೌಲಭ್ಯ ಹಾಗೂ ಜನರ ಆರೋಗ್ಯದತ್ತ ಗಮನಹರಿಸಿ ಆಶ್ಚರ್ಯಕಾರಕ ಸಾಧನೆಗಳನ್ನು ಮಾಡಿದರು. ಗ್ರಾಮಗಳ ಸುಧಾರಣೆಗಾಗಿಯೂ ಶ್ರಮಿಸಿದರು.

ಆಡಳಿತದಲ್ಲೂ ಚುರುಕು ಮೂಡಿಸಿದರು. ವರ್ಷಕ್ಕೊಮ್ಮೆ ಸಮಾವೇಶಗೊಳ್ಳುತ್ತಿದ್ದ ಪ್ರಜಾಪ್ರತಿನಿಧಿ ಸಭೆ ವರ್ಷದಲ್ಲಿ ಎರಡು ಬಾರಿ ಸಮಾವೇಶಗೊಳ್ಳುವಂತೆ ಮಾಡಿದರು. ಸರ್ ಎಂ. ವಿಶ್ವೇಶ್ವರಯ್ಯನವರು ಮಾಡಿದ ಇನ್ನೊಂದು ಗಮನಾರ್ಹ ಸಾಧನೆ ಎಂದರೆ ಆಯ ವ್ಯಯ ಸಂಗ್ರಹ ಪಟ್ಟಿಯನ್ನು ಕನ್ನಡದಲ್ಲಿ ಪ್ರಕಟಿಸಲು ಆರಂಭಿಸಿದರು. ಲೆಜಿಸ್ಲೆಟಿವ್ ಕೌನ್ಸಿಲ್ ಸಭೆಗೆ ಹೆಚ್ಚಿನ ಅಧಿಕಾರವನ್ನು ನೀಡಿ ಪ್ರಜಾಪ್ರಭುತ್ವದ ಉಚ್ಛ ಪರಂಪರೆಗೆ ಚಾಲನೆ ನೀಡಿದರು. ಪ್ರಜಾಪ್ರತಿನಿಧಿ ಸಭೆ ಲೆಜಿಸ್ಲೆಟಿವ್ ಕೌನ್ಸಿಲ್‌ಗಳು ಇಂದಿನ ವಿಧಾನಸಭೆ–ವಿಧಾನ ಪರಿಷತ್ತುಗಳಂತೆಯೇ ಕಾರ್ಯನಿರ್ವಹಿಸುತ್ತಿದ್ದವು. ಅವರ ನೇತೃತ್ವದಲ್ಲಿ ಮೈಸೂರು ರಾಜ್ಯ ಪ್ರಗತಿಯ ಪಥವನ್ನೇರಿ ಮಾದರಿಯ ರಾಜ್ಯವಾಗಿ ಮಾರ್ಪಟ್ಟಿತು.

## ಶಿಕ್ಷಣ ಕ್ರಾಂತಿ :

ಶಿಕ್ಷಣದಿಂದಲೇ ದೇಶೋದ್ಧಾರ ಎಂಬುದನ್ನು ಮನಗಂಡಿದ್ದ ಸರ್.ಎಂ. ವಿಶ್ವೇಶ್ವರಯ್ಯನವರು ಮಕ್ಕಳ ಶಿಕ್ಷಣಕ್ಕೆ ತುಂಬ ಮಹತ್ವ ನೀಡಿದರು. ಅವರು ಅಲ್ಪಸಂಖ್ಯಾತರು, ಪರಿಶಿಷ್ಟ ಪಂಗಡಗಳು ಹಾಗೂ ಹಿಂದುಳಿದ ವರ್ಗಗಳಿಗೆ ಶಿಕ್ಷಣದ ಮಹತ್ವವನ್ನು ಮನನ ಮಾಡಿ ಅವರು ತಮ್ಮ ಮಕ್ಕಳಿಗೆ ಶಿಕ್ಷಣ ನೀಡಲು ಪ್ರೋತ್ಸಾಹಿಸಿದರು. ಅದಕ್ಕಾಗಿ ಅವರಿಗೆ ಶಾಲೆಗಳಲ್ಲಿ ಮುಕ್ತ ಪ್ರವೇಶ ದೊರೆಕಿಸಿಕೊಟ್ಟರು. ವ್ಯಾಸಂಗ ಮುಂದುವರೆಸಲು ಅಗತ್ಯ ಸೌಕರ್ಯಗಳನ್ನು ಒದಗಿಸಿದರು. ಉದ್ಯೋಗದಲ್ಲೂ ಅವರಿಗೆ ಪಾಲು ನೀಡಿ ಅವರು ಸಾಮಾಜಿಕವಾಗಿ ತಲೆಯೆತ್ತಿ ಬದುಕಲು ಅವಕಾಶ ಕಲ್ಪಿಸಿದರು. ವಿದ್ಯಾರ್ಥಿಗಳೆಂದರೆ ಅವರಿಗೆ ತುಂಬಾ ಅಚ್ಚುಮೆಚ್ಚು. ಅವರು ದಿವಾನರಾಗಿ ಅಧಿಕಾರ ವಹಿಸಿಕೊಳ್ಳುವ ಮುನ್ನ ಮೈಸೂರು ರಾಜ್ಯದಲ್ಲಿ 4568 ಶಾಲೆಗಳಿದ್ದರೆ, ಅವರು ದಿವಾನಗಿರಿಯಿಂದ ನಿವೃತ್ತರಾಗುವಾಗ ಅಂದರೆ 1918 ರಲ್ಲಿ ಅವುಗಳ ಸಂಖ್ಯೆ 11294 ಕ್ಕೇರಿತು. ಸರ್.ಎಂ.ವಿಶ್ವೇಶ್ವರಯ್ಯನವರು ಬೆಂಗಳೂರಿನ ಇಂಜಿನಿಯರಿಂಗ್ ಕಾಲೇಜನ್ನು ಅಭಿವೃದ್ಧಿಪಡಿಸಿದರು. ವಿಶೇಷ ತಾಂತ್ರಿಕ ಶಿಕ್ಷಣ ಹಾಗೂ ತರಬೇತಿಗಾಗಿ ವಿದೇಶಗಳಿಗೆ ಹೋಗಲಿಚ್ಛಿಸುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಸೌಕರ್ಯ ನೀಡಿದರು. ಕೃಷಿಕರಿಗಾಗಿ ಅವರು ಅಂದು ಆರಂಭಿಸಿದ ಕೃಷಿಶಾಲೆ ಇಂದು ಕೃಷಿ ವಿಶ್ವವಿದ್ಯಾಲಯವಾಗಿ ಬೆಳೆದು ನಿಂತಿದೆ. ಬೆಂಗಳೂರಿನ ಇಂದಿನ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ಮತ್ತು

ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಅವರ ಶೈಕ್ಷಣಿಕ ಸಾಧನೆಯ ಅನುಪಮ ಕೊಡುಗೆಗಳಾಗಿವೆ. ಸಾಮಾಜಿಕವಾಗಿ ಶೋಷಣೆಗೊಳಗಾಗುತ್ತಿದ್ದ ಮಹಿಳೆಯರನ್ನು ಪ್ರಜ್ಞಾವಂತರನ್ನಾಗಿಸಲು ಮಹಿಳಾ ಶಿಕ್ಷಣಕ್ಕೆ ಪ್ರೇರಣೆ ನೀಡಿದರು. ರಾಜ್ಯಾದ್ಯಂತ ಹೆಣ್ಣು ಮಕ್ಕಳ ಶಾಲೆಗಳನ್ನು ಆರಂಭಿಸಿ ದಾಖಲೆ ಬರೆದರು.

## ಅರಸಿ ಬಂದ ಭಾರತ ರತ್ನ :

ಸರ್.ಎಂ.ವಿ.ರವರ ಬುದ್ಧಿಶಕ್ತಿಗೆ ತಲೆದೂಗಿದ ಬ್ರಿಟೀಷರು 1915 ರಲ್ಲಿ 'ಸರ್' ಪ್ರಶಸ್ತಿಯನ್ನು ನೀಡಿದರೆ, ಸ್ವತಂತ್ರ ಭಾರತವು 1955 ರಲ್ಲಿ ಅಂದಿನ ರಾಷ್ಟ್ರಪತಿಗಳಾಗಿದ್ದ ಡಾ. ಬಾಬುರಾಜೇಂದ್ರ ಪ್ರಸಾದರು 'ಭಾರತರತ್ನ' ಪ್ರಶಸ್ತಿ ನೀಡಿ ಗೌರವಿಸಿದರು. ಸ್ವತಂತ್ರ ಭಾರತ ಸರ್ಕಾರವು ಸರ್.ಎಂ.ವಿ.ರವರ ಭಾವಚಿತ್ರವಿರುವ ಅಂಚೆ ಚೀಟಿಯನ್ನು ಹೊರತಂದಿತು. ದೇಶದ ನಾನಾ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಿ ಗೌರವಿಸಿದವು.

## ನಾನಾ ರಾಜ್ಯಗಳಲ್ಲೂ ಸೇವೆ :

ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ಗುಜರಾತ್ ಸೇರಿದಂತೆ ಭಾರತದ ನಾನಾ ರಾಜ್ಯಗಳಲ್ಲಿ ಸೇವೆ ಸಲ್ಲಿಸಿದರು. ಸ್ವಾತಂತ್ರ್ಯಪೂರ್ವದಲ್ಲಿ ಹಾಗು ಸ್ವಾತಂತ್ರ್ಯ ನಂತರದಲ್ಲಿ ದೇಶವು ವ್ಯಾಪಾರ, ವಾಣಿಜ್ಯ, ಕೃಷಿ, ನೀರಾವರಿ ಹಾಗೂ ಕೈಗಾರಿಕಾ ಕ್ಷೇತ್ರ ಸೇರಿದಂತೆ ಸರ್ವತೋಮುಖ ಅಭಿವೃದ್ಧಿಗೆ ಕಾರಣಕರ್ತರಾದರು. ಕರ್ನಾಟಕದಲ್ಲಿ ಕೈಗಾರಿಕಾ ಕ್ರಾಂತಿಯನ್ನು ಮಾಡಿದ ಮಹಾನ್ ವ್ಯಕ್ತಿ, ಬರಡು ಭೂಮಿಯಾಗಿದ್ದ ಮಂಡ್ಯ ಜಿಲ್ಲೆಯ ಲಕ್ಷಾಂತರ ಎಕರೆ ಭೂಮಿಗೆ ಕಾವೇರಿ ನೀರುಣಿಸುವ ಮೂಲಕ ಮಂಡ್ಯ ಜಿಲ್ಲೆಯ ರೈತರ ಪಾಲಿಗೆ ಪ್ರಾತಃಸ್ಮರಣೀಯ–ರಾಗಿದ್ದಾರೆ.

ಅವರ ಮುಂದಾಳುತನದಲ್ಲಿ ಸ್ಥಾಪಿಸಲ್ಪಟ್ಟಿರುವ ಕೈಗಾರಿಕೆಗಳಲ್ಲಿ ಭದ್ರಾವತಿಯ ಉಕ್ಕು ಕಾರ್ಖಾನೆ, ಜೋಗದ ಜಲವಿದ್ಯುತ್ ಯೋಜನೆ, ಮೈಸೂರು ಸ್ಯಾಂಡಲ್ ಸೋಪ್ ಕಾರ್ಖಾನೆ, ಮೈಸೂರು ಸಕ್ಕರೆ ಕಾರ್ಖಾನೆ ಇತ್ಯಾದಿ ಪ್ರಮುಖವಾದುವು . ಇವಲ್ಲದೆ, ಮೈಸೂರು, ಬೆಂಗಳೂರಿನಲ್ಲಿ ಇಂದಿಗೂ ಕಾರ್ಯನಿರ್ವಹಿಸುತ್ತಿರುವ ವಿವಿಧ ತಾಂತ್ರಿಕ ಶಿಕ್ಷಣ ಸಂಸ್ಥೆಗಳು, ಗ್ರಂಥಾಲಯಗಳು, ನೀರಾವರಿ ಯೋಜನೆಗಳು, ಕನ್ನಡ ಸಾಹಿತ್ಯ ಪರಿಷತ್, ಬ್ಯಾಂಕ್‌ಗಳು ಇತ್ಯಾದಿ ಸಮಾಜಮುಖಿ ವ್ಯವಸ್ಥೆಗಳನ್ನು ರೂಪಿಸಿದ ಕೀರ್ತಿ ಸರ್. ಎಂ.ವಿ.ಗೆ ಸಲ್ಲುತ್ತದೆ. ತಮ್ಮ ಅಪ್ರತಿಮ ಸಾಧನೆಗಾಗಿ ಬ್ರಿಟಿಷ್ ಸರಕಾರವು ಕೊಡುವ 'ನೈಟ್‌ಹುಡ್' ಪದವಿಯನ್ನು 1915 ರಲ್ಲಿಯೂ, ಸ್ವತಂತ್ರ ಭಾರತ ಸರಕಾರದ ಅತ್ಯುನ್ನತ ಪದವಿಯಾದ 'ಭಾರತರತ್ನ'ವನ್ನು 1955 ರಲ್ಲಿಯೂ ಪಡೆದುಕೊಂಡರು. ಶತಾಯುಷಿಯಾದ ಸರ್. ಎಂ.ವಿ ಅವರು ಏಪ್ರಿಲ್ 14, 1962 ರಂದು ದೈವಾಧೀನರಾದರು.

ಪ್ರಸ್ತುತ ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯಲ್ಲಿ ಸರ್.ಎಂ.ವಿ ವಾಸವಿದ್ದ ಮನೆಯನ್ನು ನವೀಕರಣಗೊಳಿಸಿ ಮ್ಯೂಸಿಯಂ ಮಾಡಿದ್ದಾರೆ. ಅದೇ ಆವರಣದಲ್ಲಿ ಅವರು ಹಿಂದೆ ವಾಸಿಸುತ್ತಿದ್ದ ಹೆಂಚಿನ ಮನೆ ಇದೆ. ಅವರಿಗೆ ಲಭಿಸಿದ ನೂರಾರು ಉಪಾಧಿಗಳು, ಪ್ರಶಸ್ತಿಗಳು, ಬಳಸುತ್ತಿದ್ದ ವಸ್ತುಗಳು ಇತ್ಯಾದಿಗಳನ್ನು ಅಲ್ಲಿ ಪ್ರದರ್ಶನಕ್ಕಿಡಲಾಗಿದೆ. ಮನೆಯ ಕೂಗಳತೆ ದೂರದಲ್ಲಿ ಅವರ ಸಮಾಧಿಯೂ ಇದೆ.

ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ ಸರ್.ಎಂ.ವಿ ಅವರ ಗೌರವಾರ್ಥ ಅವರ ಜನ್ಮದಿನವಾದ 15 ಸೆಪ್ಟೆಂಬರ್ ಅನ್ನು 'ಇಂಜಿನಿಯರ್‌ಗಳ ದಿನ' ವನ್ನಾಗಿ ಆಚರಿಸಲಾಗುತ್ತಿರುವುದು ನಮ್ಮ ಹೆಮ್ಮೆ. ॐ



### ಮನೆ ಮದ್ದು

ಕರಬೂಜದ ಹಣ್ಣಿನ ಬೀಜವನ್ನು ರುಬ್ಬಿ ರಸ ತೆಗೆದು ಶೋಧಿಸಿ ಕುಡಿದರೆ ಮೂತ್ರಪಿಂಡದಲ್ಲಿನ ಕಲ್ಲುಗಳು ಕರಗುತ್ತಾ ಬರುತ್ತವೆ.





# ಇಂಜಿನಿಯರ್‌ಗಳ ದಿನ

ಪ್ರತಿ ವರ್ಷ ಸೆ.15 ರಂದು ಇಂಜಿನಿಯರ್ ದಿನ ಆಚರಣೆ ಮಾಡುತ್ತಾರೆ. 1968 ರಲ್ಲಿ ಮೊದಲ ಬಾರಿಗೆ ಇಂಜಿನಿಯರ್ ದಿನ ಆಚರಣೆ ಮಾಡಲಾಯಿತು. ದೇಶ ಕಂಡ ಅಪ್ರತಿಮ ಇಂಜಿನಿಯರ್, ಭಾರತ ರತ್ನ ಸರ್. ಎಂ. ವಿಶ್ವೇಶ್ವರಯ್ಯ ಅವರ ಜನ್ಮ ದಿನದ ಸ್ಮರಣಾರ್ಥ ಪ್ರತಿ ವರ್ಷ ಸೆಪ್ಟೆಂಬರ್ 15 ರಂದು ಇಂಜಿನಿಯರ್ ದಿನವನ್ನು ಆಚರಿಸಲಾಗುತ್ತದೆ.

ಸರ್. ಎಂ. ವಿಶ್ವೇಶ್ವರಯ್ಯ ಅವರು ಸೆಪ್ಟೆಂಬರ್ 15, 1861 ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯಲ್ಲಿ ಜನಿಸಿದರು. ಮೋಕ್ಷಗುಂಡಂ ವಿಶ್ವೇಶ್ವರಯ್ಯ ಅವರ ಸಾಧನೆ ಯಾವಾಗಲು ಶಾಶ್ವತವಾಗಿರುತ್ತದೆ. ಪುಣೆಯ ಇಂಜಿನಿಯರಿಂಗ್ ಕಾಲೇಜಿನಿಂದ ಪದವಿ ಪಡೆದ ವಿಶ್ವೇಶ್ವರಯ್ಯ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳಾದ ನೀರಾವರಿ ಹಾಗೂ ಪ್ರವಾಹ ತಡೆ ಯೋಜನೆಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ.

ಪುಣೆಯ ಖಡಕ್ ವಾಸ್ಲ ಜಲಾಶಯದಲ್ಲಿ 1903 ರಲ್ಲಿ ನಿರ್ಮಿಸಿದ ಅಟೋಮ್ಯಾಟಿಕ್ ಬ್ಯಾರಿಯರ್ ವಾಟರ್ ಫ್ಲಡ್‌ಗೇಟ್‌ಗಳ ನಿರ್ಮಾಣದ ಹಿಂದೆ ವಿಶ್ವೇಶ್ವರಯ್ಯ ಅವರ ಕೊಡುಗೆ ಅಪಾರವಾಗಿದೆ. ಇದರ ನಂತರ ವಿಶ್ವೇಶ್ವರಯ್ಯ ಅವರು 1917 ರಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್ ಸ್ಥಾಪನೆಗೂ ಅವರೇ ಮುಖ್ಯ ಕಾರಣರಾಗಿದ್ದು, ಅದು ಮುಂದೆ ಯೂನಿವರ್ಸಿಟಿ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂದು ಹೆಸರು ಪಡೆಯಿತು.

ಕಾವೇರಿಗೆ ಅಡ್ಡಲಾಗಿ ಮಂಡ್ಯ ಜಿಲ್ಲೆಯಲ್ಲಿ ಕಟ್ಟಲಾದ ಕೃಷ್ಣರಾಜ ಸಾಗರ ಅಣೆಕಟ್ಟು ಸರ್. ಎಂ ವಿಶ್ವೇಶ್ವರಯ್ಯನವರ ಶ್ರಮದ ಫಲ. ಮೈಸೂರಿನಲ್ಲಿ ನಾಲ್ಕನೇ ಕೃಷ್ಣರಾಜ ಒಡೆಯರ್ ಆಳ್ವಿಕೆಯ ಕಾಲದಲ್ಲಿ ದಿವಾನರಾಗಿದ್ದ ವಿಶ್ವೇಶ್ವರಯ್ಯನವರು, ದೂರದೃಷ್ಟಿಯುಳ್ಳ ಅನೇಕ ಕೆಲಸ ಕಾರ್ಯಗಳನ್ನು ಮಾಡಿದ್ದರು.

1934 ರಲ್ಲಿ ಭಾರತದ ಆರ್ಥಿಕತೆಗೆ ಸಂಬಂಧಿಸಿದಂತೆ ಅನೇಕ ಯೋಜನೆಗಳನ್ನು ರೂಪಿಸಿದ ಸಮಿತಿಯಲ್ಲೂ ಅವರ ಪಾತ್ರವಿತ್ತು. ವಿಶ್ವೇಶ್ವರಯ್ಯ ಅವರು ಜಲಾಶಯ ನಿರ್ಮಾಣ, ತೂಗು ಸೇತುವೆ ನಿರ್ಮಾಣದಿಂದ ಹಿಡಿದು ಸಮಾಜಕ್ಕೆ ನೆರವಾಗುವಂತಹ ಅದೆಷ್ಟೋ ಉತ್ತಮ ಕಾರ್ಯಗಳನ್ನು ತಮ್ಮ ಜೀವಿತಾವಧಿಯಲ್ಲಿ ಮಾಡಿದ್ದಾರೆ.

ಜಲ ವಿದ್ಯುತ್ತ ಶಕ್ತಿ ಯೋಜನೆಯ ಹಿಂದೆಯೂ ವಿಶ್ವೇಶ್ವರಯ್ಯ ಅವರ ಪಾತ್ರ ಪ್ರಮುಖವಾಗಿತ್ತು. ಕರ್ನಾಟಕದಲ್ಲಿ ಕೃಷ್ಣ ರಾಜ ಸಾಗರ ಜಲಾಶಯ ನಿರ್ಮಿಸುವುದರಿಂದ ಹಿಡಿದು ಹೈದರಾಬಾದ್‌ನಲ್ಲಿ ಪ್ರವಾಹ ತಡೆಗಟ್ಟುವಿಕೆ ಯೋಜನೆ ರೂಪಿಸುವ ತನಕ ಸರ್. ಎಂ ವಿಶ್ವೇಶ್ವರಯ್ಯ ಅವರು ಸಾಧನೆ ಮಾಡಿದ್ದರು. ಅದಕ್ಕಾಗಿಯೇ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಸ್ಥೆಯು ಇವರನ್ನ ಭಾರತದ ಆರ್ಥಿಕ ಯೋಜನೆಯ ರೂವಾರಿ ಎಂಬರ್ಥದಲ್ಲಿ ಕರೆದಿದೆ.

ವಿಶ್ವೇಶ್ವರಯ್ಯ ಅವರ ಸಾರ್ವಜನಿಕ ಸೇವೆಯನ್ನು ನೋಡಿ ನೈಟ್ ಕಂಮಾಡರ್ ಆಫ್ ದಿ ಬ್ರಿಟಿಷ್ ಇಂಡಿಯನ್ ಎಂಪಾಯರ್ (Knight commander of the British Indian empire) ಎಂಬ ಬಿರುದನ್ನು ನೀಡಲಾಯಿತು. 1955 ರಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ಅವರಿಗೆ ಭಾರತದ ಅತ್ಯುನ್ನತ ಪ್ರಶಸ್ತಿಯಾದ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ॐ

ಸೆ 18 – ಗಣೇಶ ಚತುರ್ಥಿ
ತನ್ನಿಮಿತ್ತ ಸಕಾಲಿಕ ನುಡಿ ನಮನ



# ಗಣೇಶನ ಬಗ್ಗೆ ನಿಮಗೆಷ್ಟು ಗೊತ್ತು?



– ಡಾ. ಗುರುರಾಜ ಪೋಶೆಟ್ಟಿಹಳ್ಳಿ
ಸಂಸ್ಕೃತಿ ಚಿಂತಕರು

ಸೋನೆ ಮಳೆಯ ಪರಿಸರದಲ್ಲೀಗ ಭಕ್ತಿಯ ಕಾವು ಮತ್ತೆ ಮನೆ ಮನಕ್ಕೆ ಲಗ್ಗೆ ಇಟ್ಟಿದ್ದಾರೆ. ಗೌರಿಗಣೇಶರ ಜೋಡಿ ಬದುಕಿಗೆ ಧಾವಂತ ಆದರೂ, ಭಕ್ತಿಯ ಉಬ್ಬರಕ್ಕಿಲ್ಲ ಆತಂಕ. ಓಡುನಡಿಗೆಯ ನಗರದಲ್ಲಿ ಸಾವಧಾನದ ಪ್ರತೀಕವಾದ ಗಣೇಶನ ಕುರಿತು ಅಕ್ಷರಲಹರಿ.

ಶ್ರಾವಣದ ಮುನ್ನುಡಿಯೊಂದಿಗೆ ಪ್ರಾರಂಭವಾದ ಹಬ್ಬಗಳ ಸಾಲು ಭಾದ್ರಪದದಲ್ಲಿ ಗರಿಗೆದರಿದೆ. ಶ್ರಾವಣ ಮಾಸ ಮುಗಿಯುವ ವೇಳೆಗಾಗಲೇ ನಗರದ ಬೀದಿಗಳ ಬದಿಯಲ್ಲಿ ಕಾಣಿಸಿಕೊಂಡಿದ್ದ ಗಣೇಶ ಈಗ ಮನೆಗೆ ಬಂದಿದ್ದಾನೆ. ಬಯಲಿನ ಮಂಟಪದಲ್ಲಿ ವಿರಾಜಮಾನನಾಗಿದ್ದಾನೆ. ಗಣೇಶನ ಗಮ್ಮತ್ತೇ ಅಂತಹುದು.

ಒಂದು ಕೇರಿಗೆ ಊರಿಗೆ ನಾಡಿಗೆ ದೇಶದ ಚೌಕಟ್ಟಿಗೆ ಒಳಗಾದವನಲ್ಲ. ಆತನ ಹಾಜರಿಯ ರುಜು ಇಲ್ಲದೇ, ದೇಶ–ಕಾಲವಾದರೂ ಎಲ್ಲಿದೆ?

ಭಾರತೀಯ ಸಾಹಿತ್ಯದ ಆಚಾರ್ಯ ಕೃತಿ ಮಹಾಭಾರತದ ಲಿಪಿಕಾರ ಈ ಗಣಪ. ಹಾಸ್ಯರಸದ ಕಾಪಿರೈಟ್ ಪಡೆದು, ತನ್ನ ರೂಪು–ವ್ಯಕ್ತಿತ್ವ ಹೊಂದಿದವನು ಈ ಪಾರ್ವತಿ ಪುತ್ರ. ಈ ಗಣೇಶ ವಿದ್ಯಾಪ್ರೇರಕನ ವಿಘ್ನವಿನಾಶಕನು ವಿವೇಕದ ರೂವಾರಿಯೂ ಹೌದು.

ಈಗ ಮಾರುಕಟ್ಟೆಗಳ ತುಂಬಾ ಗೌರಿಗಣೇಶರದ್ದೇ ನೋಟ. ತವರಿನ ಬಾಗಿನ ಹೆಣ್ಮಕ್ಕಳ ಗೌರಿ ಸಂಭ್ರಮಕ್ಕೆ ಆರ್ದತೆಯ ಮೆರುಗು ಒದಗಿಸಿವೆ. ನೀರು ಉಳಿದಿರುವ ಕೆರೆಗಳು, ಅಂಗಳಗಳು ಗಣೇಶನ ಬರುವಿಕೆಯ ನಿರೀಕ್ಷೆಯಲ್ಲಿವೆ. ಗಣೇಶನಿಗೂ ಮಣ್ಣಿಗೂ ಇನ್ನಿಲ್ಲದ ನಂಟು. ಆತ ನಿಜವಾದ ಮಣ್ಣಿನ ಮಗ. ಮಣ್ಣು ಸಾಂಸ್ಕೃತಿಕ ಪ್ರಾಥಮಿಕ ಧಾತು. ಈ ಮಣ್ಣಿನ ಪುತ್ರ ಸಂಸ್ಕೃತಿಯ ರೂಪವೂ ಹೌದಲ್ಲವೆ? ಸಂಸ್ಕೃತಿಯ ಬಗ್ಗೆ ಆತಂಕ ಪಡುವ ಸಮಯದಲ್ಲಿ ಗಣೇಶನ ಹಬ್ಬ ಸಾಂಸ್ಕೃತಿಕ ಕಾರ್ಯಕ್ರಮವಾಗಿ ಮುಖ್ಯವೆನಿಸುತ್ತದೆ.

ಮಹಾರಾಷ್ಟ್ರದಲ್ಲಿ ತಿಲಕರು ಗಣೇಶೋತ್ಸವಕ್ಕೆ ನೀಡಿದ ವ್ಯಾಪಕತೆ ಈ ನಿಟ್ಟಿನಲ್ಲಿ ನೆನಪಾಗುತ್ತದೆ. ಸ್ವಾತಂತ್ರ್ಯ, ಸಂಸ್ಕೃತಿ, ಧರ್ಮಗಳ ಏಕರೂಪಿಯಾಗಿ ತಿಲಕರ ಮೂಲಕ ಗಣೇಶ ಅರಳಿದ. ಭಯೋತ್ಪಾದನೆ, ಅಸಹನೆ ಹೆಚ್ಚುತ್ತಿರುವ ಸಂದರ್ಭದಲ್ಲಿ ಏಕತೆಯ ರಾಯಭಾರಿಯಾಗಿ ಗಣೇಶ ಏಕೆ ಬಳಕೆಯಾಗಬಾರದು? ಗಣೇಶನಿಗೆ ಆ ಶಕ್ತಿ ಇದ್ದೇ ಇದೆ. ಇಲ್ಲದೇ ಇರುವುದು ತಿಲಕರು.

ಸೆಕೆಂಡುಗಳನ್ನು ರೂಪಾಯಿಗಳಲ್ಲಿ ಲೆಕ್ಕ ಹಾಕುವ ಪರಿಸ್ಥಿತಿ ನಗರಗಳಲ್ಲಿವೆ. ಇಂಥಾ ಸಂದಿಗ್ಧ ಸಂಕೀರ್ಣ ಓಡುನಡಿಗೆಯ ಸಂದರ್ಭದಲ್ಲಿ ಸಾವಧಾನದ ಇನ್ನೊಂದು ಹೆಸರಾದ ಗಣೇಶ ತನ್ನ ಪ್ರಸ್ತುತತೆ ಉಳಿಸಿ ಕೊಂಡಿರುವುದು ಸೋಜಿಗವೂ ಹೌದು, ಗಣೇಶನ ಘನತೆಗೆ ಸಾಕ್ಷ್ಯವೂ ಹೌದು. ಅನೂಚಾನವಾಗಿ ನಡೆದು ಬಂದ ಪರಂಪರೆಯಿಂದು ಕವಲುದಾರಿಯಲ್ಲಿದೆ. ಶ್ರೀಮಂತಿಕೆಯೊಂದಿಗೆ ಕೇವಲ ಡಾಂಬಿಕತನಕ್ಕೆ ಆಚರಿಸುವ ಆಚರಣೆಗಳು ಮತ್ತು ಪೂಜ್ಯ ಭಾವರಹಿತ ಪೂಜೆಗಳು, ನಿರಾಸಕ್ತಿಯಿಂದ ಮಾಡುವ ಉಪಾಸನೆಗಳು ಅರ್ಥಹೀನವೆಂದು ಬಗೆಯಲ್ಪಡುತ್ತವೆ. ಆದುದರಿಂದ ಭವ್ಯ ಪರಂಪರೆ ಅರಿತು ವಿಚಾರಗಳನ್ನು ಮುಂದಿನ ಪ್ರಬುದ್ಧ ಪೀಳಿಗೆಗೆ ಸಂವಹಿಸಬೇಕಾದ ಅಗತ್ಯವಿದೆ.

ಭಾರತೀಯ ಕಲ್ಪನೆಗಳು ಅಕ್ಷಯವಾದುದು, ಅದ್ಭುತವಾದುದು. ನಮ್ಮ ಅಸಂಖ್ಯ ದೇವತೆಗಳ ಹುಟ್ಟು ಭಾರತೀಯ ನಂಬಿಕೆಗಳ ಮೌಲ್ಯವನ್ನು ಅನುಲಕ್ಷಿಸಿ, ರೂಪಗೊಂಡಿರಬಹುದು ಎಂಬುದು ಸಂಶೋಧಕರ ಊಹೆ. ಅಂಥಾ ದೇವತೆಗಳಲ್ಲಿ ಗಣಪತಿಗೆ ಅಗ್ರಸ್ಥಾನ.

ಲಕ್ಷ್ಮಿಯೊಡನೆ ಗಣಪತಿ ಇದ್ದು, ಐಶ್ವರ್ಯ ಕೊಡುವವ ಲಕ್ಷ್ಮೀಗಣೇಶನಾಗಿದ್ದಾನೆ. ಆಯುಧಗಳನ್ನು ಹೊಂದಿದ 12 ಕೈಗಳ ಗಣೇಶ ವೀರಗಣೇಶ. ವಿಪತ್ಕಾರಕವಾದ ಎಕ್ಕದ ಬೇರಿನ ಉಚ್ಛಿಷ್ಟ ಗಣಪತಿ. ಕೊಡಲಿ ಬಿಲ್ಲು ಬಾಣಾದಿಗಳನ್ನು ಹಿಡಿದವ ಭುವನ ಗಣಪತಿ. ಹಳದಿ ವಸ್ತ್ರಗಳನ್ನು ಧರಿಸಿದವ ಪಿಂಗಳ ಗಣಪತಿ. ಐದು ಮುಖ ಸಿಂಹಾರೂಢನಾದವನು ಹೇರಂಭ ಗಣಪತಿ. ಕುಮಾರಸ್ವಾಮಿಯ ಜೊತೆಯಿರುವವನು ಸ್ಕಂಧಪ್ರಿಯ ಗಣೇಶ. ನಾಗಪಾಶ ಹಿಡಿದ ನಾಟ್ಯರೂಪಿಯಾದವನು ನರ್ತನ ಗಣೇಶ. ಸಗಣಿಯೊಡನೆ ಗರಿಕೆ ಹುಲ್ಲು ಸಿಕ್ಕಿಸಿಕೊಂಡವನು ಪಿಳ್ಳೆರಾಯ.

ಪರಬ್ರಹ್ಮಕ್ಕೆ ರೂಪವೂ ಇಲ್ಲ, ಹೆಸರೂ ಇಲ್ಲ. ಆದರೂ ಮನನ ಮಾಡಲು ಮಂತ್ರವೊಂದು ಬೇಕಷ್ಟೆ. ಹಾಗಾಗಿ ಆ ಮಹಾಶಕ್ತಿಯನ್ನು 'ಗಣಪತಿ' ಎಂದು ಅರ್ಥಪೂರ್ಣವಾಗಿ ಕರೆಯಲಾಗಿದೆ. ಇವನನ್ನು ಸಾಧಿಸುವ ಮಹಾಮಂತ್ರ 'ಓಂ ಗಂ' ಅದು ಇವನ ಮಂತ್ರ ಸ್ವರೂಪ. ಪುರಾಣಗಳಲ್ಲಿ ಬಂದುದು ಇವನ ಧ್ಯೇಯ ಸ್ವರೂಪ. ಇದೊಂದೇ ಅಕ್ಷರದಲ್ಲಿ ಸೃಷ್ಟಿಯ ರಹಸ್ಯವೆಲ್ಲಾ ಅಡಗಿದೆ.

ಯಾವ ಹಬ್ಬಕ್ಕೂ ಇಲ್ಲದ ತವಕ, ತಲ್ಲಣ, ಸಂಭ್ರಮ, ಆತಂಕ ಹೊತ್ತು ತರುವ ಏಕೈಕ ಹಬ್ಬ ಗಣಪತಿಯ ಹಬ್ಬ. ಬಂದ ಗಣಪ ಹೋದ ಗಣಪ ಎಂಬಂತಿರದೆ, ಬಂದಾಗಲೆಲ್ಲಾ ಒಂದಿಲ್ಲೊಂದು ಸುದ್ದಿ ಮಾಡುವುದರಲ್ಲೂ ಈ ಹಬ್ಬ ಒಂದು ಕೈ ಮೇಲೆ. ಸುದ್ದಿ ಎಂದರೆ ಇಂದು ಓದಿ ನಾಳೆ ಮರೆಯುವಂತಹದಲ್ಲ. ಹಲ ವರ್ಷಗಳ ಕಾಲ ನೆನೆಪಿಟ್ಟುಕೊಳ್ಳುವಂತ ಸುದ್ದಿ. ಅಷ್ಟರ ಮಟ್ಟಿಗೆ ಬಂತು ಹಬ್ಬ.

ಏನೆಲ್ಲಾ ಆತಂಕಗಳು, ಅನಾಹುತಗಳ ನಡುವೆಯೂ ಗಣಪತಿ ಹಬ್ಬ ಕೊಡುವ ಸಂಭ್ರಮ ವರ್ಣನಾತೀತ. ಎಲ್ಲಾ ಕಾಲಕ್ಕೂ ಎಲ್ಲಾ ಪರಿಸರಕ್ಕೂ ಸ್ಪಂದಿಸುವ ಏಕೈಕ ದೇವ ಈ ಗಣನಾಯಕ.

ಆದರೆ ಇಂದು ವಿಘ್ನ ವಿನಾಶಕನಿಗೆ ಇರುವಷ್ಟು ವಿಘ್ನಗಳು ಯಾವ ದೇವರಿಗೂ ಇಲ್ಲ. ಈಗ ದೇವರು ಕೂರಿಸುವು ದೆಂದರೆ ಅಷ್ಟು ಸುಲಭವಲ್ಲ. ಸಮೀಪದ ಠಾಣೆಗೆ ಹೋಗಿ ಅರ್ಜಿ ಹಾಕಬೇಕು. ಈ ಅರ್ಜಿಯನ್ನು ವಿದ್ಯುತ್ ಇಲಾಖೆ ಇತ್ಯಾದಿ ಅಧಿಕಾರಿಗಳ ತಂಡ ಪರಿಶೀಲಿಸಿ ನಂತರ ತಥಾಸ್ತು ಎನ್ನಬೇಕು.

ವಿನಾಯಕ ಬಂದು ಹೋಗುವ ಹೊತ್ತಿನಲ್ಲಿ ವಿಪತ್ತುಗಳು ಬಂದೆರಗಿದರೆ ನಾವೇ ಜವಾಬ್ದಾರರು ಎಂದು ಹೇಳಬಲ್ಲವರು ಬೇಕು– ಅಯ್ಯೋ ಬಿಡಿ, ಗಣಪತಿ ಇಡೋದಿಕ್ಕೆ ಇಷ್ಟೆಲ್ಲಾ ರಾಮಾಯಣ ಯಾಕೆ ? ಎಂಬ ಒಂದಷ್ಟು ಜನ ಗಣಪತಿ ಇಡುವ 'ರಿಸ್ಕ್' ಬೇಡಾಂತ ಕೈ ತೊಳೆದುಕೊಳ್ಳುತ್ತಾರೆ.

ಅವರು ಕೈ ತೊಳೆದುಕೊಂಡ ಪರಿಣಾಮ ಗಣಪತಿ ಮಾಡಿ ಜೀವನ ನಡೆಸುತ್ತಿದ್ದ ಒಂದಿಷ್ಟು ಕುಟುಂಬಗಳಿಗೆ ಕೈ ಕಸುಬು ಇಲ್ಲದಂತಾಗಿದೆ. ಮಾರಾಟಕ್ಕೆ ತಂದ ಗಣಪತಿಗೆ ಬಳಿದ ಬಣ್ಣದ ಬೆಲೆಯೂ ಗಿಟ್ಟದೇ ಅವರು, ಶಿವಪ್ಪ ಕಾಯೋ ತಂದೆ ಎಂದು ಹಾಡುತ್ತಿದ್ದಾರೆ. ಅಂದು ಸಮಾಜದ ಒಗ್ಗೂಡಿಕೆಗೆ ತಿಲಕರು ಆರಂಭಿಸಿದ ಗಣೇಶೋತ್ಸವ ಇಂದು ಕೋಮು ರಾಜಕೀಯ ಉದ್ದೇಶಕ್ಕೆ ಬಳಕೆಯಾಗುತ್ತಿದೆ ಎಂಬುದರಲ್ಲಿ ಎರಡನೇ ಮಾತು ಬರುವ ಸಾಧ್ಯತೆ ಕಡಿಮೆ.

ಉತ್ಸವಕ್ಕೆ ಸೇರುವ ಜನರನ್ನು ಇನ್ನೊಂದು ಚಳವಳಿಗೆ ಸಜ್ಜುಗೊಳಿಸುವ ಎಲ್ಲಾ ಅವಕಾಶಗಳೂ ನಿಚ್ಚಳವಾಗಿದೆ. ಆದರೆ ಇಂಥ ಅವಕಾಶಗಳ ಬಳಕೆ ಮಾಡಿಕೊಳ್ಳುವಷ್ಟು ಬುದ್ಧಿಮತ್ತೆಯನ್ನು ಆ ವಿನಾಯಕನು ನಮ್ಮ ನಾಯಕರಿಗೆ ನೀಡಿಲ್ಲ.

## ಗಣೇಶ–ಗಜಮುಖ

ಗಣೇಶ ಎಂದ ತಕ್ಷಣ ಮೊಟ್ಟಮೊದಲು ನಮ್ಮ ಮನಸ್ಸಿಗೆ ಗೋಚರಿಸುವ ಅಂಶ ಆನೆಯ ಮುಖ–ಸೊಂಡಿಲು. ಆನೆ ಶ್ರೇಷ್ಠತೆಯ ಪ್ರತೀಕ. ಜನ್ಮ ಜನ್ಮಾಂತರದ ಪ್ರತಿಪಾದನೆಯಲ್ಲಿ ಆನೆಯ ಜನ್ಮದ ನಂತರ ಜನ್ಮವೇ ಮನುಷ್ಯ ಜನ್ಮ ಎನ್ನುತ್ತಾರೆ.

ಭಗವಂತನ ಷೋಡಶೋಪಚಾರದಲ್ಲಿ ಗಜಾರೋಹಣ ಇದೆ; ಇಂದ್ರನ ಐರಾವತ ಆನೆ. ಬುದ್ಧನಂತಹ ದಾರ್ಶನಿಕ ರನ್ನು ಗರ್ಭದಲ್ಲಿ ಹೊತ್ತ ಯಶೋಧರೆಯ ಸ್ವಪ್ನದಲ್ಲಿ ಗರ್ಭ ಪ್ರವೇಶ ಮಾಡಿದ್ದು ಆನೆ! ಇಂದೂ ಕೂಡ ಆನೆಯ ಸೊಂಡಲಿನಿಂದ ಹಾರ ಹಾಕಿಸಿಕೊಂಡು ಮಹನೀಯರು ಮೆರವಣಿಗೆ ಹೊರದುವುದುಂಟು.

ತಮ್ಮ ಮಗುವಿನ ಕುರೂಪದಲ್ಲಿ ಅಂದವನ್ನೇ ಕಾಣುವ ಕಣ್ಣು ತಾಯಿಯದು. ಮಾತೃವಾತ್ಸಲ್ಯವೇ ಇದರ ಹಿನ್ನೆಲೆ. ಆನೆಯ ಮುಖವುಳ್ಳ ಗಣಪತಿಯ ಮೇಲೆ ಮಾತೆಯಾದ ಪಾರ್ವತಿಯ ವಾತ್ಸಲ್ಯ ಅಪಾರ. ಮನುಷ್ಯನ ಅಂದ ಚೆಂದಗಳ ಔನ್ನತ್ಯ ಸದ್ಗುಣ–ವಿದ್ಯೆಗಳಲ್ಲಿಯೇ ಹೊರತು ಮುಖ ಸೌಂದರ್ಯದಲ್ಲಲ್ಲ ಎಂಬುದು ಇದರ ಸಂದೇಶ.

ಆನೆಯ ಸೊಂಡಿಲಿನಲ್ಲಿ ಅತಿ ಸೂಕ್ಷ್ಮತೆಯನ್ನು ಗ್ರಹಿಸುವ ಸಂವೇದನಾಶೀಲ ಸಾಮರ್ಥ್ಯವನ್ನು ಪಡೆದಿರುತ್ತದೆ. ಹಾಗೆಯೇ ಮರದ ದಿಮ್ಮಿಗಳಂತಹ ಬೃಹತ್ ಗಾತ್ರವನ್ನು ಭಾರವನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲು ಆನೆಯ ಸೊಂಡಿಲು ನೆರವಾಗುತ್ತದೆ. ಶಕ್ತಿ–ಯುಕ್ತಿಪೂರ್ಣವಾದ ಈ ಅಂಶದ್ವಯವು ಜವಾಬ್ದಾರಿಯುತ ಹೊಣೆಗಾರಿಕೆಯನ್ನು ನಿರ್ವಹಿಸುವ ನಾಯಕತ್ವಕ್ಕೆ ಅತಿ ಅವಶ್ಯವಾದ ಲಕ್ಷಣವೂ ಹೌದು, ಗುಣವೂ ಹೌದು.

ಆನೆಯ ಜೀವಿವೈವಿಧ್ಯ ಸಂಕುಲದ ಅತ್ಯಂತ ಮಹತ್ವದ ಪ್ರಾಣಿ. ಕಾಡಿನ ಇತರ ಸಸ್ಯಾಹಾರಿ ಪ್ರಾಣಿಗಳಾದ ಕಾಟಿ. ಕಡವೆ, ಜಿಂಕೆ ಇತ್ಯಾದಿಗಳ ಜೀವನೋಪಾಯ ಬಹುಪಾಲು ಆನೆಯನ್ನೇ ಅವಲಂಬಿಸಿದೆ. 'ಆನೆ ತುಳಿದದ್ದೇ ಹಾದಿ' ಎಂಬುದು ಪ್ರಚಲಿತದಲ್ಲಿದೆ. ಆನೆ ಹಿಂಡು ನಡೆದು ಹೋದ ಕಾಡಿನಲ್ಲಿ ಇತರ ಶಾಖಾಹಾರಿ ಪ್ರಾಣಿಗಳು ಹಿಂಬಾಲಿಸಿ ಆಹಾರ ದೊರಕಿಸಿಕೊಳ್ಳುವಲ್ಲಿ ಪ್ರಯೋಜನ ಪಡೆಯುತ್ತವೆ. ಆನೆಗಳು ತಮ್ಮ ಲದ್ದಿಯಿಂದ ಕಾಡಿನ ಫಲವತ್ತತೆ ಹೆಚ್ಚಿಸುವಲ್ಲಿಯೂ ಕಾರಣವಾಗಿವೆ. ಹೀಗಾಗಿ ಆನೆಯನ್ನು 'ಜೀವಿ ವೈವಿಧ್ಯದ ನೆತ್ತಿಗಲ್ಲು' ಎಂದು ಕರೆಯಲಾಗಿದೆ. ಆನೆ ಸಮಾಜ ಮತ್ತು ಮಾನವ ಸಮಾಜದ ಮಧ್ಯೆ ಹಲವಾರು ವಿಷಯಗಳಲ್ಲಿ ಸಾಮ್ಯ ಕಂಡು ಬರುತ್ತದೆ. ಆನೆಯ ಹಿಂಡು 'ಮಾತೃ ಯಾಜಮಾನ್ಯ' ಎನಿಸಿದ ಹೆಚ್ಚು ಅನುಭವವುಳ್ಳ ಅತ್ಯಂತ ಹಿರಿಯ ಹೆಣ್ಣಾನೆ 'ಹೆಗ್ಗಡತಿ' ಯಿಂದ ವ್ಯವಹರಿಸಲ್ಪಡುತ್ತದೆ. ಆನೆಗಳಲ್ಲಿ ಮನುಷ್ಯ ಕುಲದಲ್ಲಿರುವಂತೆ ತೀರಾ ಹತ್ತಿರದ ಸಂಬಂಧಿಗಳೊಡನೆ ರತಿಕ್ರೀಡೆಗೈದು ಸಂತಾನಾಭಿವೃದ್ಧಿಯು ನಿಷಿದ್ಧವಾಗಿದೆ.

ಮಾನವ ಹಾಗೂ ಆನೆಯ ಮಧ್ಯೆ ಕಂಡು ಬರುವ ಹೋಲಿಕೆಯನ್ನು ದೃಢೀಕರಸಲು ಆನೆ ರುಂಡ ಹೊತ್ತ ಮಾನವ ದೇಹವುಳ್ಳ ಗಣೇಶನನ್ನು ಹುಟ್ಟು ಹಾಕಿರಬಹುದು ಎಂದು ತೋರುತ್ತದೆ. ಆನೆಯು ನಡೆಯುವ ಭಂಗಿಯೇ ಒಂದು ವಿಶೇಷ ಹಾವಭಾವಗಳಿಂದ ಬಳುಕುತ್ತ ನಡೆಯುವ ಆನೆಯ ದೇಹಭಾಶೆ ಅದಕ್ಕೆ ಭೂಷಣ. ಅದು ನೋಡುವವರಿಗೆ ಮನಮೋಹಕ. ಇಂಥಾ ಮೋಹಕ ನಡೆಯುಳ್ಳ ಸ್ತ್ರೀಯನ್ನು ಗಜಗಾಮಿನಿ ಎಂದು ಭಾವನಾತ್ಮಕವಾಗಿ ವರ್ಣಿಸುತ್ತದೆ ಕವಿ ಸಮಯ.

ಇನ್ನೊಂದು ಆಸಕ್ತಿ ಕೆರಳಿಸುವ ವಿಷಯವೆಂದರೆ ಆನೆಗಳು ನೀರು ಹತ್ತಿರವಿರುವ ಜಾಗದಲ್ಲಿ ಅಥವಾ ಅಜ್ಞಾತ ಸ್ಥಳಗಳಿಗೆ ತಮ್ಮ ಕೊನೆಯುಸಿರೆಳೆಯಲು ಹೋಗುವುದೆಂಬ ನಂಬುಗೆ ಇದೆ. ಕಾಡಿನಲ್ಲಿ ನಿಸರ್ಗವು ಶವಗಳನ್ನು ಸಾಗ ಹಾಕುವ ತನ್ನದೇ ಆದ ವಿಧಿ ವಿಧಾನಗಳನ್ನು ಹೊಂದಿದೆ ಎಂದು ಅತಿ ಕ್ಷಿಪ್ರದಲ್ಲೇ ನಡೆದು ಹೋಗುವುದು.

ಗಣೇಶನ ಹಬ್ಬವೆಂದರೆ ಕಬ್ಬಿನ ಕೋಲು ನೆನಪಾಗುತ್ತದೆ. 'ಕಬ್ಬು ಡೊಂಕಾದರೂ ಅದರ ಸಿಹಿಗೆ ಡೊಂಕಿಲ್ಲ' ಎಂದಿದ್ದಾರೆ ದಾಸರು. ಗಣಪತಿಗೆ ಅರ್ಪಿಸುವ ಅಷ್ಟ ದ್ರವ್ಯಗಳಲ್ಲಿ ಕಬ್ಬು ಇರಲೇ ಬೇಕು. ಅಪ್ಪ ಈಶ ಮದವನ್ನು ಸುಟ್ಟವನಾದರೆ, ಮಗ ಅವನನ್ನು ಸುಡದಿದ್ದರೂ ಗೆದ್ದವನು. ಗಣಪತಿ ಕಾಮ ವಿದೂರ ಬ್ರಹ್ಮಚಾರಿ; ಕಾಮನಿಗೆ ಇಕ್ಷುಚಾಪ ಎಂಬ ವಿಶೇಷಣ. ಮನೋರೂಪವನ್ನು ಇಕ್ಷುದಂಡಕ್ಕೆ ಹೋಲಿಸಲಾಗಿದೆ. ಸಿಟ್ಟು–ಸೆಡುವುಗಳಿಗೆ ಹೇಗೋ ಹಾಗೆ ಒಲುಮೆ–ನಲುಮೆಗಳಿಗೂ ಮನಸ್ಸೇ ಮೂಲ. ಕಬ್ಬಿನಂತೆ ಅದರ ಬಾಗು–ಬಳುಕು; ಗಂಟು–ನುಣುಪು.

## ನಮ್ಮ ಪ್ರೀತಿಯ ಗಣೇಶ

ಜನಾಂಗವೊಂದು ನಾಯಕ ದೈವವನ್ನು ಹೇಗೆ ಸೃಜಿಸಿಕೊಳ್ಳುತ್ತದೆ ಎಂಬುದು ಕುತೂಹಲಕಾರಿ ಪ್ರಶ್ನೆ. ತನ್ನ ಆಸೆ, ಹಂಬಲ, ಕನಸು, ಕನವರಿಕೆ, ಹಾಸ್ಯ, ಕುಚೋದ್ಯ, ಗೌರವ, ಭಕ್ತಿ.

ಆತ್ಮೀಯತೆಗೆ ಅನುರೂಪನಾದವನನ್ನು ಅದು ಹುಡುಕಿಕೊಳ್ಳುತ್ತದೆ. ಗಣೇಶ ಇಂತ ದೈವ. ಇವನು ವಿದ್ಯೆ, ಬುದ್ಧಿ ಮತ್ತು ವಿವೇಕದ ಪ್ರತೀಕ. ಸಾವಿರ ರೂಪ, ಸಾವಿರ ನಾಮ ಆತನ ವೈಶಿಷ್ಟ್ಯ. ಗಣಪತಿಯ ವಿಲಕ್ಷಣ ಆಕಾರದಷ್ಟೇ ಆತನ ಹುಟ್ಟು, ನಡವಳಿಕೆ, ಮಹಿಮೆ, ಶಕ್ತಿ, ತಿಂಡಿಪೋತತನ. ಕೋಪ, ವ್ಯಾಮೋಹ, ಕಿಲಾಡಿತನಕ್ಕೆ ಸಂಬಂಧಿಸಿ ದಂತೆ ಹತ್ತಾರು ಪುರಾಣ ಆಖ್ಯಾಯಿಕೆಗಳಿವೆ.

ಗಣಪ ಎಷ್ಟು ಹಳಬ? ಅವನ ಆಕಾರ ಹೀಗೆ ಎಂದು ಶಿಲ್ಪ ಸಂಹಿತಕಾರರಿಗೆ ಹೇಳಿಕೊಟ್ಟವರಾರು? ಏನೇನೋ ಪ್ರಮಾಣಗಳನ್ನು ತಂದು ಭಕ್ತಿ ಹುಟ್ಟಿಸಬೇಕಿಲ್ಲ. ಮೊಗೆದಷ್ಟು ಬತ್ತದ ಗಣೇಶ ಗುಟ್ಟಲ್ಲಿ ಕೆಲವನ್ನು ಹೆಕ್ಕಿ ನಿಮ್ಮ ಮುಂದಿರಿಸಿದ್ದೇವೆ.

ಈತ ಸೂರ್ಯನಷ್ಟು ತಾಪನಲ್ಲ. ದುರ್ಗೆಯಷ್ಟು ಉಗ್ರನಲ್ಲ. ಶಿವನಂತೆ ಪ್ರಳಯಕಾರಕನಲ್ಲ. ವಿಷ್ಣುವಿನಂತೆ ರಸಿಕನಲ್ಲ. ಹಾಗೆಯೇ ಈ ಬೆನಕ ಏಕದಂತ ನಮ್ಮೊಳಗೆ ಇರಬಲ್ಲ ಎಲ್ಲರ ಆತ್ಮೀಯ ದೇವರು. ಏನೇ ಕಷ್ಟ ಬಂದರೂ ಮೊದಲು ನೆನಪಾಗುತ್ತಾನೆ. ಎಲ್ಲ ವಿಘ್ನಗಳನ್ನು ನಿವಾರಿಸುತ್ತಾನೆ. ಅವನಿಗೆ ಅದ್ದೂರಿ ಹೊಗಳಿಕೆಗಳು ಬೇಕಿಲ್ಲ. ಪುಟ್ಟ ಗರಿಕೆ ಹುಲ್ಲಿನಿಂದಲೇ ಸಂಪ್ರೀತಿ ಪಡೆಯುವ, ಒಂದು ತುಂಡು ಕಬ್ಬು, ಒಂದರ್ಧ ಕೊಬ್ಬರಿ ಕೊಟ್ಟರೆ ಈ ಆನೆ ಕಿವಿಯ ದೇವರ ಪುಟ್ಟ ಕಣ್ಣುಗಳು ಸಂತೋಷದಿಂದ ಮಿನುಗಾಡುತ್ತದೆ. ಇವನನ್ನು ತುಪ್ಪದಿಂದ ತೋಯಿಸಿ, ಕಜ್ಜಾಯದಿಂದ ಮುಚ್ಚಿ, ಖುಷಿಯೋ ಖುಷಿ ಈ ಲಂಬೋದರನಿಗೆ. ಏನೇ ಮಾಡಿ, ಆದರೆ ಮೊದಲಾಗಿ ಮಾಡಿ, ಫಸ್ಟು ಗಣಪತಿಗೆ ರೆಸ್ಪೆಕ್ಟು.

ಈತ ಸಾಮಾನ್ಯ ದೇವರಲ್ಲ. ಪ್ರಪಂಚದ ಮೊದಲ ಸ್ಟೆನೋಗ್ರಾಫ಼ರ್, ವ್ಯಾಸರು ಡಿಕ್ಟೇಟ್ ಮಾಡುತ್ತಾ ಹೋದಂತೆ ಮಹಾಭಾರತ ಬರೆದವನು. ಇಂಕು ಕೈ ಕೊಟ್ಟಿತೆಂದು, ದಂತಮುರಿದು ಮುಂದುವರೆಸಿದವನು. ರಾವಣನ ಆತ್ಮಲಿಂಗ ಅಪಹರಣವನ್ನು ತಡೆದವನು. ಇವನದ್ದು ಅನಾಟಮಿಯೇ ಡಿಫ಼ರೆಂಟು. ಡ್ರೆಸ್ ಕೋಡೇ ಬೇರೆ. ಕಾಸ್ಮಟಿಕ್ ಲುಕ್ಕೇ ಸ್ಪೆಷಲ್. ಆನೆ ಮುಖ, ದೊಡ್ಡ ಹೊಟ್ಟೆ, ಇಲಿ ಮೇಲೆ ಟ್ರಾವೆಲ್ಲು, ಸ್ನೇಕ್ ಬೆಲ್ಟು, ಸಿಂಗಲ್ ಡೆಂಟು .... ಎಂಥಾ ಕಾಮ್ಬಿನೇಷನ್ನು. ಇವನು ವಿಘ್ನಕಾರಕನೂ ಹೌದು, ವಿಘ್ನ ನಿವಾರಕನೂ ಹೌದು. ಮೊದಲಾಗಿ ಕೈ ಮುಗಿದರೆ ಫ಼್ಲೇರ್ ಅಂಡ್ ಲವ್ಲೀ ಮತ್ತು ಫ಼ಾರ್ ಎವರ್. ಅದು ಹೇಗೆ ಗಣಪತಿ ಎಂಬ ಕಾನ್ಸೆಪ್ಟ್ ಇಷ್ಟೊಂದು ಸರಳವಾಯಿತೋ? ತಿಳಿದವರು ಹೇಳಬೇಕು. ಮೂಲಾಧಾರದಲ್ಲಿ ಕುಳಿತ ಕುಂಡಲಿನಿ ಶಕ್ತಿ ಸುಷುಮ್ನ ನಾಡಿಯ ಮೂಲಕ ಮೇಲೆದ್ದು, ಸಹಸ್ರಾರದ ಶಿವನೊಡನೆ ಸಂಯೋಗವಾಗುವ ಕಲ್ಪನೆಯಲ್ಲಿ ಮೂಲಾಧಾರದ ಬಾಗಿಲ ಬಳಿ ಕುಳಿತ ಗಣಪತಿಯೇ ಪ್ರಧಾನ ಎಂದು ಎಲ್ಲೋ ಓದಿದ ನೆನೆಪು. ಶಿವ–ಶಕ್ತಿ ಸಂಯೋಗಕ್ಕೆ ಗಣಪತಿ ಗೇಟ್ ಕೀಪರ್, ಪಾರ್ವತಿಯ ಸ್ನಾನ, ಗಣಪತಿಯ ಕಾವಲು, ಶಿವನ ಆಗಮನ, ತಲೆ ಕತ್ತರಿಸಿದ್ದು, ಆನೆ ತಲೆ ಮಡಗಿದ್ದು.... ಹೀಗೆಲ್ಲ ಸೃಷ್ಟಿಯಾದ ಕತೆಗಳು ಮೂಲಾಧಾರದ ಈ ಮಹಾ ಶಕ್ತಿಯ ಜನಪದ ರೂಪವಷ್ಟೇ.

## ಆತ್ಮವಿಶ್ವಾಸ ತುಂಬುವ ಗಣಪ !

ಇಲಿಯ ಚಲನಶೀಲತೆ, ಹಾವಿನ ಸೂಕ್ಷ್ಮತೆಗಳು ಒಂದಾದ ಸಮತೋಲಿತ ದೇಹಸ್ಥಿತಿ ಅವನದು. ಇದು ಗಣೇಶನ ಭೌತಿಕ ರೂಪವಾಯಿತು. ಪಾರಮಾರ್ಥಿಕವಾಗಿ ಗಣೇಶ ಹೇಗೆ ? ಎಲ್ಲರ ಕಣ್ಣಿಗೆ ಗಣೇಶನ ಹುಟ್ಟೇ ಒಂದು ಪವಾಡ. ಗಂಡು –ಹೆಣ್ಣಿನ ಸಂಯೋಗ ಇಲ್ಲದೇ ಹುಟ್ಟಿದ ಎಂಬುದೇ ಅವನ 'ಪಾರಮಾರ್ಥಿಕ ಅಸ್ತಿತ್ವಕ್ಕೆ' ಒಂದು ಪ್ರತಿಮೆ. ಈ ಭೂಮಿಯಲ್ಲಿ ದೇವನೇ ಸೃಷ್ಟಿಸಿದ ಒಂದು ಜನನ ವ್ಯವಸ್ಥೆಗೆ ಅತೀತವಾದ ಹುಟ್ಟನ್ನು ಗಣೇಶ ಕಂಡುಕೊಂಡ. ಮಣ್ಣಿನಿಂದಲೇ ಮೈ ಪಡೆದ. ಈ ಜಗತ್ತಿನ ಅನ್ನಕ್ಕೆ ಮನುಷ್ಯ ದಿನ ನಿತ್ಯ ಕಂಡು ಪಾರಮಾರ್ಥಿಕವಾಗಿ ಬೇರೆಯದೇ ರೀತಿ ಕಾಣುವ 'ದೇವ ವ್ಯವಸ್ಥೆಯ ಟೆಕ್ನಿಕ್' ಗೆ ಗಣೇಶ ಒಳ್ಳೆಯ ಉದಾಹರಣೆ.

## ಜೀವನ ಸಂಗಮ ಕ್ಷೇತ್ರ


ವಿನಾಯಕನ ಹಸ್ತದಲ್ಲಿ ಪಾಶಾಂಕುಶಗಳಿವೆ. ಅಹಂಭಾವ ಪ್ರಗತಿಗೆ ಆನೆಯಂತೆ ದೊಡ್ಡ ಅಡಚಣೆ. ಅದನ್ನು ಅಂಕುಶದಿಂದ ಹತೋಟಿಯಲ್ಲಿಡಬೇಕು. ಕೊಡಲಿಯಿಂದ ಪ್ರಾಪಂಚಿಕ ವಿಷಯಗಳಲ್ಲಿ ಇರುವ ಆಸಕ್ತಿಯನ್ನು ಖಂಡಿಸಿ, ಪಾಶದಿಂದ ಭಕ್ತರ ಮನಸ್ಸನ್ನು ಪರಮಾತ್ಮನ ಸನ್ನಿಹಕ್ಕೆ ಸೇರಿಸಿ ಚರಣಾರವಿಂದಗಳಲ್ಲಿ ಬಂಧಿಸುವನು. ಮೋದಕವು ಭಕ್ತಸಾಧಕನಿಗೆ ಅನುಗ್ರಹಿಸುವ ಆನಂದ. ವಿಶಾಲವಾದ ಕಿವಿಗಳು ಹೆಚ್ಚಾಗಿ ಕೇಳಿ ಮಿತಭಾಷಿಯಾಗು ಎನ್ನುವ ಸೂಚಕ (ಸಾರಗ್ರಾಹಿ) ಚತುರ್ಭುಜನಾಗಿರುವುದು ನಾಲ್ಕು ಪುರುಷಾರ್ಥಗಳ ದಾತನೆಂದು ಸಣ್ಣ ಕಣ್ಣುಗಳು ಅಂತರ್ಮುಖಿಯವನು ಎಂದು ಸೂಚಿಸುವುದು.

ಅಹಂಭಾವ ಆತ್ಮಜ್ಞಾನವನ್ನು ಕದಿಯುತ್ತದೆ. ಅದು ಇಲಿಯ ಸ್ವಭಾವದ್ದು. ಅದನ್ನು ಹತೋಟಿಯಲ್ಲಿಡಲು ಇಲಿಯನ್ನು ವಾಹನವನ್ನಾಗಿಟ್ಟುಕೊಂಡು ಅದರ ಮೇಲೆ ಆಸೀನನಾಗಿದ್ದಾನೆ ಗಣಪತಿ. ಯಾರು ಜ್ಞಾನ ಕರ್ಮಗಳ ಮರ್ಮವನ್ನು ಅರಿತು ಪಾಲಿಸುವರೋ ಯಾರು ಅದ್ವೈತ ಭಾವನೆ ತುಂಬಿ ಸರ್ಪ–ಇಲಿಗಳನ್ನು ಕೂಡಿಸುವರೋ, ಯಾರು ಮಹಾಶಕ್ತಿ ಸಂಪನ್ನರಾಗಿ ಆನೆಯಂತಹ ಬೃಹತ್ ಜವಾಬ್ದಾರಿ ಹೊತ್ತಿದ್ದರೂ, ಇಲಿಯೂ ಕೂಡ ಜಜ್ಜಿ ಹೋಗದಂತೆ ಬುದ್ಧಿವಂತಿಕೆಯಿಂದ ಕಾರ್ಯಶೀಲರಾಗುವರೋ ಅವರೇ ಶ್ರೇಷ್ಠ ನಾಯಕರಾಗಲು ಅರ್ಹರು. ಇದೇ ವಿನಾಯಕ ತತ್ತ್ವ.

ಇನ್ನೂ ಒಂದು ಅಂಶವನ್ನು ಕಿವಿಯ ವಿಷಯದಲ್ಲಿ ನಾವು ಗಮನಿಸದೇ ಹೋದರೆ ತಪ್ಪಾದೀತು. ಕಿವಿಯು ಯಾವತ್ತೂ ತೆರೆದುಕೊಂಡಿರುತ್ತದೆ. ಆದರೆ ಕಣ್ಣು ಮಾತ್ರ ಆಗಾಗ ಮುಚ್ಚಿಕೊಳ್ಳುತ್ತಿರುತ್ತದೆ. ಕಿವಿಯ ದ್ವಾರಗಳು ಮುಚ್ಚುವ ಮಾತೇ ಇಲ್ಲ. ಕಿವಿಗಳು ಯಾವಾಗಲೂ ಜಾಗೃತವಾಗಿರುತ್ತದೆ. ನಾವು ನಿದ್ರೆಯಲ್ಲಿದ್ದಾಗಲೂ ಸಹ ನಮ್ಮ ಮೆದುಳಿನಿಂದ ಮೊಟ್ಟ ಮೊದಲು ಸಂದೇಶ ಹೋಗುವುದು ಕಿವಿಗೆ, ನಾವು ಮಲಗಿದಾಗ ಯಾರಾದರೂ ಬಾಗಿಲು ತಟ್ಟಿದರೆ ಅಥವಾ ಕೂಗಿದರೆ ಮೊಟ್ಟಮೊದಲು ಕೇಳಿಸಿಕೊಳ್ಳುವುದು ಕಿವಿ ತಾನೇ. ನಂತರ ಕಣ್ತೆರದು ನಾವು ಯಾರು? ಕಣ್ಣಿಗಿಂತಲೂ ಕಿವಿ ಹೆಚ್ಚು ಜಾಗೃತ ಸ್ಥಾನ

## ಗಣೇಶ–Multipurpose God

ಗಣೇಶನು ನಮ್ಮ ಹತ್ತು ಹಲವು ಆಸೆಗಳನ್ನು ಈಡೇರಿಸುವಂತಹ ಏಕಮಾತ್ರ ದೇವರು. ಆತನ ಆಶೀರ್ವಾದದಿಂದ ನಮ್ಮ ಅನೇಕ ಇಷ್ಟಾರ್ಥಗಳು ಈಡೇರುತ್ತದೆ. ಯಾವ ರೀತಿ ನಾವು ಲೋಕದಲ್ಲಿ ಮತ್ತು ವ್ಯವಹಾರದಲ್ಲಿ ವೈವಿಧ್ಯಮಯವಾದ ವ್ಯಕ್ತಿತ್ವವನ್ನು ಹೊಂದಿದ, ವ್ಯಕ್ತಿಯ ವ್ಯಕ್ತಿತ್ವವನ್ನು Multifarious Personality ಎಂದು ಕೊಂಡಾಡುತ್ತೇವೆಯೋ ಅದೇ ರೀತಿ ನಮ್ಮ ಅನೇಕ ಆಸೆಗಳನ್ನು ಈಡೇರಿಸುವಂಥ ಮತ್ತು ನಮ್ಮ ಅನೇಕ ಉದ್ದೇಶಗಳನ್ನು ಪ್ರಾಪ್ತಿಸಿಕೊಡುವಂಥ ಗಣೇಶರಿಗೆ ನಾವು Multipurpose God ಎಂದು ಕರೆದರೆ ತಪ್ಪೇನಿಲ್ಲವಲ್ಲ.



## ಅಗ್ರಪೂಜೆ ಅಗ್ಗಳಿಕೆಯ ಗಿರಿಜಾಸುತ ಸಹಬಾಳ್ವೆಯ ಅನುಭೂತಿ

ಭಾದ್ರಪದ ಮಾಸದ ಶುಕ್ಲಪಕ್ಷದ ಚೌತಿಯೆಂದರೆ ಅಂತಿಂಥದಲ್ಲ! ಅದು ಹಬ್ಬಗಳ ಹಬ್ಬ. ದೇವರ ದೇವನ ಹಬ್ಬ! ನೆನಪು ಕೆಟ್ಟರೆ ವಿಘ್ನ ಒಡ್ಡಿ ಎಚ್ಚರಿಸಿ ಕಾಲಿಗೆ ಬೀಳಿಸಿ, ಏಳಿಸಿ, ಹರಸಿ, ಸಂಭ್ರಮಿಸುವವನ ಹಬ್ಬ! ನಿತ್ಯ ವಿದ್ಯೆ, ಬುದ್ಧಿ, ಸಿದ್ಧಿ, ಪ್ರಚೋದಿಸುತ್ತಾ, ಗುರುವಿನ ಗುರುವೇ ಆದವನ ಹಬ್ಬ! ವಿನಾಯಕ ವಿದ್ಯೆಯ ಅಧಿದೇವತೆ, ಪ್ರತಿಭೆಗೆ ಮೂಲ ಸೆಲೆ.

ಗಣಪತಿ ಪಾರ್ವತಿಯ ಮಗ; ಪಾರ್ವತಿಯೊಬ್ಬಳದ್ದೇ ಮಗ, ಪಾರ್ವತಿಗೆ ಶಿವ ಗಂಡ, ಅಂದರೆ ಶಿವನಿಗೆ ಅವ ಮಗನಲ್ಲ, ಗಂಡನಿಲ್ಲದೆ ಮಗು? ಗಂಡ–ಹೆಂಡತಿ ಸಂಗಮಿಸದೇ ಮಗು? ಇದು ಧರ್ಮವಿರೋಧ; ಪ್ರಕೃತಿ ಧರ್ಮ ವಿರೋಧ, ಸಾಮಾಜಿಕ ವ್ಯವಸ್ಥೆಗೆ ಅಪಚಾರ! ಆದರೆ ಪಾರ್ವತಿಗೆ ಅದು ಅರಿಯದು. ಬೇಸರ ನೀಗಿಸಲು ಬೇಕೊಂದು ಮಗು ಅನಿಸಿತು. ಒದಗಿಸಿಕೊಂಡದ್ದಾಯಿತು. ಹೆಂಗರುಳಿಗೆ ಮಕ್ಕಳ ಮುಂದೆ ಎಲ್ಲಾ ಬರಡು. ಆದರೆ ಆದ ಪರಿಣಾಮ? ಅದು ಭೀಕರ. ಶಿವನಿಂದ ಗಣಪತಿಯ ತಲೆ ಹಾರ! ಏನೆಂಥಾ ಅನಾಹುತ? ವೈಪರೀತ್ಯ.

ಗಣಪತಿ ತಾಯಿಯ ಮಗ. ಹಾಗಾಗಿ ಅವನು ತಾಯಿಗೆ ಮಾತ್ರ ನಿಷ್ಠ. ಏನು ಹೇಳಿದರೂ ಕೇಳಲೊಲ್ಲ. ಏಕೆಂದರೆ ಶಿವ ಗಣಪತಿಯ ಪಾಲಿಗೆ ಏನೂ ಅಲ್ಲ. ಶಿವನಾದರೂ ಗಣಪತಿಯ ಬಗ್ಗೆ ಉದಾರನಾಗುತ್ತಾನೆಯೇ? ' ಬಾಲಕ, ಏನೋ ಹಠ ' ಎಂದು ಸಡಿಲಾಗುತ್ತಾನೆಯೇ? ಇಲ್ಲವೇ ಇಲ್ಲ. ಕಾರಣ, ಗಣಪತಿ ಶಿವನಿಗೆ ಮಗನಲ್ಲ. ಹೀಗೆ ಕರುಳುರಿ ಇಲ್ಲದ ಕರುಳಿಗೆ ಸಂಬಂಧಿಸಿದ ಎರಡು ಜೀವಗಳು ಹೊಡೆದಾಡಿದ್ದು ಒಂದು ಪಾಠ, ವಿಜ್ಞಾನ ಬೋಧೆ, ವಿವಾಹದ ಅಗತ್ಯ, ಅದರಿಂದಾಗುವ ಸಂತತಿ ಸೌಖ್ಯದ ಬಗ್ಗೆ ಇದು ಧ್ವನಿಸುತ್ತಾ ಹೋಗುವ ನೀತಿ ವಿಶೇಷ, ವಿಸ್ಮಯ.

ಗಣಪತಿ ಎಳೆತನದಿಂದಲೇ ಸುದ್ದಿ ಮಾಡುತ್ತಾ ಬಂದವ. ಮೂರು ವರ್ಷಕ್ಕೆ ಮುನ್ನವೇ ನೂರು ವರ್ಷದರ ಬುದ್ಧಿ ತೋರಿದವ. ಅಮ್ಮನ ವಚನ ಪಾಲನೆಗಾಗಿ ಅಷ್ಟು ಚಿಕ್ಕ ವಯಸ್ಸಿನಲ್ಲೇ ತಲೆ ಕೊಡುವುದೆಂದರೇನು? ತಲೆ ಇದ್ದುದರಿಂದಲೇ ತಾನೇ ತಲೆ ಕೊಟ್ಟಿದ್ದು! ತಲೆ (ಬುದ್ಧಿ) ಯ ಕೆಲಸ ಎಲ್ಲಿಯಾದರೂ ಮುಖ್ಯವೇ, ಅನಿವಾರ್ಯವೇ. ಹಾಗೇ ಅವನೇನು ಹೃದಯವಂತಿಕೆ ಕೇಳಿಕೊಂಡಿರಲಿಲ್ಲ. ಅಮ್ಮನ ಮಾತು ನಡೆಯಿಸಿಕೊಡುವು ದೆಂದರೇನು? ಅದು ತನ್ನ ತಾಯಿಯೆಂಬ ಪೂಜ್ಯ ಭಾವದಿಂದಲೇ ತಾನೆ? ತಾಯಿ ದೇವರೆಂಬ ವಿಶ್ವಾಸದಿಂದಲೇ ತಾನೇ? ಹೀಗೆ ಹೆತ್ತವರ ಕಡೆಯ ಭಕ್ತಿ; ಕೃತಜ್ಞತೆಗಳಿಂದ ಸಂಪನ್ನವಾದ ಜೀವ– ಗಣಪತಿ ದೇವ! ಅವನ ಪೂಜೆಯ ಹಿಂದೆ ಇರುವುದು ಇದೂ ಒಂದು ಕಾರಣ; ಒತ್ತಾಸೆ. 'ತಲೆ' ಯ ಪ್ರಸ್ತಾಪ ಬಂತು ತಾನೆ ಈಗ? ತಲೆ ಓಡಿಸದ, ಕಾಯಿಸದ ವ್ಯಕ್ತಿ ಯಾರೇ ಆದರೂ, ಎಷ್ಟೇ ಹೃದಯವಂತರಾದರೂ ನಿಷ್ಪ್ರಯೋಜಕನೇ. ಹಾಗೆಯೇ ಹೃದಯಹೀನ ಬುದ್ಧಿವಂತನು.

ಇದಿಲ್ಲಿ ಶಿವನಿಂದಾದ ಪ್ರಮಾದ ಅದೇ, ಶಿವ ಅಂದುಕೊಂಡಿದ್ದು ಏನು? ಇಷ್ಟು ಚಿಕ್ಕ ಪೋರ? ಏನಿವನ ವಾದ? ಪ್ರತಿವಾದಕ್ಕೆ ಎಡೆಯಿಲ್ಲದಂತೆ ...... ಎಲಾ ಇವನಾ ...... ಇವನ ತಲೆಯೇ ಇಷ್ಟಕ್ಕೂ ಕುಮ್ಮಕ್ಕು. ಅದೇ ಹೋದರೆ ಇನ್ನೆಲ್ಲಿ ಇವನ ಉಸಾಬರಿ? ಎಂದು ಅದಕ್ಕೆ ತಲೆ ಹಾರಿಸಿಬಿಟ್ಟಿದ್ದಾಯಿತು! ಇದು ಶಿವನ ಬುದ್ಧಿ ತೀಕ್ಷ್ಣತೆ, ಹೃದಯ ಹೀನತೆ.

ನಮ್ಮಲ್ಲಿ ಹೆಚ್ಚಿನವರೂ ಹೀಗೆಯೇ. ಯಾರಾದರೂ ನಮಗೆ ಸರಿಹೋಗುವುದಿಲ್ಲ ಅಥವಾ ಯಾರಿಂದಲಾದರೂ ನಮ್ಮ ತಲೆ ಕಾಣಿಸುವುದಿಲ್ಲ – ಎಂಬ ಪರಿಸ್ಥಿತಿ ಎದುರಾದರೆ, ಅವರು ಮಾಡುವುದು ಅಂಥವರ ತಲೆ ತೆಗೆಯುದೇ, ಪೀಡೆ ತೊಲಗಿತು ಎಂದು ಭ್ರಮಿಸುವುದೇ!! ಆದರೆ ಯಾವುದೂ ಅಷ್ಟು ಸುಲಭದರಲ್ಲಿಲ್ಲ! ಇಲ್ಲೂ ಹೆಂಗರುಳಿನವರು, ತಾಯ್ತನದವರು, ಹೃದಯವಂತರು ಇರುತ್ತಾರೆ. ಅಂಥವರು ಮಧ್ಯೆ ಬಂದು ಯಾವುದಾದರೂ ರೀತಿಯಲ್ಲಿ ಅವರಿಗೆ ಮರುಜನ್ಮ ಕೊಡಿಸುತ್ತಾರೆ. ಹೊಸ ತಲೆಯೊಂದಿಗೆ ಮತ್ತೆ ವಿಜೃಂಭಿಸುವಂತೆ ಮಾಡುತ್ತಾರೆ. ರುಂಡ – ಮುಂಡ ಬೇರೆಯಾಗಿ ಹೋದ ಗಣಪನನ್ನು ಕಾರಣೀಭೂತನಾದ ಶಿವನ ನೆರವಿಂದಲೇ? ಗಜಾನನನನ್ನಾಗಿ ಮಾಡುವ ತಾಯಿ ಗೌರಿಯ ಪ್ರಕ್ರಿಯೆ ಆ ತರಹದ್ದು. ಇದೀಗ ಏನಾಯಿತು ಅಂದರೆ ಒಂದು ಕುಟುಂಬದ ನಡುವಣ ಬಂಧ, ಸಂಬಂಧ ಉಳಿದುಕೊಂಡಿದ್ದು, ಮತ್ತಷ್ಟು ಬಿಗಿಯೇ ಆಯಿತು. ಅಪ್ಪನಿಲ್ಲದ ಮಗನೆಂಬ ಅಡ್ಡ ಮಾತಿಗೆ ಆಸ್ಪದವಿಲ್ಲವಾಯಿತು, ಸಾಮರಸ್ಯ ಬಲವಾಯಿತು.

ಅಲ್ಲಾ, ಶಿವ ಇನ್ನೇನು ಮುಗಿಸುತ್ತಾನೆ ಎಂದು ಗೊತ್ತಿದ್ದೂ ಗಣಪತಿ ಪ್ರತಿಭಟಿಸದೇ ಕೂತಿದ್ದನಲ್ಲ. ಆ ಕೂಡಲೆ ತಲೆ ಕೊಟ್ಟನಲ್ಲ? ಅದು, ಅದು ಚಿಂತನಾರ್ಹ. ಶಿವ ಏನಾದರೂ ಹಿರಿಯ ವ್ಯಕ್ತಿ. ಅವನಿಗೆ ಕೈ ಮಾಡಬಾರದು ಎಂಬುದು ಗಣಪತಿಯ ನಿಯಮ, ಸಂಸ್ಕಾರ. ಗಣಪತಿ ಮುನಿದಿದ್ದರೆ ಮಾದರಿ ಆಗುವುದು ಮನನೀಯ ಮತ್ತೂ ಒಳಹೊಕ್ಕಿದರೆ ಹೊರಡುವ ಗುಟ್ಟು ಇದು, ಗಣಪತಿ ಹಾಗೊಮ್ಮೆ ಅವಿನಯ, ಔದ್ಧತ್ಯ ಪ್ರಕಟಿಸಿದ್ದರೆ, ಶಿವ ಹೊಸ ಹುಟ್ಟು ಪ್ರದಾನಿಸುತ್ತಿದ್ದನೆ? ಇಲ್ಲ, ಅದು ಸಾಧ್ಯವಾಗುತ್ತಿರಲಿಲ್ಲ.

ಗಣಪತಿ ದುರ್ಬಲ ಅಲ್ಲ. ಅವನು ಪ್ರವೇಶವಿಲ್ಲ ಎಂದದ್ದಕ್ಕೆ ಶಿವನೇ ಹೆದರಿದ್ದಾನಲ್ಲ? ಹಾಗಿದ್ದೂ ಸಾಮರ್ಥ್ಯ ಇದ್ದೂ ಬಲ ತೋರಿಸದಿರುವುದೇ, ತಿರುಗಿ ಬೀಳದಿರುವುದೇ ಯೋಗ್ಯತೆ, ಪರಿಪೂರ್ಣತೆ. ಇಲ್ಲಿ ಗಣಪತಿಯದು ಅಂಥ ಘನತೆ.

ಗಣಪತಿ ನಿಜಕ್ಕೂ ದಿನದಿನವೂ ಕುತೂಹಲ, ಒಳಗೊಳ್ಳುತ್ತ ಹೋದ ಹಾಗೆ ಯಾರಿಗಾದರೂ ಆನೆ ಬಲ!! ಮನುಷ್ಯ – ಆನೆ ಜೋಡಿಕೊಂಡ ರೀತಿಯೇ ಒಂದು ಚೇತೋಹಾರಿ ಅಧ್ಯಾಯ, ಅಧ್ಯಯನಕ್ಕೆ ನಡೆ–ನುಡಿಗೆ ಮಹಾ ದರ್ಶನ!! ಮನುಷ್ಯ, ಪ್ರಾಣಿ, ಪ್ರಕೃತಿ ಬೇಧಗಳಿಗೆ ಗಣಪತಿಯದು ಆಚರಣೆ ಮೂಲಕ ಅಸಮ್ಮತಿ! ಎಲ್ಲರೊಂದಿಗೆ ಸಹಬಾಳ್ವೆಯೇ ಸಮ್ಮತಿ ಎಂಬುದೇ ಅನುಭೂತಿ!!

ಪಂಚಭೂತಗಳನ್ನು ಪ್ರೀತಿಸುವವ ಗಣಪ. ಆತ ದೇವರು ಅನ್ನುವುದಕ್ಕಿಂತ ಮನುಕುಲಕ್ಕೆ ಸ್ಪೂರ್ತಿದಾಯಕ ಎನ್ನುವುದೇ ಸಮಂಜಸ. ಆನೆಯ ಮುಖ, ಇಲಿ, ಹಾವುಗಳಂಥ ಪ್ರಾಣಿಗಳನ್ನೂ ಒಳಗೊಳ್ಳುವ ಪ್ರಕ್ರಿಯೆಯಿಂದ ಆತ ಇಡೀ ಜಗತ್ತಿನವನಾಗಿ ಬಿಡುತ್ತಾನೆ. ಊಟ–ತಿಂಡಿ–ಪ್ರಾಣಿ, ಸಾಹಿತ್ಯ–ಸಂಗೀತ–ನಾಟ್ಯ ಎಲ್ಲವನ್ನೂ ಎಲ್ಲರನ್ನೂ ಪ್ರೀತಿಸುವವ ಆತ. ಗಣಪತಿ ನಿಷ್ಕಲ್ಮಶ ಮನುಷ್ಯನ ಸಂಕೇತ. ವಿಷವನ್ನೂ ನೀಗಿಸುವವ ಆತ. ಪ್ರೀತಿಯಿಂದ ಎಲ್ಲವನ್ನೂ ಗೆಲ್ಲುವವ. ಎಂಥ ವಿಷದ ಹಾವು ಕೂಡ ಪ್ರೀತಿಯ ಸಾಮಿಪ್ಯದಿಂದ ವಿಷ ಕಕ್ಕುವುದಿಲ್ಲ ಎನ್ನುವುದನ್ನು ಹಾವನ್ನು ತನ್ನ ಪ್ರೀತಿಯ ತೆಕ್ಕೆಗೆ ತೆಗೆದುಕೊಳ್ಳುವ ಮೂಲಕ ತೋರಿಸಿಕೊಟ್ಟವ. ಇಲಿಯಲ್ಲೂ ಅವನಿಗೆ ಪ್ರೀತಿ.


## ಆತ್ಮವಿಶ್ವಾಸದ ಪ್ರತೀಕ ವಿನಾಯಕ

ಅವನದು ಆನೆಯ ಮುಖ, ಮೊರದಗಲದ ಕಿವಿ, ಸಣ್ಣ ಕಣ್ಣು, ಮುರಿದ ಹಲ್ಲು! ಅವನದು ಡೊಳ್ಳು ಹೊಟ್ಟೆ ಸಿಡಿಯದಂತೆ ಬಿಗಿದ ಹಾವು, ದೊಡ್ಡ ದೇಹಕ್ಕೆ ಸಣ್ಣ ಇಲಿಯ ವಾಹನ!

ಏನೆಲ್ಲಾ ವಿಕೃತಿಗಳನ್ನು ಊಹಿಸಿಕೊಳ್ಳಬಹುದೋ, ಅಷ್ಟೆಲ್ಲ ಅಪಸವ್ಯಗಳು ಅವನ ದೇಹದಲ್ಲಿದೆ. ಅವನ ಹೆಸರು ಗಣೇಶ, ಗಣಪತಿ. ಹಾಗಂತ, ಅವನು ನೋಡೋಕೆ ಚೆನ್ನಾಗಿಲ್ಲ ಎಂದು ಯಾರೂ ದೂರ ಮಾಡಿಲ್ಲ. ಜಗತ್ತಿನ ಎಲ್ಲಾ ದೇವರ ಪೈಕಿ, ಎಲ್ಲರ ಪ್ರೀತಿ ಪಾತ್ರ. ಎಲ್ಲರೂ ಮೊದಲೊಂದಿಸುವ ದೇವರು ಅವನು. ಅಪ್ಪನ ಸಿಟ್ಟಿಗೆ ತಲೆಯನ್ನೇ ಕಳೆದುಕೊಂಡು, ಆನೆಯ ಶಿರಧಾರಿಯಾದರೂ ಅವನು ಅಳುಕಲಿಲ್ಲ. ಬೇಸರ ಮಾಡಿಕೊಳ್ಳಲಿಲ್ಲ. ಜಗತ್ತು ಕೂಡ ಅವನನ್ನು ಛೇಡಿಸಲಿಲ್ಲ. ಮುಖ ಚೆನ್ನಾಗಿಲ್ಲ ಎಂದು ಪ್ರೀತಿಸುವುದನ್ನು ಬಿಡಲಿಲ್ಲ. ದೊಡ್ಡ ಹೊಟ್ಟೆಯವನೆಂದು ತಮಾಷೆ ಮಾಡಲಿಲ್ಲ. ಮಾಡಿದರೂ ಅದನ್ನೆಲ್ಲಾ ಗಣೇಶ ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ.

ಗಣೇಶನಿಗೆ ಗೊತ್ತಿತ್ತು. ತನ್ನ ಶಕ್ತಿ ಇರುವುದು ಹೊರಗಡೆ ಕಾಣುವ ರೂಪದಲ್ಲಲ್ಲ. ತನ್ನೊಳಗಿನ ಅಂತಃಶಕ್ತಿಯಲ್ಲಿ. ಉಳಿದವರಿಗೂ ಅರ್ಥವಾಗಿತ್ತು. ಗಣೇಶನ ರೂಪಕ್ಕೂ ಅವನ ಶಕ್ತಿಗೂ ಅಜಗಜಾಂತರವಿದೆ ಅಂತ. ನನ್ನ ಮುಖ ಚೆನ್ನಾಗಿಲ್ಲ, ನನ್ನ ಹಲ್ಲು ಉಬ್ಬಾಗಿದೆ, ಕಣ್ಣುಗಳಲ್ಲಿ ಆಕರ್ಷಣೆ ಇಲ್ಲ, ನಾನು ತುಂಬಾ ಕಪ್ಪು, ನನ್ನ ಕಾಲುಗಳು ಉಳಿದವರಂತೆ ನೆಟ್ಟಗಿಲ್ಲ, ನನ್ನ ನಡಿಗೆ ಅಟ್ರಾಕ್ಟಿವ್ ಅಲ್ಲ. ನನ್ನ ಹೊಟ್ಟೆ ದೊಡ್ಡದಾಗಿದೆ. ನನ್ನ ಬೆನ್ನು ಗೂನಾಗಿದೆ – ಮೊದಲಾದ ದೈಹಿಕ ಸಮಸ್ಯೆಗಳಿಂದ ನೋವು ಅನುಭವಿಸುತ್ತಿರುವ ಮಂದಿ ಉಳಿದವರ ಮುಂದೆ ತಮ್ಮನ್ನು ತೋರಿಸಿಕೊಳ್ಳಲು ಮುಜುಗರ ಪಡುವ ಜನರಿಗೆ ಗಣೇಶ ಒಂದು ಅದ್ಭುತ ಆತ್ಮವಿಶ್ವಾಸದ ಟಾನಿಕ್.

ಸಣ್ಣಪುಟ್ಟ ಸೋಲುಗಳಿಂದ ಕಂಗೆಟ್ಟವರು ನನ್ನಿಂದ ಏನೂ ಮಾಡಲು ಸಾಧ್ಯವಿಲ್ಲ ಎಂದು ಹತಾಷೆ ಅನುಭವಿಸುತ್ತಿರುವವರು ಗಣೇಶನಿಂದ ಕಲಿಯಬಹುದಾದ ಪಾಠಗಳು ಸಾಕಷ್ಟಿವೆ. ಯಾರು ಬೇಕಾದರೂ ಏನನ್ನಾದರೂ ಸಾಧಿಸಬಹುದು, ಅದಕ್ಕೆ ಬೇಕಾಗಿರುವುದು ಛಲ ಎನ್ನುವ ಪಾಠ ಗಣೇಶನಲ್ಲಿದೆ.



## ನೂರು ಭಾವನೆಗಳ ಪ್ರತೀಕ, ಸಾಸಿರ ಕಲ್ಪನೆಗಳ ಸಂಕೇತ

ಮುಸಲಧಾರೆಗೆ ಜನಜೀವನ ತತ್ತರಿಸುತ್ತಿರುವಾಗಲೇ ' ಗಣಪ ' ತನ್ನ ಎಂದಿನ ಸಂಭ್ರಮದೊಂದಿಗೆ ಮೇಲೆದ್ದು ಕುಳಿತಿದ್ದಾನೆ. ಸಂಭ್ರಮೋತ್ಸಾಹಗಳೊಂದಿಗೆ ಅಬ್ಬರಿಸಿಕೊಂಡೇ ಬರುವ ಗಣೇಶ ಚೈತನ್ಯದ ಅಭಿವ್ಯಕ್ತಿ ಮಾತ್ರವಲ್ಲ. ಎಲ್ಲಾ ಜನ ಸಮುದಾಯದ ಸ್ಫೂರ್ತಿಯ ಅಧಿದೇವತೆ.

ಮಳೆ ಇಳೆಯನ್ನು ತಂಪಾಗಿಸಿದೆ. ತಂಪಾದ ವಾತಾವರಣ ಹಬ್ಬಕ್ಕೆ ಹೆಚ್ಚು ಪ್ರೇರಕವಾಗುತ್ತದೆ. ಬದುಕಿನ ಬವಣೆ ಗಳೇನೇ ಇರಲಿ, ಹೀಗೊಂದು ಹಬ್ಬಕ್ಕೆ ಜನ ಸಿದ್ಧರಾಗೇಬಿಡಬೇಕೆಂದು ಅಂದುಕೊಳ್ಳುತ್ತಿರುವಾಗಲೇ 'ಗಣೇಶ' ಬೀದಿ ಬೀದಿಗಳಲ್ಲಿ ಗಲ್ಲಿ ಗಲ್ಲಿಗಳಲ್ಲಿ ಪ್ರತ್ಯಕ್ಷವಾಗುತ್ತಿದ್ದಾನೆ.

ಆಷಾಢ ಮುಗಿದು ಶ್ರಾವಣಕ್ಕೆ ಕಾಲಿಡುವಾಗಲೇ ಹಬ್ಬಗಳು ಮೈಮನದ ತುಂಬೆಲ್ಲಾ ಆವರಿಸತೊಡಗುತ್ತವೆ. ಶ್ರಾವಣದಲ್ಲಿ ಬರುವ ' ವರಮಹಾಲಕ್ಷ್ಮಿ ' ಆಚರಣೆಗೆ ಕೆಲವು ಭಾಗದ ಜನರು ಅಷ್ಟೇನೂ ಸ್ಪಂದಿಸುವುದಿಲ್ಲ ವಾದ್ದರಿಂದ ಭಾದ್ರಪದದ 'ಗೌರಿ' ಗೆ ಹೆಚ್ಚಿನ ಪ್ರಾಮುಖ್ಯತೆ. 'ಗೌರಿ' ಯ ಕಲ್ಪನೆ ಒಂದು ರೀತಿಯಲ್ಲಿ 'ಮಳೆ ಮತ್ತು ತಂಪು ' ಹವೆಯ ಕಲ್ಪನೆಯಾಗಿದೆ. ಸಾಂಪ್ರದಾಯಿಕ ಸೊಬಗಿನ ಕ್ಷಣಗಳಲ್ಲಿ ಆಹ್ಲಾದಕ್ಕೆ ಒತ್ತುಕೊಟ್ಟು ಉದ್ಭವಿಸುವ ಗಣೇಶ ಮಾತ್ರ ಭಕ್ತಿ ಮತ್ತು ಅಬ್ಬರ, ಎರಡರ ಪ್ರತೀಕವಾಗುತ್ತಾನೆ.

'ಗಣೇಶ' ಎಂದೂ ಒಂಟಿಯಾಗಿರಲಾರ, ಏಕೆಂದರೆ ಆತ ಗಣಗಳಿಗೆ ನಾಯಕ. 'ನಾಯಕತ್ವ' ದ ರೂವಾರಿ ಯಾಗಿ, ದೇವರುಗಳ 'ಅಧಿನಾಯಕ' ನಾಗಿ ಬರುವ ಗಣೇಶನನ್ನು ಒಂದು ನಿರ್ದಿಷ್ಟ ವ್ಯಾಪ್ತಿಗೆ ಒಳಪಡಿಸುವುದು ಕಷ್ಟ. ಗಣೇಶ ಹುಟ್ಟಿಸುವ 'ಪ್ರೀತಿ ಮತ್ತು ಉತ್ಸಾಹ' ಮಾತ್ರ 'ಮಾನವ ಬದುಕಿನ ಮೌಲ್ಯ' ಗಳಲ್ಲೇ ಅತಿ ಹೆಚ್ಚು ತೂಕವಾದವುಗಳು.

ಸಮಾನತೆ, ಭ್ರಾತೃತ್ವ ಎಲ್ಲಾ ಬರೀ ಮಾತಿನ ಬೊಗಳೆಯಲ್ಲ. ಅದನ್ನು ಸಾಧಿಸಿ ತೋರಿಸಬಹುದು ಎಂಬುದಕ್ಕೆ 'ಗಣೇಶನ ಉತ್ಸವ' ಕ್ಕಿಂತ ಬೇರೆ ಉದಾಹರಣೆ ಇಲ್ಲ. ಶ್ರದ್ಧೆ, ಭಕ್ತಿಯೊಂದಿಗೆ 'ಮನರಂಜನೆ' ಸಾಧ್ಯವಾಗುವುದು ಗಣೇಶನ ಹಬ್ಬದಲ್ಲೇ ಹೆಚ್ಚು. ಹೇಗೆಂದರೆ ಗಣೇಶ ತಾನು ಕುಳಿತಿರುವಲ್ಲೇ ಸುಮ್ಮನೆ ಕೂರುವುದಿಲ್ಲ. ಅಲ್ಲಿ ಚಿಣ್ಣರು, ಹುಡುಗರು, ಯುವಕರು ಎಲ್ಲರೂ ತಮ್ಮ 'ಪ್ರತಿಭಾ ಕೌಶಲ್ಯ' ವನ್ನು ಪ್ರದರ್ಶಿಸು ತ್ತಾರೆ. 'ಭಕ್ತಿ' ಗೆ ಕೂಡ ಒಂದು ಚಳುವಳಿಯ ರೂಪ ಬರುತ್ತದೆ ಎಂದಾದರೆ, ಅದೂ ಕೂಡ ಗಣೇಶನಿಂದಲೇ ಎಂದರೆ ಅತಿಶಯೋಕ್ತಿಯೇನೂ ಅಲ್ಲ!

### ಪ್ರತೀಕ – ಪ್ರತಿಮಾ

ಸಂಕೇತವೇ ಪ್ರತೀಕ. ಅದೇ ಪ್ರತಿಮೆಯಾಗಿ ರೂಪುಗೊಳ್ಳುತ್ತದೆ. ಚಂಚಲ ಚಿತ್ತಕ್ಕೆ ಆಧಾರ / ಆಕಾರ ಕೊಡುತ್ತದೆ. ಗಣಪತಿಯ ಸ್ವರೂಪ – ದಿವ್ಯ ದೃಷ್ಟಿ ಅನುಭಾವದ ಫಲ. ಅದಕ್ಕೆ ಸಾಧನೆಯೂ ಬೇಕು. ನಂಬಿಕೆಯಂತೂ ಇರಲೇಬೇಕು.

ಗಣಪತಿಯ ನಾಲ್ಕು ಕೈಗಳು ಚತುರ್ವಿಧ ಪುರುಷಾರ್ಥ ಪ್ರತೀಕ (ಧರ್ಮ–ಅರ್ಥ–ಕಾಮ–ಮೋಕ್ಷ). ಎರಡು ದೊಡ್ಡ ಕಿವಿಗಳು ಸೂಕ್ಷ್ಮಾತಿಸೂಕ್ಷ್ಮ ಸಂವೇದನೆಗಳನ್ನು ಕೇಳಲು ಸಮರ್ಥವಿವೆ. ಏಕದಂತ ಉನ್ನತ ಸ್ತರಗಳಿಗೆ ಆರೋಹಣಗೈಯುವ ಪ್ರತೀಕ.

ಗಣಪತಿ ತನ್ನ ಮಹೋದರದ ಮೇಲೆ ಸರ್ಪವನ್ನು ಕಟ್ಟಿಕೊಂಡಿರುವುದು ಉದರ ಮೇಲಿನ ನಿಯಂತ್ರಣವನ್ನು ಸೂಚಿಸುವ ವಿಶೇಷಣ. ಹಾವು ವಾತನಾಶನ. ಇದರಿಂದ ಹೊಟ್ಟೆಗೆ ಎಷ್ಟೇ ತಿಂದರೂ, ಏಕಾದಶಿ ಉಪವಾಸದಂತಹ ನಿಯಂತ್ರಣ ಅಗತ್ಯ.

ಸಹಜಾಸನದಲ್ಲಿ ಕೂತಾಗ ಕಾಣುವ ಅವನ ಕಾಲುಗಳೇ ಪ್ರಕೃತಿ–ಪುರುಷ ಜೀವನದಲ್ಲಿ ಸಮವಾಗಿರಬೇಕು. ಲಯಬದ್ಧ ಹೆಜ್ಜೆ ಇಡಬೇಕು ಎಂಬುದರ ಸಂಕೇತ.

ದೊಡ್ಡ (ಉದ್ದ) ದಾದ ಮೂಗು ಪ್ರಭುತ್ವದ ಲಕ್ಷಣವೆಂದು ಹೇಳುತ್ತಾರೆ. ಇದು ಪ್ರಜ್ಞೆ, ವಿವೇಕದ ಪ್ರತೀಕವೂ ಹೌದು. ಏಕೆಂದರೆ ಮೂಗಿನಿಂದಲೇ ನಾವು ಸೇವಿಸುವ ಪದಾರ್ಥಗಳ ಗಂಧವನ್ನು ತಿಳಿದುಕೊಳ್ಳುತ್ತೇವೆ ಮತ್ತು ದುರ್ಗಂಧ ಬಂದರೆ ಅವುಗಳನ್ನು ತ್ಯಜಿಸುತ್ತೇವೆ. ಸುಗಂಧ ಬಂದರೆ ಸ್ವೀಕರಿಸುತ್ತೇವೆ. ಲೋಕನಾಯಕನಾದವನು ಯಾರು ಸಜ್ಜನರು ಮತ್ತು ಯಾರು ದುರ್ಜನರು ಎಂಬುದನ್ನು ತಿಳಿದುಕೊಳ್ಳುವ ಸಾಮರ್ಥ್ಯ ಇರಬೇಕು.

ನಮ್ಮನ್ನು ಮುಂದಾಳು (Leader) ವನ್ನಾಗಿ ಮಾಡುವಲ್ಲಿ ಗಣೇಶನ ಪ್ರೇರಣೆ ಮತ್ತು ಸ್ಫೂರ್ತಿಗಳು ಅನಿವಾರ್ಯ.

ಗಣೇಶನಿಗೆ ಪ್ರಾಣಿ ತಲೆ ಹಾಗೂ ಮನುಷ್ಯ ದೇಹವಿರುವಲ್ಲಿ ಒಂದು ತಾತ್ವಿಕ ಅರ್ಥ ತುಂಬಿಕೊಂಡಿದೆ. ಗಣೇಶ, ಮನುಷ್ಯ (?) ದೇಹ ಹಾಗೂ ಪ್ರಾಣಿ ತಲೆಯನ್ನು ಹೊಂದಿರುವ ಮೂಲಕ ಒಂದು ಅರ್ಥಗರ್ಭಿತ ಪಾಠವನ್ನು ಈ ಪ್ರಪಂಚಕ್ಕೆ ಹೇಳುವಂತಿದೆ. ತನ್ನ ವಿಲಕ್ಷಣ ಆಕಾರದ ಮೂಲಕ ಆತ ಈ ಮನುಕುಲಕ್ಕೆ ಒಂದು ನೈಜ ಸತ್ಯವನ್ನು ಹೇಳುತ್ತಲಿದ್ದಾನೆ.

ಆನೆಯ ತಲೆ ಎಲ್ಲಕ್ಕೂ ದೊಡ್ಡ ತಲೆ. ಚುರುಕಾದ ಜ್ಞಾನೇಂದ್ರಿಯದ ಸಂಕೇತ. ಅದರ ಜೊತೆ ಪ್ರಧಾನ ಕರ್ಮೇಂದ್ರಿಯವಾದ ಸೊಂಡಿಲು ಇದೆ. ಈ ಆನೆಗೆ ಒಂದೇ ದಂತ. ಅಂದರೆ ದ್ವೈತವಿಲ್ಲ. ಎಲ್ಲರಲ್ಲೂ ಸಮಭಾವ. ಮನುಷ್ಯನ ದೇಹಕ್ಕೆ ಆನೆಯ ತಲೆಯನ್ನು ಜೋಡಿಸಿರುವುದೇಕೆಂದರೆ, ಅಬೇಧ ಸಾಧಕತ್ವಕ್ಕೆ, ಸಮನ್ವಯ ಕಾಯಕತ್ವಕ್ಕೆ ಸಂಕೇತ. ವಕ್ರತುಂಡ-ಓಂಕಾರಕ್ಕೆ ಪ್ರತೀಕ. ಲಂಬೋದರವು ಬ್ರಹ್ಮಾಂಡದ ಸಂಕೇತ-ಆಕಾಶ ತತ್ವ ಸೂಚಕ.

ಪಾರ್ವತಿ ತನ್ನ ದೇಹದ ಕೊಳೆ, ಬೆವರಿನಿಂದ ಮೂರ್ತಿಯೊಂದನ್ನು ರೂಪಿಸಿದಳು ಎಂಬ ಪುರಾಣ ಪ್ರಸಂಗ ವಿಸ್ಮಯಕರವಾಗಿದೆ. ಬೆವರು, ಕೊಳೆ, ಶ್ರಮ ಸಂಸ್ಕೃತಿಯನ್ನು ಬಿಂಬಿಸುತ್ತದೆ.

ಹೀಗೆ ನಿರಪೇಕ್ಷವಾದ ಸಂತೃಪ್ತನಿಗೆ ಮೋದಕ ಎಂದರೆ ಬದುಕಿನ ಸವಿ ಇದ್ದುದರಲ್ಲಿ ಸಂತೃಪ್ತಿ ಉತ್ತಮ-ಆರೋಗ್ಯಕರ ಜೀವನದ ಆದರ್ಶ. ಇವನ್ನು ಸರಿಯಾಗಿ ಅರ್ಥ ಮಾಡಿಕೊಂಡು ಆಚರಣೆಗೆ ತರುವ ಬುದ್ಧಿಯನ್ನು ಅವನೇ ನಮಗೆಲ್ಲಾ ಕರುಣಿಸಲಿ.

ಪುರಾತನ ಕಾಲದಲ್ಲಿ ಬೇಸಾಯಗಾರರು ತಮ್ಮ ರಕ್ಷಕ ದೇವತೆ ಎಂದು ಗಣೇಶನನ್ನು ಪೂಜಿಸುತ್ತಿದ್ದರು. ಕೃಷಿಕರಿಗೆ ಯಾವಾಗಲೂ ಬೆಳೆಯ ರಕ್ಷಣೆಯ ಚಿಂತೆ. ಆ ಕಾಲದಲ್ಲಿ ಬೆಳೆಗೆ ಕಾಡಾನೆಗಳ ಉಪದ್ರವ ಹೆಚ್ಚು. ಆದ್ದರಿಂದ ಗಜಮುಖ ದೇವತೆಯನ್ನು ಪೂಜಿಸಿದರೆ, ಆನೆಗಳ ಉಪಟಳ ಪರಿಹಾರವಾಗುವುದೆಂದು ಹಿಂದಿನ ಜನರು ನಂಬಿದ್ದರು. ಮಣ್ಣಿನಿಂದ ಗಣೇಶನ ಜನ್ಮ. ಇಲಿಯೆಂದರೆ ಮಣ್ಣಿನಲ್ಲಿ ವಾಸಿಸುವ ಪ್ರಾಣಿಯನ್ನು ವಾಹನ ಮಾಡಿಕೊಂಡು ವಿಘ್ನೇಶ್ವರನು ಸಂಚರಿಸುತ್ತಾನೆ. ಈ ಪರಿ ಗಣೇಶನಿಗೂ ಪೃಥ್ವಿ ತತ್ವಕ್ಕೂ ಬಹು ನಿಕಟ ಸಂಬಂಧವಿರುವುದರಿಂದ, ಕೃಷಿಕರೇ ಈ ದೇವತೆಯನ್ನು ಪೂಜಿಸುವ ರೂಢಿ ಅನಾದಿ ಕಾಲದಿಂದ ಸಾರ್ವತ್ರಿಕ ವಾಗಿದೆ. ಬೆಳೆಯ ರಕ್ಷಣೆಗೆ ಈಗಲೂ ಕೃಷಿಕರು ಗಣಪತಿ ದೇವರಿಗೆ ಹರಕೆ ಹೇಳಿಕೊಳ್ಳುವುದು ಪ್ರಚಲಿತವಿದೆ.

ಮನುಷ್ಯ ತನ್ನ ಉಳಿವಿಗಾಗಿ ಬೇಟೆಯನ್ನು ಆಶ್ರಯಿಸಿದ ಕಾಲದಲ್ಲಿ ತನ್ನ ಬದುಕಿಗೆ ಆಸರೆಯಾದ ಕಲ್ಲುಗಳ ಬಗ್ಗೆ ವಿಶೇಷ ಗೌರವ, ಆಕರ್ಷಣೆ ಬೆಳೆಸಿಕೊಂಡ. ಇದು ಅಂತಿಮವಾಗಿ ಪೂಜಾರ್ಹವಾಯಿತು. ಬೆಣಚುಕಲ್ಲನ್ನು 'ಬೆನಕ' ಎಂದು ಪೂಜಿಸುವ ಪರಿಪಾಠ ಇಂದಿಗೂ ಬಳಕೆಯಲ್ಲಿದೆ. ಬೇಟೆಯಿಂದ ಪಶುಪಾಲನೆಗೆ ಸ್ಥಿತ್ಯಂತರಗೊಂಡ ಸಂದರ್ಭದಲ್ಲಿ ಸಾಕುಪ್ರಾಣಿಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಸಿಕ್ಕಿತು. ಇದರೊಂದಿಗೆ ಕೃಷಿ ಸಂಸ್ಕೃತಿ ನೆಲೆಯೂರಿದಾಗ ಬೆನಕ 'ಪಿಳ್ಳೆರಾಯ' ನಾಗಿ ರೂಪಾಂತರಗೊಂಡ. ಸಗಣಿ ಮತ್ತು ಗರಿಕೆ ಎರಡೂ ಜೋಡಿಯಾಗಿ ದೈವಪಟ್ಟ ಪಡೆದವು. ಗೌರಿ ಕೃಷಿದೇವತೆ. ಆಕೆಯ ಮಗ ಗಣಪತಿ ಸಗಣಿ ಮಗ. ತಾಯಿ ಮಗನಲ್ಲಿ ಎಂಥ ಅನುಬಂಧ: ಬೇಟೆ, ಪಶುಪಾಲನೆ ಹಾಗೂ ಕೃಷಿಯಂತಹ ಶ್ರಮಸಂಸ್ಕೃತಿಯ ಪಳೆಯುಳಿಕೆಯಾಗಿ ಬೆಣಚುಕಲ್ಲು, ಸಗಣಿ ಮತ್ತು ಗರಿಕೆ, ಇದು ಬೆನಕನಾಗಿ ಅಗ್ರಪೂಜೆಗೆ ಮಾನ್ಯವಾಗಿದೆ.

ಅಂಗಾಂಗ ರಚನೆಯಲ್ಲಿಯೂ ಗಣಪ ಕೃಷಿಸಾಧನಗಳನ್ನು ಹೋಲುತ್ತದೆ. ಅಗಲವಾದ ಎರಡು ಕಿವಿಗಳು, ಕಸಕಡ್ಡಿಗಳನ್ನು ತೂರುವ, ಕೇರುವ ಮೊರಗಳಂತಿದ್ದರೆ, ಸೊಂಡಿಲು ನೀರೆತ್ತಲು ಬಳಸುವ ಚರ್ಮದ ಕಪಿಲೆ ಬಾನೆಯನ್ನು ಹೋಲುತ್ತದೆ. ಉಬ್ಬಿದ ಹೊಟ್ಟೆ ಧಾನ್ಯ ಸಂಗ್ರಹಣೆಯ ವಾಡೆಯಂತೆ, ಎರಡು ಕಾಲುಗಳು ಕಾಳು ಕಡ್ಡಿಯನ್ನು ಕುಟ್ಟಲು ಬಳಸುವ ಒನಕೆ ಎಂದು ಕೃಷಿ ಗಣಪನನ್ನು ಬಣ್ಣಿಸುತ್ತಾರೆ.

ಗಣಪತಿಯು ಆನಂದಮಯ, ಪರಬ್ರಹ್ಮಸ್ವರೂಪಿ ಎಂದು ಹೇಳಿರುವುದು ಅವನ ವಿಸ್ತೃತ ವಿಶ್ವರೂಪಕ್ಕೆ ಮುನ್ನುಡಿ. ಆತ ಅಗಜಾನನ ಪದ್ಮಾರ್ಕಂ ಎಂದರೆ ಪಾರ್ವತಿಯ ಮುಖ ಕಮಲವನ್ನು ಅರಳಿಸುವ ಸೂರ್ಯ. ಅಂಥವನನ್ನು ನಂಬಿದವರ ಮುಖವೇನು, ಮೈಮನಸ್ಸು ಅರಳದೇ ಇರಬಹುದೇ?

ಗಣಪತಿ ಅಂದರೆ ಸೃಷ್ಟಿಯ ಮಹಾ ಸಂಕೇತ. ನೂರು ಭಾವನೆ, ಸಾಸಿರ ಕಲ್ಪನೆಗಳಿಗೆ ಪ್ರಚೋದಕ. ಹಿಂದೂ ಸಂಸ್ಕೃತಿ, ತತ್ವಗಳ ಸಾಮೃದ್ಧಿಕ ಪ್ರತೀಕ. ಜೈನ, ಬೌದ್ಧ ಧರ್ಮ ಹಾಗೂ ಶೈವ, ವೈಷ್ಣವ, ಶಾಕ್ತ ಪಂಥಗಳಲ್ಲೂ ಪ್ರಭಾವಿತ. ಕ್ರೈಸ್ತ, ಮುಸ್ಲಿಂ ಬಾಂಧವರೂ ಮೆಚ್ಚುವ ಮಹಾಮಾನ್ವಿತ. ಮೇಲು-ಕೀಳು, ಬಡವ-ಬಲ್ಲಿದರೆಂಬ ಬೇಧಭಾವವಿರದೆ, ಭಕ್ತಕೋಟಿಯ ಹೃದಯ ರಂಗಸ್ಥಳದಲ್ಲಿ ಪ್ರೀತಿ, ಭಕ್ತಿಯ ರಸಾನಂದದ ದಿಗಿಣ ಹಾಕುವ ಸುಸಂಕೃತ ಸಂಭಾವಿತ.

ಗಣಪತಿಯ ನಾಮ ಬೀಜಾಕ್ಷರವೂ 'ಗ' ಎಂಬ ಅಕ್ಷರವಾಗಿದ್ದು, ಗಣಪತಿಯು ಗುರುದೇವತೆಯ ಸ್ಥಾನದಲ್ಲಿರುವ ನೆಂದು ನಾವು ಗುರುತಿಸಬಹುದಾದುದರಿಂದ, ಬ್ರಹ್ಮಾಂಡದಲ್ಲಿ ಗುರುತ್ವಾಕರ್ಷಣೆಯನ್ನು ಪಡೆದ ಮೇರು ಮಹಿಮಾ ಸಂಪನ್ನ ದೇವ ಎಂದರೆ ಅತಿಶಯದ ಮಾತಲ್ಲ.

ಮಾರುತಿ ವರ್ಸಸ್ ಗಣಪತಿ

ಇಪ್ಪತ್ತೊಂದರ ಬಗ್ಗೆ ಕೆಲವು ಮಾತು:

ಗಜಾನನನಿಗೆ ಪ್ರಿಯವಾದ ಸಂಖ್ಯೆ '21'

ಎರಡು ಭೇದವುಳ್ಳ ಈ ಜಗದಲ್ಲಿ ಸ್ವತಂತ್ರನಾದ ಗುಣಮಯವಾದ ಒಬ್ಬನೇ ಆದ (1) ಹರಿಯನ್ನು ಮುಂದೆ ಕಾಣು ಎಂದು ಇದು ತಿಳಿಸುತ್ತದೆ.

ಪರಶುರಾಮನು ಭೂಭಾರವನ್ನು ಕಡಿಮೆ ಮಾಡಲು '21' ಬಾರಿ ಭೂ ಪ್ರದಕ್ಷಿಣೆ ಮಾಡಿ ಕ್ಷತ್ರಿಯರ ಸಂಹಾರ ಮಾಡಿದನು.

ನಾವು ಉಸಿರಾಡುವಾಗ ಸೇವಿಸುವಾಗ ವಾಯುವಿನಲ್ಲಿ ಶೇ. 21 ಆಮ್ಲಜನಕ ಇರುವುದು.

ಸ್ನೂಕರ್ ಆಟದ ಪ್ರಾರಂಭದಲ್ಲಿ ಮೇಜಿನ ಮೇಲೆ ಜೋಡಿಸುವ ಚೆಂಡುಗಳ ಸಂಖ್ಯೆ '21'.

ರಾಷ್ಟ್ರಪತಿಗಳು ನೌಕಾದಳದ ನೌಕೆಗಳಿಗೆ ಭೇಟಿ ಕೊಟ್ಟಾಗ, '21' ತೋಪುಗಳನ್ನು ಹಾರಿಸುವ ಕ್ರಮ ಉಂಟು. ಇದನ್ನು '21' ತೋಪುಗಳ ಗೌರವ ಎನ್ನುತ್ತಾರೆ.

ಕಟ್ಟಡ ನಿರ್ಮಾಣದಲ್ಲಿ ಆರ್.ಸಿ.ಸಿ. ತಾರಸಿ ಹಾಕಿದ ಮೇಲೆ 21 ದಿನಗಳ ಕಾಲ ಅದು ಗಟ್ಟಿಯಾಗಲು ಬಿಡುತ್ತಾರೆ.

**ಗಣಪತಿ ಮತ್ತು ಮಾರುತಿ: ಒಂದು ಉಪಪತ್ತಿ**

ಭಾರತೀಯ ದೇವ ದೇವತೆಗಳು ಒಂದು ಸಂಕೀರ್ಣ ಕಲ್ಪನೆ. ಅವರ ವಿಕಾಸವೇ ಅತ್ಯಂತ ಸ್ವಾರಸ್ಯದ ಚರಿತ್ರೆ. ಯಾವುದೇ ಒಂದು ಉಪಪತ್ತಿ, ಒಂದು ವಿವರಣೆ ಯಾವುದೇ ದೇವರ ಇತ್ಯರ್ಥಕ್ಕೆ ಸಾಲದು.

ಒಂದೊಂದು ದೇವತೆಯನ್ನು ಹಲವು ಮೂಲಗಳ ಹಲವು ತತ್ವ, ಸಂಪ್ರದಾಯ, ಪ್ರತೀಕ, ವಿಧಿವಿಧಾನಗಳ ಸಂಯುಕ್ತ ಸಂಕೀರ್ಣ ಪರಿಕಲ್ಪನೆಯೇ ಆಗಿಯೇ ನಾವು ಕಾಣಬೇಕು.

ಗಣಪತಿಯನ್ನು ಮಾಡಲು ಹೊರಟವನು (ಗಡಿಬಿಡಿಯಲ್ಲಿ) ವಾನರನನ್ನು ಮಾಡಿದನಂತೆ! ಅದು ಹೇಗೆ? ಸೊಂಡಿಲ ಸುರುಳಿ ಮೋರೆಗೆ ಅಂಟಿಸುವ ಬದಲು ಆ ಶಿಲ್ಪಿ ಸೊಂಟದ ಹಿಂದುಗಡೆ ಜೋಡಿಸಿಬಿಟ್ಟ. ಅಂದರೆ ಬೆನಕನಿಗೂ ಮಂಗನಿಗೂ ವಿಶೇಷ ಅಂತರವಿಲ್ಲ.

ನಮ್ಮ ಈ ಅತಿಮಾನುಷ ತತ್ವದ ಕಲ್ಪನೆಯಲ್ಲಿ ಮಾರುತಿ ಮತ್ತು ಗಣಪತಿ ಇವೆರಡೂ ಬಿಂಬದಲ್ಲಿ ಒಂದು ರೀತಿಯ ಸಾಮ್ಯವಿದೆ. ಹೇಗೆಂದರೆ ಮಾರುತ ಎಂದರೆ ಗಾಳಿ–ವಾಯು–ಪವನ ಪುತ್ರ– 'ಮಾರುತಿ'. ಗಣಪತಿಯು ವಿನಾಯಕ ಅಂದರೆ 'ವೀನಾಂ ನಾಯಕಃ' ವಿ ಎಂದರೆ ವಿಂಡ್–ವಾಯು– ಈ ಗಣಪತಿ ಮರುದ್ಗಣಗಳಿಗೆ ಪತಿ. ಅದೂ ಅಲ್ಲದೇ ಮಾರುತ ಇದರ ಇನ್ನೊಂದು ಅರ್ಥ ಸೊಂಡಿಲು. ಇದು ಗಣಪನ ಅಂಗ.

ಹನುಮ ಮತ್ತು ಗಣಪತಿಯರಿಬ್ಬರು ವಕ್ರತುಂಡರೇ (ಸೊಟ್ಟ ಮೋರೆಯವರೇ). ಬಾಲ್ಯದಲ್ಲಿ ಹನುಮಂತ ಸೂರ್ಯನತ್ತ ನೆಗೆದು ಮೋರೆ ಸುಟ್ಟುಕೊಂಡ. ಗಣಪತಿಯು ಚಂದ್ರನನ್ನು ಕೆಣಕಿದಂತೆ ಮುರಿದುಕೊಂಡು, ಶಾಪ ಕೊಟ್ಟ.

ಹನುಮಂತನು ಚಂದ್ರನ ಅವತಾರವೆಂದೂ ಒಂದು ಪೌರಾಣಿಕ ಕಲ್ಪನೆ ಇದೆ (ಕೌಶಕಿ ರಾಮಾಯಣದಂತೆ). ಚಂದ್ರನ ಅವತಾರವೆಂಬುವನು ಸೂರ್ಯನಿಗೆ ವಿರೋಧಿ. ಕೋಟಿ ಸೂರ್ಯ ಸಮಭ್ರಮನೆನಿಸಿಕೊಂಡವನು ಚಂದ್ರನಿಗೆ ವಿರೋಧಿ.

ಹನುಮಂತನ ತಾಯಿ ಅಂಜನಾ– ಹೆಣ್ಣು ಆನೆಗೂ ಅಂಜನಾ ಎನ್ನುತ್ತಾರೆ. ಹನುಮಂತ 'ವಾನರಯೂಥ ಮುಖ್ಯ'. ಗಣಪತಿ ಹೆಸರೇ ಹೇಳುವಂತೆ ಗಣಗಳಿಗೆ ಪತಿ.

ಹನುಮ ಮತ್ತು ಗಣಪ ಇಬ್ಬರೂ ಅವಿವಾಹಿತರು ಮಾತ್ರವಲ್ಲ, ಬ್ರಹ್ಮಚಾರಿಗಳು (ಗಣೇಶನಿಗೆ ಸಿದ್ಧಿಬುದ್ಧಿಗಳು ಹೆಂಡತಿಯರಲ್ಲ, ಅವನು ನೀಡುವ ಪ್ರಸಾದ ಶಕ್ತಿಗಳು). ಆದರೆ ನಮ್ಮಲ್ಲಿ ಒಂದು ಸೋಜಿಗವೆಂದರೆ ಮಕ್ಕಳಿಲ್ಲದ ದಂಪತಿಗಳು, ಪತ್ನಿಯರು ವಿಶೇಷವಾಗಿ ಈ ಉಭಯ ದೇವತೆಗಳ ಅಭಯ ಹಸ್ತದ ಅನುಗ್ರಹವನ್ನೇ ವಿಶೇಷವಾಗಿ ಅಪೇಕ್ಷಿಸಿರುತ್ತಾರೆ.

ಇನ್ನೊಂದು ಸ್ವಾರಸ್ಯವೆಂದರೆ ವೇದೋಕ್ತದಂತೆ ಇಬ್ಬರೂ ಮೂಲತಃ ಇಂದ್ರನ ಅನ್ವಯ ಹೊಂದಿದವರು. ಹನುಮಂತ 'ಮರ್ಕಟ', ಇಂದ್ರನಿಗೂ 'ಮಹಾ ಮರ್ಕಮಘವನ್' ಎಂದು ಸಂಬೋಧಿಸಲಾಗಿದೆ. ಇಂದ್ರನೂ 'ಮರ್ಕ' ಎಂದರು ಪ್ರಾಣವಾಯು `Vital breath' ಅದಕ್ಕೆ ಮಾರುತಿ ವಾಯುಪುತ್ರ.

ಇನ್ನು ಗಣಪತಿಯು ಗಜಾನನ ಗಜ ಹಸ್ತಿನ್ ಇಂದ್ರನಿಗೆ 'ಮಹಾಹಸ್ತಿನ್' ಎಂಬ ಹೆಸರಿದೆ.

ವೇದಗಳಲ್ಲಿ 'ಮಹಾಹಸ್ತೀ ದಕ್ಷಿಣೇನ' ಅಂದರೆ ಇಂದ್ರ ದಕ್ಷಿಣೆ ದಾನಗಳಲ್ಲಿ ಕೊಡುಗೈ ದೊರೆ, ಉದಾರ ದಾನಿ, ಈ ಭಾವವಿಟ್ಟುಕೊಂಡೇ ಗಣಪತಿಗೆ ಯಾವಾಗಲೂ ಅನ್ನಪೂಜೆ.

ಈ ಸ್ವಾಮ್ಯಕ್ಕೆ ಪುಷ್ಟಿ ಕೊಡುವ ಸಂಗತಿಯೆಂದರೆ ಇವೆರಡೂ ದೇವತೆಗಳಿಗೆ 'ಸಿಂಧೂರ' ಲೇಪಿಸುತ್ತಾರೆ. ಹನುಮಂತ ದೇಹ ಬಲಕ್ಕೆ ವಿಶೇಷ ಪ್ರಾಶಸ್ತ್ಯ, ಗಣಪತಿಯು ಬುದ್ಧಿ ಬಲಕ್ಕೆ.

### 'ಅಗ್ನಿ – ಗಣಪತಿ'

ಯಜ್ಞವನ್ನು ಬ್ರಹ್ಮನ ಸ್ವತಿ ಎಂದೂ ಹೇಳುತ್ತಾರೆ. ಯಜ್ಞವನ್ನು ನಡೆಸುವುದರಿಂದ ಧನಧಾನ್ಯಾದಿಗಳ ವೃದ್ಧಿ ಯಾಗುತ್ತದೆ ಅಂದರೆ 'ಅಗ್ನಿ' ಎಂದಾಗುತ್ತದೆ.

ಅಗ್ನಿ ಮತ್ತು ಗಣಪತಿಯ ವರ್ಣವು ಕೆಂಪು. ಕೆಲವು ಕಡೆ ಗಣಪತಿಯನ್ನು ಧೂಮ್ರವರ್ಣ ಎಂದು ಕರೆಯಲಾಗಿದೆ. ಇದು ಅಗ್ನಿಯ ಹೊಗೆಯ ಬಣ್ಣವಾಗಿದೆ. ಯಜ್ಞಾಗ್ನಿಯನ್ನು ದ್ವಿಜರ ಮನೆಯಿಂದಲೇ ತರಬೇಕು. ಇದೇ ಅಗ್ನಿಗೂ ದ್ವಿಜತ್ವಕ್ಕೂ ಇರುವ ಸಂಬಂಧ. ಅರಣಿಗಳನ್ನು ತಿಕ್ಕಿದಾಗ ಅಗ್ನಿಯ ಒಂದನೇ ಜನ್ಮವಾಗುತ್ತದೆ. ಅಗ್ನ್ಯಾಧಾನ ಕರ್ಮದಿಂದ ಅಗ್ನಿಗೆ ಸಂಸ್ಕಾರವಾಗುತ್ತದೆ. ಇದು ಅಗ್ನಿಯ ಎರಡನೇ ಜನ್ಮ. ದ್ವಿಜ ಗಣಪತಿಯ ಕಲ್ಪನೆಗೆ ಇದೇ ಆಧಾರವಾಗಿದೆ.

ಗಣಪತಿಯ ಮುಖ ನೇರವಾಗಿಲ್ಲ. ಓರೆಯಾಗಿದೆ. ಅಗ್ನಿಯ ಜ್ವಾಲೆಯು ಆನೆಯ ಸೊಂಡಿಲಿನಂತೆ ಓರೆಯಾಗಿದೆ. ಗಣೇಶನನ್ನು ಲಂಬೋದರ ಎನ್ನುತ್ತಾರೆ. ಪಂಚ ಮಹಾಭೂತಗಳಲ್ಲಿ ಅಗ್ನಿಯ ಹೊಟ್ಟೆ ಎಲ್ಲರಿಗಿಂತಲೂ ದೊಡ್ಡದು.

ಅಗ್ನಿ (Energy) ಯ ಮೂಲಕವೇ ಧ್ವನಿಯ ಅಲೆಗಳು ದೂರ ದೂರ ಹರಡಿಕೊಂಡು ಹೋಗುತ್ತವೆ. ಅಗ್ನಿಯಲ್ಲಿ ಧ್ವನಿವರ್ಧಕ ಶಕ್ತಿಯೂ ಇದೆ. ಆದುದರಿಂದ ದೊಡ್ಡ ಕಿವಿಯುಳ್ಳವನು ಎಂದು ಅಲಂಕಾರಿಕ ಭಾಷೆಯಲ್ಲಿ ವರ್ಣಿಸಲಾಗಿದೆ. ಈ ದೊಡ್ಡ ಕಿವಿಯ ಅಗ್ನಿಯೇ ಶೂರ್ಪಕರ್ಣ ಗಣಪತಿ.

ಉತ್ತರಾರಣಿ ಮತ್ತು ಅಧರಾರಣಿಗಳೆಂಬ ಎರಡು ಅರಣಿಗಳು ಅಗ್ನಿಗೆ ಜನ್ಮ ಕೊಡುವ ಇಬ್ಬರು ತಾಯಂದಿರು ಅಥವಾ ಪೃಥ್ವಿಯು ಅಗ್ನಿಗೆ ಒಂದನೇ ತಾಯಿ. ಆಕೆಯ ಗರ್ಭದಲ್ಲಿ ಅಗ್ನಿಯು ಇರುತ್ತಾನೆ. ಅಂತರಿಕ್ಷವು ಅವನ ಎರಡನೇ ತಾಯಿ. ಅದರ ಗರ್ಭದಲ್ಲೂ ಅಗ್ನಿಯು ಇದ್ದಾನೆ. ಇವನಂತೆಯೇ ಗಣಪತಿಗೂ ಇಬ್ಬರು ತಾಯಂದಿರು.

ಊರ್ಧ್ವ ಗಣಪತಿಯು ಸೂರ್ಯಲೋಕಗಾಮಿ ಅಗ್ನಿಯ ಪ್ರತೀಕ. ಅರ್ಥಾತ್ ಅಗ್ನಿಯ ಜ್ವಾಲೆಯು ಸದಾ ಸೂರ್ಯಲೋಕದ ಕಡೆಗೆ ಏರಿಕೊಂಡು ಹೋಗುತ್ತದೆ. ಆದುದರಿಂದ ಅಗ್ನಿಗೆ ಹಾಕಿದ ಸಮಿತ್ತುಗಳು ಸೂಕ್ಷ್ಮ ರೂಪವನ್ನು ಹೊಂದಿ, ಆಕಾಶವನ್ನು ವ್ಯಾಪಿಸುತ್ತದೆ. ಈ ಸೌಂದರ್ಯವನ್ನು ಊರ್ಧ್ವ ಗಣಪತಿಯ ರೂಪವು ತೋರಿಸುತ್ತದೆ.

ವಾಣಿಯು ಅಗ್ನಿ (Energy) ಯ ಒಂದು ರೂಪ. ಶರೀರದಿಂದ ಅಗ್ನಿಯು ಹೊರಟು ಹೋದ ನಂತರ, ವಾಣಿಯು ಹೊರಡುವುದಿಲ್ಲ. ಆದುದರಿಂದ ಅಗ್ನಿಯನ್ನು ವಾಚಸ್ಪತಿ ಎಂದು ಕರೆಯುತ್ತಾರೆ.

ಇಷ್ಟು ಮಾತ್ರವಲ್ಲದೇ ಮನುಷ್ಯನ ಮಿದುಳಿನ ಕೆಳಭಾಗದಲ್ಲಿ ಮಣಿಶಿರ (Broca's convation) ಎಂಬ ಭಾಗವಿದೆ. ಮನುಷ್ಯನ ವಾಣಿಗೆ ಇದು ಕಾರಣೀಭೂತವಾಗಿದೆ. ಇಲ್ಲಿಗೆ ಪೆಟ್ಟು ತಗುಲಿದರೆ, ಮನುಷ್ಯನ ಬಾಯಿಂದ ಮಾತುಗಳು ಹೊರಡುವುದಿಲ್ಲ. ವೇದಮಂತ್ರಗಳಲ್ಲಿ ಇದನ್ನು ಬ್ರಹ್ಮನ ಸ್ವತಿ ಎಂಬಿತ್ಯಾದಿ ಹೆಸರುಗಳಿಂದ ಕರೆದಿದ್ದಾರೆ.

ಜಲದಲ್ಲಿ ಗಣೇಶ ವಿಸರ್ಜನೆ ಮಾಡುವುದು ಒಂದು ರೂಢಿಯಾಗಿದೆ. ಜಲವು ಅಗ್ನಿಯ ನಿವಾಸ ಸ್ಥಾನ. ವೇದಗಳಲ್ಲಿ ಆಕಾಶ (Space) ವನ್ನು ಸಮುದ್ರವೆಂದು ಹೇಳಲಾಗಿದೆ. ಆಕಾಶವೂ ಅಗ್ನಿಯ ಸ್ಥಾನ. ಆದುದರಿಂದ ಅಗ್ನಿಯನ್ನು ಸ್ವಸ್ಥಾನಕ್ಕೆ ಕಳುಹಿಸುವ ಪ್ರಕ್ರಿಯೆಯೇ ಗಣೇಶ ವಿಸರ್ಜನೆ.

### ಸಿಂಪಲ್ ಗಣೇಶ

ಗಣೇಶ ಎಲ್ಲರಿಗೂ ಇಷ್ಟವಾಗುವ, ಎಲ್ಲಾ ಮತ, ಧರ್ಮದವರಿಗೂ ಮೆಚ್ಚುಗೆಯಾಗುವ, ಎಲ್ಲಾ ಚೇಷ್ಟೆಗಳನ್ನು ಮುಕ್ತವಾಗಿ ತೆಗೆದುಕೊಳ್ಳುವ, ಪ್ರಯೋಗಗಳನ್ನು ಆಧುನಿಕ ಮನಸ್ಸಿನಿಂದ ಸ್ವೀಕರಿಸಬಲ್ಲ ದೇವರು.

ಎಲ್ಲಾ 'ಲಘು ಪರಿಗಣನೆ' ಯ ಹೊರತಾಗಿ ನೋಡಿದರೆ ಗಣೇಶ ಅದ್ಭುತ ಮಾನವ ವ್ಯವಸ್ಥೆ. ಎಲ್ಲಾ ತರಹದ ಹವಾಮಾನವನ್ನು ತನ್ನೊಳಗೆ ಇಟ್ಟುಕೊಂಡು ಬದುಕುವ 'ಹವಾನಿಯಂತ್ರಿತ' ವ್ಯಕ್ತಿತ್ವ. ಆನೆಯ ಶಕ್ತಿ, ಮಾನವನ ತೋಳ್ಬಲ, ಇಲಿಯ ಚಲನಶೀಲತೆ, ಹಾವಿನ ಸೂಕ್ಷ್ಮತೆಗಳು ಒಂದಾದ ಸಮತೋಲಿತ ದೇಹ ಸ್ಥಿತಿ ಅವನದು. ಇದು ಗಣೇಶನ ಭೌತಿಕ ರೂಪವಾಯಿತು. ಪಾರಮಾರ್ಥಿಕವಾಗಿ ಗಣೇಶ ಹೇಗೆ? ಎಲ್ಲರ ಕಣ್ಣಿಗೆ ಗಣೇಶನ ಹುಟ್ಟೇ ಒಂದು ಪವಾಡ. ಗಂಡು–ಹೆಣ್ಣಿನ ಸಂಯೋಗ ಇಲ್ಲದೇ



**ಮನೆ ಮದ್ದು**

ಕರಿಬೇವಿನ ಎಲೆಯನ್ನು ಅರೆದು ಮಜ್ಜಿಗೆಯಲ್ಲಿ ಕಲಸಿ ಕುಡಿದರೆ ಆಮಶಂಕೆ ನಿವಾರಣೆಯಾಗುತ್ತದೆ.

ಹುಟ್ಟಿದ ಎಂಬುದೇ ಅವನ 'ಪಾರಮಾರ್ಥಿಕ ಅಸ್ತಿತ್ವಕ್ಕೆ' ಒಂದು ಪ್ರತಿಮೆ. ಈ ಭೂಮಿಯಲ್ಲಿ ದೇವನೇ ಸೃಷ್ಟಿಸಿದ ಒಂದು ಜನನ ವ್ಯವಸ್ಥೆಗೆ ಅತೀತವಾದ ಹುಟ್ಟನ್ನು ಗಣೇಶ ಕಂಡುಕೊಂಡ. ಮಣ್ಣಿನಿಂದಲೇ ಮೈ ಪಡೆದ. ಈ ಜಗತ್ತಿನ ಅನ್ನಕ್ಕೆ ಮನುಷ್ಯ ದಿನ ನಿತ್ಯ ಕಂಡು ಪಾರಮಾರ್ಥಿಕವಾಗಿ ಬೇರೆಯದೇ ರೀತಿ ಕಾಣುವ 'ದೇವ ವ್ಯವಸ್ಥೆಯ ಟೆಕ್ನಿಕ್' ಗೆ ಗಣೇಶ ಒಳ್ಳೆಯ ಉದಾಹರಣೆ.

ಗಣೇಶನನ್ನು ಒಮ್ಮೆ ಏಕಾಗ್ರತೆಯಿಂದ ದೃಷ್ಟಿಸಿದರೆ ರೈತನ, ಸೈನಿಕನ ಲಕ್ಷಣಗಳನ್ನು ಸ್ಪಷ್ಟವಾಗಿ ಕಾಣುತ್ತೇವೆ. ಸೇನಾ (ಗಣ) ನಾಯಕನಿಗೆ ಇರಬೇಕಾದ ಆನೆಯ ಬಲ, ದೂರದೃಷ್ಟಿ ಹೊಂದಿದ ಆನೆಯ ಶಿರ ಜೋಡಿಸಿರುವುದು, ಕೈಯಲ್ಲಿ ವಿವಿಧ ಆಯುಧಗಳು, ದಂತ, ರೈತನಿರಲಿ, ಸೇನಾನಾಯಕನಿರಲಿ, ಆಲಿಸುವ ಸ್ವಭಾವ ಇರಬೇಕು ಎಂಬುದರ ಸಂಕೇತವಾಗಿ ರೈತರು ಉಪಯೋಗಿಸುವ ಮೊರದ ಆಕಾರದ ಕಿವಿ, ಉಗ್ರಾಣ ಹೋಲುವ ಹೊಟ್ಟೆ, ರೈತನ ಬೆಳೆ ಹಾಳು ಮಾಡುವ ಇಲಿಯ ನಿಯಂತ್ರಣಕ್ಕಾಗಿ ಹಾವು ಜೊತೆ ಇರಿಸಿಕೊಳ್ಳುವುದು ಮುಂತಾದವುಗಳನ್ನು ಸಾಂಕೇತಿಕವಾಗಿ ರೂಪಿಸಿದ್ದಾರೆ. ಅರ್ಥಾತ್ ಗಣೇಶ ಭಾರತೀಯ ಜನ ಸಾಮಾನ್ಯರ ಅಭಿವ್ಯಕ್ತಿ ಎಂದು ಅರಿವಾದಾಗ, ಆತನ ಪೂಜೆಯ ಹಿನ್ನೆಲೆ ಅರಿವಿಗೆ ಬರುತ್ತದೆ.

### ಆ ಗಣಪ ... ಈ ಗಣಪ ...

ಗುಣಾವಗುಣದೊಳಗಣ ಗಣಪ. ಗಣಪ ಮಣ್ಣಿನಿಂದ ಬಂದು ಮಣ್ಣಿಗೆ ಮರಳುವ ಮನುಷ್ಯನಂಥವನು. ನಾಸ್ತಿಕರು ದೇವಸ್ಥಾನಗಳಿಗೆ ತೆರಳುವುದಿಲ್ಲ. ಹಾಗೆಂದುಕೊಂಡು ಅವರಿದ್ದಲ್ಲಿಗೆ ಬಂದು ಒಮ್ಮೆ ತನಗೆ ಕೈ ಮುಗಿಯುವಂತೆ ಮಾಡಿಯೇ ತೀರುವ ಚಾಣಾಕ್ಷನಾತ. ಇಂಥ ಚಾಣಾಕ್ಷನ ಹಬ್ಬವನ್ನು ಆಧುನಿಕ ಯುಗದ ಚಾಣಾಕ್ಷ ಮತಿಗಳು ತಮಗೆ ತೋಚಿದಂತೆ ಆಚರಿಸುತ್ತಿದ್ದಾರೆ.

ದೇವ ದೇವತೆಗಳ ರೂಪ ವಿಕಾಸ, ಆರಾಧನೆಗಳೆಲ್ಲಾ ಸ್ವಾರಸ್ಯಮಯವೇ. ವಿವಿಧ ರಸಾತ್ಮಕ, ಭಾರತೀಯ ಸಂಸ್ಕೃತಿಯ ವಿಶಿಷ್ಟ ಸಂಕೀರ್ಣ, ಸ್ವರೂಪಕ್ಕೆ ಗಣಪತಿಯು ಒಂದು ಪ್ರತೀಕದಂತೆಯೂ ವ್ಯಾಖ್ಯಾನದಂತೆಯೂ ಕಾಣಿಸುತ್ತಾನೆ.

ಹಸುವಿನ ಸಗಣಿಯನ್ನು ಸಣ್ಣ ಉಂಡೆ ಮಾಡಿ, ಅದರ ಮೇಲೆ ಗರಿಗರಿಯಾಗಿ ಮಿರುಗುವ ಗರಿಕೆಯ ನಾಲ್ಕು ಕುಡಿಗಳನ್ನು ಚುಚ್ಚಿದರೆ ಸಾಕು, ಗಣೇಶ ರೆಡಿ.

ಇನ್ನು ಗಣೇಶ ಚಿತ್ರ ವೆರಿ ಸಿಂಪಲ್. ಪ್ರಶ್ನಾರ್ಥಕ ಚಿಹ್ನೆ ಬರೆದು, ಮೇಲೊಂದು ಸೊನ್ನೆ ಬರೆದರೆ, ಅಲ್ಲೇ ಗಣೇಶ ರೆಡಿಯಾಗಿರುತ್ತಾನೆ. ಇಷ್ಟೊಂದು ವೈವಿಧ್ಯವಾಗಿ ಸರ್ವರೂಪದಲ್ಲಿ ಕಾಣಿಸಿಕೊಳ್ಳುವ ಮತ್ತೊಂದು ದೇವರು ಈ ಭೂಮಿಯ ಮೇಲಿಲ್ಲ.

ಗಣೇಶನಿಗೆ ಅಮೇರಿಕಾದಲ್ಲೂ ಭಕ್ತರಿದ್ದಾರೆ. ಟೆರೆನ್ಸ್ ಮೆಕ್ ಮೇರಿ ಎನ್ನುವವರು ತಮ್ಮ ನಾಟಕವೊಂದಕ್ಕೆ 'ಎ ಪರ್ಫೆಕ್ಟ್ ಗಣೇಶ' ಎಂದು ಹೆಸರಿಟ್ಟಿದ್ದಾರೆ.

ಗಣಪನಿಗೆ ಎರಡು ಹುಟ್ಟಿದ ಹಬ್ಬಗಳು. ಮೊದಲನೆಯದು ಎಲ್ಲರಿಗೂ ಗೊತ್ತಿರುವಂತಹದ್ದು. ಪಾರ್ವತಿಯ ಕೊಳೆಯಿಂದ ಜನಿಸಿದ್ದು. ಇನ್ನೊಂದು ಹುಟ್ಟಿಗೆ ಮಾತ್ರ ನಿರ್ದಿಷ್ಟ ಕಾಲವಿಲ್ಲ. ಕಲಾವಿದರು ಆತನಿಗೆ ಎರಡನೇ ಜನ್ಮ ನೀಡಿದರು? ದೇವಾಲಯದ ಶಿಲ್ಪವಾಗಿ ಬಹಳ ಹಿಂದಿನಿಂದ ಮೂಡಿಬಾರದಂತಹವನು, ಆದರೆ ಆಗೆಲ್ಲ ಗಣಪತಿಗೆ ಸೆನ್ಸ್ ಆಫ್ ಹ್ಯೂಮರ್ ಕಡಿಮೆ ಇತ್ತು. ಮಾರ್ಕೊಪೋಲೋ ಎಂಬ ಪಾಶ್ಚಾತ್ಯ ವಿದೇಶಿ ಪ್ರವಾಸಿ ಭಾರತದ ದೇವಾಲಯಗಳ ದೈವಗಳಿಗೆಲ್ಲಾ ಹತ್ತಾರು ಕೈಗಳು, ನಾಲ್ಕಾರು ತಲೆಗಳು ಮುಂತಾದವುಗಳೇ ಇರುವುದನ್ನು ಕಂಡು ಬೆಚ್ಚಿಬಿದ್ದಿದ್ದನಂತೆ. ಹಾಗಾಗಿ ನಮ್ಮ ದೈವಗಳನ್ನು ಅವನಂತಹರು ಪಿಶಾಚಿಗಳೆಂದು ವರ್ಗೀಕರಿಸಿದ್ದರು. ಈ ಪಟ್ಟಿಯಲ್ಲಿ ಮೊದಲಿಗನೇ ಗಜಮುಖ ಗಣಪತಿ!

ಇಲ್ಲಿಯವರೆಗೂ ಭಾರತೀಯ ಕಲಾ ಇತಿಹಾಸದಲ್ಲಿ ಗಣೇಶನ ಕ್ಯಾನ್‌ವಾಸ್, ಶಿಲ್ಪ, ಭಿತ್ತಿಚಿತ್ರ, ಇತ್ಯಾದಿಗಳನ್ನು ಎದುರಿಗಿರಿಸಿಕೊಂಡು ಗಂಭೀರ ವಿಮರ್ಶೆ ಆಗಿಯೇ ಇಲ್ಲ. ಏಕೆಂದರೆ ಶಾಪ ಕೊಡದ, ವರ ಮಾತ್ರ ನೀಡುವ ಸಿದ್ಧಿ ವಿನಾಯಕನಿಗೆ ವಿಮರ್ಶಕರಲ್ಲೂ ರಿಯಾಯಿತಿ! ಮೂರು ವೃತ್ತಗಳು ಒಂದು ಡಬಲ್ 'ಎಸ್' ಗಳನ್ನು ಹಾಗೂ ಒಂದು ತ್ರಿಕೋನ ಸಾಕು ಈತನನ್ನು ಸೃಷ್ಟಿಸಲು.

ಗ್ರೀಕರ ಪ್ರಭಾವದಿಂದ ಗಣೇಶ ಸೃಷ್ಟಿಗೊಂಡ ಎಂದರೆ ಜನ ಮೂಗು ಮುರಿದಾರು. ಗಣೇಶನನ್ನು ಹಾಗೂ ಸ್ವತಃ ಅವರುಗಳದ್ದೇ ಮೊದಲ ಗಣಪ ಸೃಷ್ಟಿಗೊಂಡಿದ್ದು ಕಲ್ಲಿನಲ್ಲಿ. ಕಲ್ಲು ಕೆತ್ತುವುದನ್ನು ಭಾರತೀಯರಿಗೆ ಹೇಳಿ ಕೊಟ್ಟಿದ್ದು ಅಲೆಕ್ಸಾಂಡರ್‌ನೊಂದಿಗೆ ಭಾರತಕ್ಕೆ ಬಂದ ಗ್ರೀಕ್ ಶಿಲ್ಪಿಗಳು. ಅವರೆಲ್ಲಾ ಮೂಲಭೂತವಾಗಿ ಗ್ರೀಕ್ ದೈವಗಳನ್ನು ಸೃಷ್ಟಿಸಿ ಅಭ್ಯಾಸವಾದವರು. ಧರ್ಮಕ್ಕೆ ಮೂಲ ಆಚಾರ. ಈ ಆಚಾರಕ್ಕೆ ಪ್ರತಿಷ್ಠೆ ಇರುವುದೇ ಈ ಮೂಲಾಧಾರದಲ್ಲಿ. ನಾಲಿಗೆ ತಿದ್ದಿಕೊಳ್ಳಬೇಕೆನ್ನುವವರು ಮೊದಲು ಮೂಲಾಧಾರದಲ್ಲಿ ಶುದ್ಧಿಯನ್ನು ಪಡೆಯಬೇಕು. ನಾಲಿಗೆಯ ವಾಕ್ ಶುದ್ಧಿ–ಸಿದ್ಧಿ ಮೂಲಾಧಾರದ ಈ ನಾಲ್ಕು ನಾಡಿಯ ಗಣದ ಪತಿ ಎಂದರೆ ಅಂಕಿತದಲ್ಲಿ ಇಟ್ಟುಕೊಳ್ಳುವ ಈಶ್ವರ ಶಕ್ತಿಯದು.

### ಸದಾ ಜಾಗೃತ ಸ್ಥಾನ

ಇನ್ನು ಗಣೇಶನ ಮುಖ ಕಮಲವನ್ನು ಗಮನಿಸಿದಾಗ, ಆತನ ಮುಖದಲ್ಲಿ ಕಣ್ಣುಗಳು ಚಿಕ್ಕವಾಗಿದ್ದುಕೊಂಡು, ಕಿವಿಗಳು ಮಾತ್ರ ಮೊರದಂತೆ ಅಗಲವಾಗಿರುವುದು ಕಂಡು ಬರುತ್ತದೆ.

ಯಾವತ್ತೂ ನಾವು ನಮ್ಮ ಕಣ್ಣುಗಳನ್ನು ಕಿರಿದಾಗಿಸಿಕೊಂಡು, ಕಿವಿಗಳನ್ನು ಮಾತ್ರ ಹರವಾಗಿರಿಸಿಕೊಳ್ಳಬೇಕು. ಇಲ್ಲಿ ಕಿವಿ ಎಂದರೆ ಶ್ರವಣೇಂದ್ರಿಯ. ಕಿವಿ ಜ್ಞಾನವನ್ನು ಸಂಗ್ರಹಿಸುವ ಒಂದು ಬಹು ದೊಡ್ಡ ಸಾಧನ. ಕಿವಿಯು ಅನಕ್ಷರಸ್ಥರನ್ನಷ್ಟೇ ಅಲ್ಲ ನಿರಕ್ಷರ ಕುಕ್ಷಿಯನ್ನೂ ಕೂಡ ಸಂತೋಷ ಪಡಿಸುತ್ತದೆ ಮತ್ತು ಜಾಣನನ್ನಾಗಿಸುತ್ತದೆ.

ಮನುಷ್ಯ ಕೇಳಿ ಜ್ಞಾನವನ್ನು ಸಂಗ್ರಹಿಸುವಷ್ಟು ಓದಿ ಜ್ಞಾನವನ್ನು ಸಂಗ್ರಹಿಸಲಾಗುವುದಿಲ್ಲ. ಸ್ವಂತ ಓದಿಗೆ ಅಕ್ಷರಾಭ್ಯಾಸ ಅತ್ಯಂತ ಅವಶ್ಯ. ಆದರೆ ಕಿವಿ ಮಾತ್ರ ಹಾಗಲ್ಲ. ಅದಕ್ಕೆ ಓದಲೇಬೇಕೆಂಬ ಕಟ್ಟು ಕಟ್ಟಳೆ ಇಲ್ಲ. ಅಂದರೆ ಅಕ್ಷರಮಾಲೆಯ 'ಅ, ಭ, ಕ' ಗಳು ಕೂಡ ಗೊತ್ತಿರದ ಒಬ್ಬ ವ್ಯಕ್ತಿ ಪಂಡಿತರ ಉಪನ್ಯಾಸಗಳನ್ನು ಕೇಳಿ, ಅನುಭವಿಗಳ ಅನುಭವಕ್ಕೆ ಕಿವಿಗೊಟ್ಟು, ಸಂತರ ಸೂಳ್ನುಡಿಗಳನ್ನು ಶ್ರವಣ ಮಾಡಿ, ಮಹಾತ್ಮರ ಪ್ರವಚನಗಳನ್ನು ಆಲಿಸಿ, ಜ್ಞಾನಮಾರ್ಗದಲ್ಲಿ ಗತಿಯನ್ನು ಹೊಂದಬಹುದು. ಆದ್ದರಿಂದಲೇ ನವ ವಿಧ ಭಕ್ತಿಯಲ್ಲಿ ಶ್ರವಣ ಭಕ್ತಿಗೆ ಮೊದಲ ಸ್ಥಾನವಿದೆ.

ಗಣೇಶನ ಕುರಿತು ಇನ್ನು ಹೆಚ್ಚಿನ ಮಾಹಿತಿ ತಿಳಿಯಲು ಇದೇ ಲೇಖಕರ 'ನೂತನ ಕೃತಿ – ವಿಶ್ವವಂದಿತ ವಿನಾಯಕ' ನೋಡಬಹುದು .www. vishwavinayaka108.blogspot.com ॐ




# ಅಂತರರಾಷ್ಟ್ರೀಯ ಸಾಕ್ಷರತಾ ದಿನ

ಅಂತರಾಷ್ಟ್ರೀಯ ಸಾಕ್ಷರತಾ ದಿನವನ್ನು ಎಲ್ಲರಿಗೂ ಗುಣಮಟ್ಟದ, ಸಮಾನ ಮತ್ತು ಅಂತರ್ಗತ ಶಿಕ್ಷಣವನ್ನು ಖಚಿತಪಡಿಸಿಕೊಳ್ಳಲು ಸಾಕ್ಷರತೆಯ ಕಲಿಕೆಯ ಸ್ಥಳಗಳ ಮೂಲಭೂತ ಪ್ರಾಮುಖ್ಯತೆಯನ್ನು ಪುನರ್ವಿಮರ್ಶಿಸಲು ಸೆಪ್ಟೆಂಬರ್ 8, 2023 ರಂದು ಆಚರಿಸಲಾಗುತ್ತದೆ.

1967 ರಿಂದ, ಘನತೆ ಮತ್ತು ಮಾನವ ಹಕ್ಕುಗಳ ವಿಷಯವಾಗಿ ಸಾಕ್ಷರತೆಯ ಪ್ರಾಮುಖ್ಯತೆಯನ್ನು ಸಾರ್ವಜನಿಕರಿಗೆ ನೆನಪಿಸಲು ಹಾಗೂ ಸಾಕ್ಷರತೆಯ ಕಾರ್ಯಸೂಚಿಯನ್ನು ಹೆಚ್ಚು ಸಾಕ್ಷರತೆ ಮತ್ತು ಸುಸ್ಥಿರ ಸಮಾಜದತ್ತ ಮುನ್ನಡೆಸಲು ಪ್ರಪಂಚದಾದ್ಯಂತ ಅಂತರರಾಷ್ಟ್ರೀಯ ಸಾಕ್ಷರತಾ ದಿನ (ILD) ಆಚರಣೆಗಳು ವಾರ್ಷಿಕವಾಗಿ ನಡೆಯುತ್ತಿವೆ. ಯುನೆಸ್ಕೋದ ಇತ್ತೀಚಿನ ವರದಿಯ ಪ್ರಕಾರ, ಪ್ರಪಂಚದಾದ್ಯಂತ ಕನಿಷ್ಠ 771 ಮಿಲಿಯನ್ ವಯಸ್ಕರು, ಅವರಲ್ಲಿ ಹೆಚ್ಚಿನವರು ಮಹಿಳೆಯರು, ಇಂದಿಗೂ ಮೂಲಭೂತ ಸಾಕ್ಷರತೆಯ ಕೌಶಲ್ಯಗಳನ್ನು ಹೊಂದಿರುವುದಿಲ್ಲ. ಅವರು ಇನ್ನೂ ಓದುವ ಮತ್ತು ಬರೆಯುವ ಕೌಶಲ್ಯಗಳನ್ನು ಹೊಂದಿಲ್ಲದಿರುವುದರಿಂದ ಹೆಚ್ಚಿನ ದುರ್ಬಲತೆಯನ್ನು ಎದುರಿಸುತ್ತಿದ್ದಾರೆ.

**ಸಮೃದ್ಧಿ ಸುಜ್ಞಾನ**

ಎಲ್ಲರಲ್ಲೂ ಎಲ್ಲವೂ ಇರುವುದಿಲ್ಲ, ಒರಟಾದ ವಜ್ರಕ್ಕೆ ಸುವಾಸನೆ ಇರುವುದಿಲ್ಲ ಆದರೆ ಸೌಂದರ್ಯವಿದೆ.
ಮೃದುವಾದ ಮಲ್ಲಿಗೆಗೆ ಆಯುಷ್ಯವಿಲ್ಲ,
ಆದರೆ ಸುವಾಸನೆ ಇದೆ, ಆಕರ್ಷಣೆ ಇದೆ




ಭಾರತದಲ್ಲಿ ಸಾಕ್ಷರತಾ ಪ್ರಮಾಣವು ನ್ಯಾಷನಲ್ ಸರ್ವೆ ಆಫ್ ಇಂಡಿಯಾ ಪ್ರಕಟಿಸಿದ ವರದಿಯ ಪ್ರಕಾರ, ಭಾರತದ ಸಾಕ್ಷರತಾ ಪ್ರಮಾಣವು 77.7 ಶೇಕಡಾ. 2011ರಲ್ಲಿ ಸಾಕ್ಷರತೆಯ ಪ್ರಮಾಣವು 73% ಆಗಿತ್ತು. ಹೊಸ ಶಿಕ್ಷಣ ನೀತಿಯು ಮುಂದಿನ ದಶಕದಲ್ಲಿ 100% ಸಾಕ್ಷರತೆಯನ್ನು ಸಾಧಿಸುವ ಗುರಿಯೊಂದಿಗೆ, ಅದರ ಜನಸಂಖ್ಯೆಯು ನಿಜವಾಗಿಯೂ ಸಾಕ್ಷರವಾಗಲು ದೇಶವು ಇನ್ನೂ ಬಹಳ ದೂರ ಸಾಗಬೇಕಾಗಿದೆ. 1950ರಲ್ಲಿ ಕೇವಲ 10ಭಾರತೀಯರಲ್ಲಿ 2ಜನರು ಸಾಕ್ಷರರಾಗಿದ್ದರು. 2023ರಲ್ಲಿ, ಅಂಕಿಅಂಶಗಳು ಬಹುತೇಕ ವ್ಯತಿರಿಕ್ತವಾಗಿವೆ. 1951 ರಲ್ಲಿ ಕೇವಲ 18.3% ರ ಸಾಕ್ಷರತೆಯ ಪ್ರಮಾಣದಿಂದ 2018 ರಲ್ಲಿ 74.4% ಕ್ಕೆ, ಭಾರತವು ಸುಶಿಕ್ಷಿತ ರಾಷ್ಟ್ರವನ್ನು ಸ್ಥಾಪಿಸುವಲ್ಲಿ ಬಹಳ ದೂರ ಸಾಗಿದೆ.

2018 ರ ಅಂಕಿಅಂಶಗಳ ಪ್ರಕಾರ, ಭಾರತದ ಪುರುಷರ ಸಾಕ್ಷರತಾ ಪ್ರಮಾಣವು 82.4% ರಷ್ಟಿದೆ ಮತ್ತು ಮಹಿಳಾ ಸಾಕ್ಷರತಾ ಪ್ರಮಾಣವು 65.8% ರಷ್ಟಿದೆ. ಪುರುಷ ಮತ್ತು ಮಹಿಳೆಯ ಸಾಕ್ಷರತೆಯು ವರ್ಷಗಳಲ್ಲಿ ಸ್ಥಿರವಾಗಿ ಏರಿಕೆಯಾಗಿದ್ದರೂ, ವ್ಯಾಪಕವಾದ ಲಿಂಗ ಅಂತರವು ಇಂದಿಗೂ ಚಾಲ್ತಿಯಲ್ಲಿದೆ.

ಆದಾಗ್ಯೂ, ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳ ಪ್ರಾಥಮಿಕ ಶಾಲಾ ದಾಖಲಾತಿ ಹೆಚ್ಚಳವು ಮುಂಬರುವ ವರ್ಷಗಳಲ್ಲಿ ಪುರುಷ ಮತ್ತು ಮಹಿಳಾ ಸಾಕ್ಷರತೆಯ ನಡುವಿನ ಅಂತರವನ್ನು ಕಡಿಮೆ ಮಾಡುವ ಸಾಧ್ಯತೆಯಿದೆ. ಇನ್ನೊಂದು ಬದಿಯಲ್ಲಿ, ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಅನಕ್ಷರಸ್ಥರಿಗೆ ನೆಲೆಯಾಗಿದೆ ಮತ್ತು ಜನಸಂಖ್ಯೆಯ 25% ಕ್ಕಿಂತ ಹೆಚ್ಚು ಜನರು ಇನ್ನೂ ಅವಿದ್ಯಾವಂತರಾಗಿದ್ದಾರೆ ಎಂದು ಹೇಳಬಹುದು.

ಅಂತರಾಷ್ಟ್ರೀಯ ಸಾಕ್ಷರತಾ ದಿನ 2022 ರ ಸಂದರ್ಭದಲ್ಲಿ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್" ಸಾಕ್ಷರತೆಯು ಜೀವನ ಪರ್ಯಂತ ಶಿಕ್ಷಣಕ್ಕೆ ಪ್ರಮುಖವಾಗಿದೆ ಮತ್ತು ಬಡತನದ ವಿರುದ್ಧ ಹೋರಾಡುವುದಕ್ಕೆ ಪ್ರಬಲ ಸಾಧನವಾಗಿದೆ ಎಂದು ತಿಳಿಸಿದ್ದರು. ನಾವು ಅಂತಾರಾಷ್ಟ್ರೀಯ ಸಾಕ್ಷರತಾ ದಿನವನ್ನು ಗುರುತಿಸುವಾಗ, ಸಾಕ್ಷರತೆಯನ್ನು ಹೆಚ್ಚಿಸಲು ಮತ್ತು ಗುಣಮಟ್ಟದ ಶಿಕ್ಷಣವನ್ನು ಶಿಕ್ಷಿತ್ ಮತ್ತು ವಿಕ್ಷಿತ್ ಭಾರತಕ್ಕೆ ಹೆಚ್ಚು ಸಮಾನಾಗಿರುವ, ಕೈಗೆಟುಕುವ ಜಾಗೃತ ಪ್ರಯತ್ನಗಳನ್ನು ಮಾಡಲು ಪ್ರತಿಜ್ಞೆ ಮಾಡೋಣ." ॐ



# ಒಂದು ಚಿಕ್ಕ ಅತ್ಯುತ್ತಮ ನೀತಿ ಕಥೆ.

ಒಂದು ದಿನ ಖ್ಯಾತ ಚಿತ್ರ ಕಲಾವಿದ "ರಾಜಾ ರವಿವರ್ಮ" ನಗರ ಸಂಚಾರ ಮಾಡುವಾಗ ಒಬ್ಬ ಸುಂದರ ಯುವತಿ ಅವನನ್ನು ಗುರುತಿಸಿ, ನೀವು ನನಗಾಗಿ ಒಂದು ಚಿಕ್ಕ ಚಿತ್ರವನ್ನು ಬಿಡಿಸಿ ಕೊಡುವಂತೆ ಮನವಿ ಮಾಡಿಕೊಳ್ಳುತ್ತಾಳೆ..!!

ರವಿವರ್ಮ ಆಶ್ಚರ್ಯ ವ್ಯಕ್ತಪಡಿಸಿ, ಈ ಕೂಡಲೇ ಅದೂ ಬಜಾರ {ರಸ್ತೆ} ದಲ್ಲಿ ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು... ಮುಂದಿನ ದಿನಗಳಲ್ಲಿ ಭೇಟಿ ಯಾದಾಗ ಖಂಡಿತಾ ಬಿಡಿಸಿ ಕೊಡುತ್ತೇನೆ ಎಂದರೂ, ಪಟ್ಟು ಬಿಡದೆ ಈಗಲೇ ಬೇಕೆಂದು ಹಠ ಹಿಡಿದು ಅಂಗಲಾಚಿದಾಗ,, ಬೇರೆ ದಾರಿ ಕಾಣದೆ ಆ ಕ್ಷಣಕ್ಕೆ ಒಂದು ಚಿತ್ರವನ್ನು ಬಿಡಿಸಿ ಕೊಡುವಾಗ... ನಗುತ್ತಾ ಹೇಳುತ್ತಾನೆ... ಇದರ ಬೆಲೆ ಕೋಟಿ ರೂಪಾಯಿಗೂ ಅಧಿಕ, ಜಾಗೃತೆಯಿಂದ ಕಾಪಾಡಲು ಹೇಳಿ ಹೋಗುತ್ತಾನೆ..!!

ಆ ಯುವತಿ ಆಶ್ಚರ್ಯದಿಂದ ಚಿತ್ರ ನೋಡಿ, ಮರುದಿನವೇ ಪೇಟೆಗೆ ಹೋಗಿ ಪ್ರಮುಖ ಚಿತ್ರಕಾರರ ಚಿತ್ರ {Paintings} ಗಳನ್ನು ಮಾರುವ ಒಬ್ಬ ವ್ಯಕ್ತಿಯ ಹತ್ತಿರ ಹೋಗಿ ರವಿವರ್ಮ ಚಿತ್ರಿಸಿ ಕೊಟ್ಟ ಚಿತ್ರದ ಬೆಲೆ ಎಷ್ಟಿರಬಹುದು ?? ಎಂದು ಕೇಳುತ್ತಾಳೆ... ಅವನೂ ಸಹ ರವಿವರ್ಮ ಹೇಳಿದ ಮಾತನ್ನೇ ಹೇಳುತ್ತಾನೆ.. ಕೋಟಿ ರೂಪಾಯಿಗೂ ಹೆಚ್ಚು ಎಂದು..!! ಆ ಚಿತ್ರದ ಬೆಲೆ ಕೇಳಿ ಯುವತಿಯ ಬಾಯಿಂದ ಮಾತೇ ಹೊರಡಲಿಲ್ಲ,, ಆ ತಕ್ಷಣವೇ ಮತ್ತೆ ರವಿವರ್ಮರನ್ನು ಭೇಟಿಯಾಗಲು ಹೊರಟಳು...


ರವಿವರ್ಮರನ್ನು ಭೇಟಿಯಾಗಿ... ನೀವು ಹತ್ತೇ ನಿಮಿಷದಲ್ಲಿ ಚಿತ್ರಿಸಿದ ಈ ಚಿತ್ರ ಇಷ್ಟೊಂದು ಬೆಲೆ ಬಾಳುವುದೆಂದು ಗೊತ್ತಿರಲಿಲ್ಲ.!! ನನಗೂ ಸಹ ಈ ಚಿತ್ರಕಲೆಯನ್ನು ಕಲಿಸಿಕೊಡಿ, ನಿಮ್ಮಂತೆ ಹತ್ತೇ ನಿಮಿಷದಲ್ಲಿ ಆಗದಿದ್ದರೂ.. ಹತ್ತು ದಿನಕ್ಕೆ ಒಂದು ಚಿತ್ರವನ್ನಾದರೂ ಬಿಡಿಸುವೆ ಎನ್ನುತ್ತಾಳೆ.!!

ರವಿವರ್ಮ ನಗುತ್ತಾ... ಸುಂದರಿ..!! ನಿನಗಾಗಿ ಹತ್ತೇ ನಿಮಿಷದಲ್ಲಿ ಚಿತ್ರವನ್ನು ಬಿಡಿಸಿ ಕೊಟ್ಟೆ.. ನಿಜ, ಆದರೆ ಅದರ ಹಿಂದೆ ನನ್ನ "ಮೂವತ್ತು ವರ್ಷಗಳ" ಕಠಿಣವಾದ ಪರಿಶ್ರಮವಿದೆ.!! ನೀನೂ ಸಹ "ನಿನ್ನ ಮೂವತ್ತು ವರ್ಷಗಳನ್ನು" ಈ ಕಲೆಗಾರಿಕೆಗೆ ತ್ಯಾಗ ಮಾಡಿದರೆ, ನನಗಿಂತ ಎತ್ತರಕ್ಕೆ ಬೆಳೆಯ ಬಲ್ಲೆ.. ಎನ್ನುತ್ತಾರೆ!! ರವಿವರ್ಮ ರ ಮಾತನ್ನು ಕೇಳಿ ಆ ಯುವತಿ "ಗರಬಡಿದಂತೆ" ನಿಂತು ಬಿಟ್ಟಳು...

ಅಂದರೆ,, ಒಬ್ಬ ಮೇಷ್ಟ್ರು ಅಥವಾ ಉಪನ್ಯಾಸಕನ 45 ನಿಮಿಷದ ಪಾಠದ ಹಿಂದೆ ಕೂಡ ಅವನ ಜೀವನದ ಎಷ್ಟೋ ವರ್ಷಗಳ ಕಠಿಣ ಸಾಧನೆ ಇರುತ್ತದೆ.!! ತಂದೆ ~ ತಾಯಿ ನಮಗಾಗಿ ನಮ್ಮ ಒಳಿತಿಗಾಗಿ ಹೇಳಿದ ಮಾತು, ನಿಮ್ಮ ಊಹೆಗೂ ನಿಲುಕದ ಅವರ "ಪ್ರೀತಿ ~ ತ್ಯಾಗ" ದ ಹಿಂದೆ ಸಾಕಷ್ಟು ವರ್ಷ ಕಳೆದ ಅನುಭವದ, ಕಷ್ಟದ ಸರಮಾಲೆಯೇ ಇರುತ್ತದೆ.!! ಹಾಗೆಯೇ... ಒಬ್ಬ" ಜ್ಞಾನಿ" ಅಥವಾ ಗುರುಗಳ ಜೊತೆ ಕಳೆದ ಕೆಲವೇ ಕೆಲವು ಕ್ಷಣ... ನಮ್ಮ ಜೀವನವನ್ನು ಬದಲಾಯಿಸಬಹುದು.!!

ನೀತಿ:–

ಮೇಷ್ಟ್ರು ಅಥವಾ ಉಪನ್ಯಾಸಕರ ಪಾಠಗಳು, ತಂದೆ, ತಾಯಿಯರು ಕಲಿಸಿದ ಸಂಸ್ಕೃತಿ, ಸದ್ಗುರುಗಳ ಜ್ಞಾನ ಬೋಧನೆ ಕೂಡ, ರವಿವರ್ಮನ ಚಿತ್ರಗಳ ತರಹ ಊಹೆಗೂ ನಿಲುಕದಷ್ಟು ಬೆಲೆ ಬಾಳುವುವು..!!



# ಈದ್-ಮಿಲಾದ್



ಮೌಲಿದ್ ಮತ್ತು ಮಿಲಾದ್ ಅನ್ ನಬಿ ಎಂದೂ ಕರೆಯಲ್ಪಡುವ ಈ ದಿನವನ್ನು ಇಸ್ಲಾಮಿಕ್ ಕ್ಯಾಲೆಂಡರ್‌ನ ಮೂರನೇ ತಿಂಗಳಾದ ರಬಿ–ಉಲ್ ಅವ್ವಲ್‌ನ 12 ನೇ ದಿನದಂದು ಆಚರಿಸಲಾಗುತ್ತದೆ. ಮುಹಮ್ಮದ್ ಅವರ ಜನ್ಮದಿನದ ಆಚರಣೆಯು ಸಂತೋಷವಾಗಿದ್ದರೆ, ಇದು ಶೋಕದ ದಿನವೂ ಆಗಿದೆ. ಪ್ರವಾದಿ ಮುಹಮ್ಮದ್ ಕೂಡ ರಬೀ–ಉಲ್ ಅವ್ವಲ್ ನ 12ನೇ ದಿನದಂದು ತೀರಿಕೊಂಡಿರುವುದೇ ಇದಕ್ಕೆ ಕಾರಣ.

ಈದ್ ಮಿಲಾದ್ ಇಸ್ಲಾಂ ಧರ್ಮದ ಕೇಂದ್ರ ಪ್ರವಾದಿ ಮುಹಮ್ಮದ್ ಅವರ ಜನ್ಮದಿನವನ್ನು ಆಚರಿಸುತ್ತದೆ. ಐತಿಹಾಸಿಕ ಗ್ರಂಥಗಳ ಪ್ರಕಾರ, ಮುಹಮ್ಮದ್ ಸೌದಿ ಅರೇಬಿಯಾದಲ್ಲಿ ಜನಿಸಿದರು. ಇಸ್ಲಾಮಿನ ಹೆಚ್ಚಿನ ವಿದ್ವಾಂಸರು ಮುಹಮ್ಮದ್ ಇಸ್ಲಾಮಿಕ್ ಕ್ಯಾಲೆಂಡರ್‌ನ ಮೂರನೇ ತಿಂಗಳ 12 ನೇ ದಿನದಂದು ಜನಿಸಿದರು ಎಂದು ನಿರ್ಧರಿಸಿದ್ದಾರೆ. ತನ್ನ ಜೀವಿತಾವಧಿಯಲ್ಲಿ, ಮುಹಮ್ಮದ್ ಇಸ್ಲಾಂ ಧರ್ಮವನ್ನು ಸ್ಥಾಪಿಸಿದನು ಮತ್ತು ಈಗ ಸೌದಿ ಅರೇಬಿಯಾವನ್ನು ದೇವರ ಸೇವೆಗೆ ಮೀಸಲಿಟ್ಟ ಏಕೈಕ ರಾಜ್ಯವಾಗಿ ರೂಪಿಸಿದನು ಎಂದು ಹೇಳಲಾಗುತ್ತದೆ. ಮುಹಮ್ಮದ್ ಮರಣಹೊಂದಿದ ನಂತರ, ಅನೇಕ ಮುಸ್ಲಿಮರು ಅವರ ಜೀವನ ಮತ್ತು ಅವರ ಬೋಧನೆಗಳನ್ನು ವಿವಿಧ ಅನೌಪಚಾರಿಕ ರಜಾದಿನಗಳೊಂದಿಗೆ ಆಚರಿಸಲು ಪ್ರಾರಂಭಿಸಿದರು.

ಈ ವಿವಿಧ ಆಚರಣೆಯ ಸಂಪ್ರದಾಯಗಳ ಹೊರತಾಗಿಯೂ, ಈಜಿಪ್ಟ್‌ನಲ್ಲಿ ಫಾತಿಮಾ ಮಿಲಾದ್ ಅನ್–ನಬಿಯನ್ನು ಸ್ಥಾಪಿಸುವವರೆಗೂ ಪ್ರವಾದಿ ಮುಹಮ್ಮದ್ ಅವರ ಜನ್ಮದಿನವನ್ನು ವ್ಯಾಪಕವಾಗಿ ಆಚರಿಸಲಾಗಲಿಲ್ಲ. ಮುಹಮ್ಮದ್ ಅವರ ಜನ್ಮದಿನದ ಮೊದಲ ಅಧಿಕೃತ ಆಚರಣೆಯಂದು, ಮುಸ್ಲಿಮರು ಮತ್ತು ಇಸ್ಲಾಮಿಕ್ ವಿದ್ವಾಂಸರು ತಮ್ಮ ಗೌರವವನ್ನು ಸಲ್ಲಿಸಲು ಮಸೀದಿಗಳಲ್ಲಿ ಜಮಾಯಿಸಿದರು. ಮೊದಲ ಮಿಲಾದ್ ಅನ್–ನಬಿ ರಜೆಯಂದು ಮುಸ್ಲಿಮರು ಮುಹಮ್ಮದ್ ಅವರನ್ನು ಗೌರವಿಸುವ ಕೆಲವು ವಿಧಾನಗಳಲ್ಲಿ ಧಾರ್ಮಿಕ ಉಪದೇಶಗಳು ಮತ್ತು ಚರ್ಚೆಗಳು ಸೇರಿವೆ.

## ಸಂಪ್ರದಾಯಗಳು

ಮುಸ್ಲಿಮರು ತಮ್ಮ ನಂಬಿಕೆಗಳು ಮತ್ತು ಆದ್ಯತೆಗಳನ್ನು ಅವಲಂಬಿಸಿ ಪ್ರವಾದಿ ಮುಹಮ್ಮದ್ ಅವರ ಜೀವನ ಮತ್ತು ಮರಣವನ್ನು ಆಚರಿಸುತ್ತಾರೆ. ಕೆಲವರು ಮಿಲಾದ್ ಅನ್–ನಬಿಯನ್ನು ಹಬ್ಬದ ರಜಾದಿನವೆಂದು ಪರಿಗಣಿಸುತ್ತಾರೆ, ಆದರೆ ಇತರರು ಅದನ್ನು ಗಂಭೀರ ದಿನವೆಂದು ಪರಿಗಣಿಸುತ್ತಾರೆ.

ಸಿಹಿತಿಂಡಿ ವಿತರಣೆ:  ಮಿಲಾದ್ ಉನ್–ನಬಿಯಂದು ಪಾದ್ರಿಗಳ ಸದಸ್ಯರು ಜನರಿಗೆ ಸಿಹಿತಿಂಡಿ ಮತ್ತು ಇತರ ಉಪಹಾರಗಳನ್ನು ವಿತರಿಸುವುದು ಸಾಮಾನ್ಯ ಅಭ್ಯಾಸವಾಗಿದೆ. ಈ ರಜಾದಿನಗಳಲ್ಲಿ ಹೆಚ್ಚಾಗಿ ವಿತರಿಸಲಾಗುವ ಸಿಹಿತಿಂಡಿಗಳಲ್ಲಿ ಜೇನು ಕೂಡ ಒಂದು. ಏಕೆಂದರೆ ಅನೇಕ ವಿದ್ವಾಂಸರು ಜೇನು ಪ್ರವಾದಿ ಮುಹಮ್ಮದ್ ಅವರ ನೆಚ್ಚಿನ ಔತಣವಾಗಿತ್ತು ಎಂದು ನಂಬುತ್ತಾರೆ.

**ಆಚರಣೆ :** ಮಸೀದಿಗಳಿಗೆ ಭೇಟಿ ಮಿಲಾದ್ ಅನ್–ನಬಿಯಂದು ಮುಸ್ಲಿಮರು ಮಸೀದಿಗೆ ಭೇಟಿ ನೀಡುವ ನಿರೀಕ್ಷೆಯಿದೆ. ಮಸೀದಿ ಸೇವೆಗಳಲ್ಲಿ, ಮುಸ್ಲಿಮರು ಧರ್ಮೋಪದೇಶಗಳನ್ನು ಕೇಳುತ್ತಾರೆ. ದೇವರು ಮತ್ತು ಪ್ರವಾದಿ ಮುಹಮ್ಮದ್ ಅವರನ್ನು ಗೌರವಿಸುವ ಪ್ರಾರ್ಥನೆಗಳನ್ನು ಹೇಳುತ್ತಾರೆ. ಔಪಚಾರಿಕ ಸೇವೆಯ ನಂತರ, ಜನರು ತಮ್ಮ ಸ್ನೇಹಿತರು ಮತ್ತು ಕುಟುಂಬ ಸದಸ್ಯರೊಂದಿಗೆ ಮುಹಮ್ಮದ್ ಮತ್ತು ಇಸ್ಲಾಮಿಕ್ ಇತಿಹಾಸದ ಬಗ್ಗೆ ಚರ್ಚೆಗಳಲ್ಲಿ ಭಾಗವಹಿಸುತ್ತಾರೆ.

**ಗಾಯನ:** ಭಾರತದಲ್ಲಿನ ಮುಸ್ಲಿಮರು ಮಿಲಾದ್ ಅನ್–ನಬಿ ಸಮಯದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಹಾಡುತ್ತಾರೆ. ಈ ರಜಾದಿನದ ಅತ್ಯಂತ ಜನಪ್ರಿಯ ಹಾಡುಗಳಲ್ಲಿ ಒಂದು ಮೌಲುದ್. ಇಸ್ಲಾಂ ಸಂಪ್ರದಾಯಗಳ ಪ್ರಕಾರ, ಈ ಹಾಡು ಅದೃಷ್ಟವನ್ನು ತರುತ್ತದೆ ಮತ್ತು ದೇವರಿಗೆ ಒಬ್ಬರ ನಿಷ್ಠೆಯನ್ನು ಪುನರುಚ್ಚರಿಸುತ್ತದೆ.

**ಬರಾ ವಫತ್:** ಭಾರತದಲ್ಲಿ ಮಿಲಾದ್ ಅನ್–ನಬಿ ಸಮಯದಲ್ಲಿ ಮುಸ್ಲಿಮರು ಭಾಗವಹಿಸುವ ಅನೇಕ ಸಂತೋಷದ ಹಬ್ಬದ ಚಟುವಟಿಕೆಗಳ ಜೊತೆಗೆ, ಅವರು ಬಾರಾಹ್ ವಫಾತ್ ಜೊತೆಗೆ ಆಚರಿಸುತ್ತಾರೆ. ಬಾರಾಹ್ ವಫಾತ್ ಒಂದು ಗಂಭೀರ ಹಬ್ಬವಾಗಿದ್ದು, ಪ್ರವಾದಿ ಮುಹಮ್ಮದ್ ಅವರ ಮರಣದ ಬಗ್ಗೆ ಜನರು ಶೋಕಿಸಲು ಅನುವು ಮಾಡಿಕೊಡುತ್ತದೆ. ಮುಹಮ್ಮದ್ ಅವರ ಅನಾರೋಗ್ಯದ ಹನ್ನೆರಡು ದಿನಗಳನ್ನು ಗೌರವಿಸುತ್ತದೆ ಮತ್ತು ಸ್ವರ್ಗಕ್ಕೆ ಅವರ ಅಂತಿಮ ಪಾಸಿಂಗ್. ಈ ಹಬ್ಬಕ್ಕೆ ಸಂಬಂಧಿಸಿದ ಅತ್ಯಂತ ಜನಪ್ರಿಯ ಕಾರ್ಯಕ್ರಮವೆಂದರೆ ಗಾಜಿನ ಪೆಟ್ಟಿಗೆಯ ಮೆರವಣಿಗೆ. ಈ ಸಂದರ್ಭದಲ್ಲಿ, ಮುಹಮ್ಮದ್ ಅವರ ಚಿಹ್ನೆಯನ್ನು ಗಾಜಿನ ಪೆಟ್ಟಿಗೆಯಲ್ಲಿ ಇರಿಸಿ ಸಾರ್ವಜನಿಕವಾಗಿ ಮೆರವಣಿಗೆ ಮಾಡಲಾಗುತ್ತದೆ. ॐ

# ಶಿಕ್ಷಕರ ದಿನ



ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಶಿಕ್ಷಕರಿಗೆ ವಿಶೇಷ ಸ್ಥಾನವಿದೆ. ಮನುಷ್ಯನನ್ನು ಮನುಷ್ಯನನ್ನಾಗಿ ಮಾಡುವವನು ಗುರು. ಮಾನವ ಜೀವನದಲ್ಲಿ ಶಿಕ್ಷಕನ ಸ್ಥಾನವು ದೇವರು ಮತ್ತು ಪೋಷಕರಿಗಿಂತ ಮೇಲಿದೆ.

ಶಿಕ್ಷಕರ ದಿನಾಚರಣೆ ಮಹತ್ವ :

ಗುರುರ್ಬ್ರಹ್ಮ, ಗುರುರ್ವಿಷ್ಣು ಗುರುರ್ದೇವೋ ಮಹೇಶ್ವರ:

ಗುರುಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ ।

ಶಿಕ್ಷಕನು ತನ್ನ ಶಿಷ್ಯನ ಜೀವನದಲ್ಲಿ ಮತ್ತು ಅವನ ವ್ಯಕ್ತಿತ್ವವನ್ನು ನಿರ್ಮಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾನೆ. ತಾಯಿಯೇ ಮೊದಲ ಗುರು ಎಂದು ಹೇಳಲಾಗುತ್ತದೆ, ಅವರು ತಮ್ಮ ಮಕ್ಕಳಿಗೆ ಜೀವನವನ್ನು ಒದಗಿಸುವ ಜೊತೆಗೆ ಜೀವನದ ಆಧಾರವನ್ನು ಸಹ ನೀಡುತ್ತಾರೆ.

ವ್ಯಕ್ತಿಯ ವ್ಯಕ್ತಿತ್ವವನ್ನು ನಿರ್ಮಿಸುವುದು ಬಹಳ ವಿಶಾಲವಾದ ಮತ್ತು ಕಷ್ಟಕರವಾದ ಕೆಲಸ. ಒಬ್ಬ ವ್ಯಕ್ತಿಗೆ ಶಿಕ್ಷಣ ನೀಡುವುದರ ಜೊತೆಗೆ ಅವನ ಚಾರಿತ್ರ್ಯ ಮತ್ತು ವ್ಯಕ್ತಿತ್ವವನ್ನು ನಿರ್ಮಿಸುವುದು ಕುಂಬಾರನು ಮಣ್ಣಿನಿಂದ ಮಡಕೆ ಮಾಡುವ ಕೆಲಸವನ್ನು ಮಾಡುವಂತೆಯೇ. ಹಾಗೆಯೇ ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವುದರೊಂದಿಗೆ ಅವರ ವ್ಯಕ್ತಿತ್ವವನ್ನೂ ರೂಪಿಸುತ್ತಾರೆ.

**ನಾವು ಶಿಕ್ಷಕರ ದಿನವನ್ನು ಯಾವಾಗ ಮತ್ತು ಏಕೆ ಆಚರಿಸುತ್ತೇವೆ?**

ಮಾಜಿ ರಾಷ್ಟ್ರಪತಿ ಡಾ.ಸರ್ವೆಪಲ್ಲಿ ರಾಧಾಕೃಷ್ಣ ಅವರ ಜನ್ಮದಿನವಾದ ಸೆಪ್ಟೆಂಬರ್ 5 ರಂದು ಭಾರತದಲ್ಲಿ ಶಿಕ್ಷಕರ ದಿನವನ್ನು ಆಚರಿಸಲಾಗುತ್ತದೆ. ತಮ್ಮ ಜನ್ಮದಿನದಂದು ಶಿಕ್ಷಕರ ದಿನಾಚರಣೆಯನ್ನು ಆಚರಿಸುವ ಬಯಕೆಯನ್ನು ಅವರು ತಮ್ಮ ವಿದ್ಯಾರ್ಥಿಗಳಲ್ಲಿ ವ್ಯಕ್ತಪಡಿಸಿದ್ದರು.

ಮಾಜಿ ರಾಷ್ಟ್ರಪತಿ ಡಾ. ರಾಧಾಕೃಷ್ಣನ್ ಅವರು ಸೆಪ್ಟೆಂಬರ್ 5, 1888 ರಂದು ತಮಿಳುನಾಡಿನ ತಿರುಮಣಿ ಗ್ರಾಮದಲ್ಲಿ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಅವರು ಬಾಲ್ಯದಿಂದಲೂ ಪುಸ್ತಕಗಳನ್ನು ಓದಲು ಇಷ್ಟಪಡುತ್ತಿದ್ದರು ಮತ್ತು ಸ್ವಾಮಿ ವಿವೇಕಾನಂದರಿಂದ ಹೆಚ್ಚು ಪ್ರಭಾವಿತರಾಗಿದ್ದರು. ಡಾ. ರಾಧಾಕೃಷ್ಣನ್ ಅವರು ಏಪ್ರಿಲ್ 17, 1975 ರಂದು ಚೆನ್ನೈನಲ್ಲಿ ನಿಧನರಾದರು.

ಮಾಜಿ ರಾಷ್ಟ್ರಪತಿ ಡಾ.ಸರ್ವೆಪಲ್ಲಿ ರಾಧಾಕೃಷ್ಣ ಅವರ ಗೌರವಾರ್ಥ ಅವರ ಜನ್ಮದಿನದಂದು ಭಾರತದಲ್ಲಿ ಶಿಕ್ಷಕರ ದಿನಾಚರಣೆ ಪ್ರಾರಂಭವಾಯಿತು. ಭಾರತದಲ್ಲಿ ಮೊದಲ ಬಾರಿಗೆ ಶಿಕ್ಷಕರ ದಿನವನ್ನು 5 ಸೆಪ್ಟೆಂಬರ್ 1962 ರಂದು ಆಚರಿಸಲಾಯಿತು.

ಪ್ರಪಂಚದಾದ್ಯಂತ 100 ಕ್ಕೂ ಹೆಚ್ಚು ದೇಶಗಳಲ್ಲಿ ಶಿಕ್ಷಕರ ದಿನವನ್ನು ಆಚರಿಸಲಾಗಿದ್ದರೂ, ಇತರ ದೇಶಗಳಲ್ಲಿ ಈ ದಿನವನ್ನು ವಿವಿಧ ದಿನಗಳಲ್ಲಿ ಆಚರಿಸಲಾಗುತ್ತದೆ. ಭಾರತದಲ್ಲಿ ಈ ದಿನವನ್ನು ಸೆಪ್ಟೆಂಬರ್ 5ರಂದು ಆಚರಿಸಲಾಗುತ್ತದೆ, ಆದರೆ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಶ್ವಸಂಸ್ಥೆಯ ಆಶ್ರಯದಲ್ಲಿ ಶಿಕ್ಷಕರ ದಿನವನ್ನು ಅಕ್ಟೋಬರ್ 5ರಂದು ಆಚರಿಸಲಾಗುತ್ತದೆ. ಈ ದಿನದಂದು ವಿಶ್ವದ ಎಲ್ಲಾ ಶಿಕ್ಷಕರನ್ನು ಅವರ ಅಮೂಲ್ಯ ಕೊಡುಗೆಗಾಗಿ ಗೌರವಿಸಲಾಗುತ್ತದೆ.

ಡಾ. ಸರ್ವಪಲ್ಲಿ ರಾಧಾಕೃಷ್ಣ ಅವರು "ವಿವಿಧ ಸಂಸ್ಕೃತಿಗಳ ನಡುವೆ ಸೇತುವೆಗಳನ್ನು ನಿರ್ಮಿಸಲು ನಾವು ಕೆಲಸ ಮಾಡುವ ಸಾಧನವೆಂದರೆ ಪುಸ್ತಕಗಳು." ಎಂದು ಹೇಳುತ್ತಿದ್ದರು:

ಡಾ. ಸರ್ವೆಪಲ್ಲಿ ರಾಧಾಕೃಷ್ಣ ಅವರ ಈ ಮಾತು ನಿಜವೂ ಪ್ರಸ್ತುತವೂ ಆಗಿರುವುದು ಮಾತ್ರವಲ್ಲದೆ, ಎರಡು ಸಂಸ್ಕೃತಿಗಳ ಹಾಗೂ ಮನುಷ್ಯರ ನಡುವೆ ಉತ್ತಮ ಬಾಂಧವ್ಯವನ್ನು ನಿರ್ಮಿಸಲು ಶಿಕ್ಷಣ ಅತ್ಯಂತ ಅಗತ್ಯವಾಗಿದೆ ಎಂದು ಹೇಳಿದ್ದಾರೆ.

ಶಿಕ್ಷಣ ಹರಡುವಿಕೆಯಿಂದ ಮಾತ್ರ ಸಮಾಜ ಅಥವಾ ದೇಶವನ್ನು ಕಟ್ಟಲು ಸಾಧ್ಯ. ವಿದ್ಯಾವಂತರಾಗಿರುವುದು ಯಾವಾಗಲೂ ಬಹಳ ಮುಖ್ಯ. ಶಿಕ್ಷಣವು ಉತ್ತಮ ಜೀವನದ ದೃಷ್ಟಿಗೆ ಆಧಾರವಾಗಿ ಕಾರ್ಯನಿರ್ವಹಿಸುತ್ತದೆ. ಇದರೊಂದಿಗೆ ಉತ್ತಮ ಮಾನವನಾಗುವಲ್ಲಿ ಶಿಕ್ಷಣವೂ ಪ್ರಮುಖ ಪಾತ್ರ ವಹಿಸುತ್ತದೆ. ಮನುಷ್ಯನನ್ನು ದಾರ್ಶನಿಕನನ್ನಾಗಿ ಮಾಡುವ ಮೂಲಕ ಅವನೊಳಗಿನ ಆಲೋಚನೆಗಳ ಹರಿವಿಗೆ ಸರಿಯಾದ ದಿಕ್ಕನ್ನು ಒದಗಿಸುವಂತಹ ಅಗತ್ಯ ಕೆಲಸವನ್ನು ಮಾಡುತ್ತದೆ, ಆದರೆ ಮನುಷ್ಯನಿಗೆ ಸರಿಯಾದ ಮಾರ್ಗದರ್ಶನ ನೀಡುವ ಸರಿಯಾದ ಶಿಕ್ಷಕ ಸಿಕ್ಕಾಗ ಮಾತ್ರ ಇದು ಸಾಧ್ಯ. ಮನುಷ್ಯನನ್ನು ಸಮರ್ಥನನ್ನಾಗಿ ಮಾಡುವ ಕೆಲಸವನ್ನು ಶಿಕ್ಷಕರಿಂದ ಮಾತ್ರ ಮಾಡಲಾಗುತ್ತದೆ.

ಶಿಕ್ಷಕರು ನಮ್ಮ ಜೀವನದಲ್ಲಿ ಮಾರ್ಗದರ್ಶನ ಮಾಡುತ್ತಾರೆ. ಜೀವನದಲ್ಲಿನ ಹೋರಾಟಗಳನ್ನು ತಟಸ್ಥತೆಯಿಂದ ಎದುರಿಸಲು ಶಿಕ್ಷಕರು ನಮ್ಮನ್ನು ಸಿದ್ಧಪಡಿಸುತ್ತಾರೆ. ಇದರಿಂದ ನಾವು ಜೀವನದಲ್ಲಿ ಯಾರ ಮುಂದೆಯೂ ತಲೆಬಾಗುವುದಿಲ್ಲ. ಶಿಕ್ಷಣವಿಲ್ಲದೆ ಉತ್ತಮ ಜೀವನದ ಪರಿಕಲ್ಪನೆಯು ಅಪೂರ್ಣವಾಗಿದೆ ಮತ್ತು ಶಿಕ್ಷಣದ ಜೊತೆಗೆ ಜೀವನದಲ್ಲಿ ಸ್ವಂತಿಕೆ ಮತ್ತು ಸೌಜನ್ಯವನ್ನು ಪಡೆಯುವುದು ಸಹ ಬಹಳ ಮುಖ್ಯವಾಗಿದೆ.

ವಿದ್ಯಾವಂತನಾಗುವುದರ ಜೊತೆಗೆ ಮನುಷ್ಯ ಸಂಸ್ಕಾರವಂತನಾಗುವುದು ಬಹಳ ಮುಖ್ಯ, ಒಬ್ಬ ವ್ಯಕ್ತಿ ಸುಸಂಸ್ಕೃತನಾಗಿದ್ದರೆ ಮಾತ್ರ ಅವನು ಮನುಷ್ಯ, ಇಲ್ಲದಿದ್ದರೆ ಪ್ರಾಣಿ ಎಂಬ ಬಿರುದನ್ನು ನೀಡಲಾಗುತ್ತದೆ. ನಾವು ಗುರುವಿನ ಮಾರ್ಗದರ್ಶನದಲ್ಲಿ ಬರುವುದು ಈ ಶೌರ್ಯವನ್ನು ಸಾಧಿಸಲು ಮಾತ್ರ, ನಾವು ಉತ್ತಮ ಜೀವನವನ್ನು ಪಡೆಯುವುದರ ಜೊತೆಗೆ ಉತ್ತಮ ಮಾನವರಾಗಬಹುದು, ಆದ್ದರಿಂದಲೇ ಮಾಜಿ ರಾಷ್ಟ್ರಪತಿ ಡಾ.ಸರ್ವೆಪಲ್ಲಿ ರಾಧಾಕೃಷ್ಣ ರವರು ಈ ಮಾತನ್ನು ಸದಾ ಹೇಳುತ್ತಿದ್ದರು.

ಶಿಕ್ಷಕರ ದಿನವನ್ನು ಮೂಲಭೂತವಾಗಿ ಆಚರಿಸಲಾಗುತ್ತದೆ ಇದರಿಂದ ನಾವು ನಮ್ಮ ಎಲ್ಲಾ ಶಿಕ್ಷಕರಿಗೆ ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಬಹುದು. ಈ ದಿನವನ್ನು ಆಚರಿಸುವ ಉದ್ದೇಶವು ನಮಗೆ ಉತ್ತಮ ಶಿಕ್ಷಣವನ್ನು ಒದಗಿಸಿದ ಮತ್ತು ನಮ್ಮ ವ್ಯಕ್ತಿತ್ವವನ್ನು ನಿರ್ಮಿಸಿದ್ದಕ್ಕಾಗಿ ಅವರಿಗೆ ಧನ್ಯವಾದ ಹೇಳುವುದಾಗಿದೆ.

ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕರ ಕೊಡುಗೆ ಅನುಪಮವಾಗಿದೆ, ಅದಕ್ಕಾಗಿ ಅವರಿಗೆ ಧನ್ಯವಾದ ಹೇಳಲು ಸಾಧ್ಯವಿಲ್ಲ. ಶಿಕ್ಷಕರು ಅರ್ಹರಾಗಿದ್ದರೆ ಮಾತ್ರ ರಾಷ್ಟ್ರದ ಅಭಿವೃದ್ಧಿ ಸಾಧ್ಯ. ಜಗತ್ತಿನ ಎಲ್ಲ ಗುರುಗಳು ಪೂಜ್ಯರಾದರೂ, ತಮ್ಮ ಕೃತಿಗಳ ಮೂಲಕ ಭಾರತವನ್ನು ಯಶಸ್ಸಿನ ಉತ್ತುಂಗಕ್ಕೆ ಕೊಂಡೊಯ್ಯುವ ಕೆಲವು ಶಿಕ್ಷಕರಿದ್ದರು.

**ಸಮೃದ್ಧಿ ಸುಜ್ಞಾನ**

ಒಬ್ಬ ಶಿಕ್ಷಕ ತಾನು ಕಲಿಯದೆ ಇನ್ನೊಬ್ಬರಿಗೆ ಕಲಿಸಲಾರ
ತಾನು ಉರಿಯದ ದೀಪ ಇನ್ನೊಂದು ದೀಪವನ್ನು
ಎಂದಿಗೂ ಬೆಳಗಿಸಲಾರದು.

ಅವರ ಪಟ್ಟಿ ದೊಡ್ಡದಾದರೂ ಇದರಲ್ಲಿ ರಾಜಾ ರಾಮ್ ಮೋಹನ್ ರಾಯ್, ಸ್ವಾಮಿ ವಿವೇಕಾನಂದ, ಡಾ. ಭೀಮ್ ರಾವ್ ಅಂಬೇಡ್ಕರ್, ಮೌಲಾನಾ ಅಬ್ದುಲ್ ಕಲಾಂ ಆಜಾದ್, ಎಪಿಜೆ ಅಬ್ದುಲ್ ಕಲಾಂ ಅವರು ತಮ್ಮ ರಾಷ್ಟ್ರ ನಿರ್ಮಾಣದಲ್ಲಿ ಅನಂತ ಕೊಡುಗೆ ನೀಡಿದ ಶಿಕ್ಷಕರು.

ಸಾಮಾಜಿಕವಾಗಿ ಮನುಷ್ಯರೊಂದಿಗೆ ಬಾಳುವುದು ಮಾನವ ಸಹಜ ಗುಣ. ಸಮಾಜವು ಅನೇಕ ಜನರಿಂದ ಮಾಡಲ್ಪಟ್ಟಿದೆ, ಅದರಲ್ಲಿ ಒಳ್ಳೆಯವರು ಮತ್ತು ಕೆಟ್ಟವರು ಇರುತ್ತಾರೆ. ನಿಸ್ಸಂಶಯವಾಗಿ, ಒಳ್ಳೆಯ ಜನರು ಸಮಾಜವನ್ನು ಉತ್ತಮಗೊಳಿಸಲು ಪ್ರಯತ್ನಿಸಿದರು, ಆದರೆ ಕೆಟ್ಟ ಜನರು ದುಷ್ಟತನ, ಹತಾಶೆ, ದ್ವೇಷ, ಕೆಡುಕು ಮುಂತಾದವುಗಳಿಗೆ ಜನ್ಮ ನೀಡಿದರು. ಅಂತಹ ಪರಿಸ್ಥಿತಿಯಲ್ಲಿ, ನಮ್ಮ ಶಿಕ್ಷಕರು ತಮ್ಮ ಕೊಡುಗೆಯ ಮೂಲಕ ಆ ಹತಾಶೆ, ಕೆಡುಕುಗಳು, ಅಜ್ಞಾನ ಇತ್ಯಾದಿಗಳನ್ನು ತೆಗೆದುಹಾಕಲು ಪ್ರಯತ್ನಿಸಿದ್ದಾರೆ. ಇವತ್ತಿಗೂ ನಮ್ಮ ನಾಡಿನಲ್ಲಿ ಇಂತಹ ಅನೇಕ ಶಿಕ್ಷಕರ ಬಗ್ಗೆ ಕೇಳುವ ಉದಾಹರಣೆಗಳಿವೆ,

ಇಂದು ನಮ್ಮ ದೇಶವು ಯಶಸ್ಸಿನ ಹಾದಿಯಲ್ಲಿ ವೇಗವಾಗಿ ಸಾಗುತ್ತಿರುವುದು ನಮ್ಮ ಶಿಕ್ಷಕರ ಕೊಡುಗೆಯಾಗಿದೆ. ಇಂದು ಜಗತ್ತಿನಾದ್ಯಂತ ಭಾರತೀಯರು ಪ್ರತಿಯೊಂದು ಕ್ಷೇತ್ರದಲ್ಲೂ ತಮ್ಮ ದೇಶದ ಹೆಸರನ್ನು ಉಜ್ವಲಗೊಳಿಸುತ್ತಿದ್ದಾರೆ. ಇಂದು ವಿಶ್ವದ ಪ್ರತಿಯೊಬ್ಬ ವೈದ್ಯ ಅಥವಾ ಇಂಜಿನಿಯರ್ ಒಬ್ಬ ಭಾರತೀಯ. ವಿಜ್ಞಾನ ಕ್ಷೇತ್ರದಲ್ಲಿ ನಾವು ಅಮೆರಿಕ ಮತ್ತು ರಷ್ಯಾದಂತಹ ಮಹಾನ್ ಶಕ್ತಿಗಳಿಗೆ ಸಮನಾಗಿ ನಿಲ್ಲುವಂತೆ ಮಾಡಿದ್ದಾರೆ.

ರಾಜಕೀಯ, ಅರ್ಥಶಾಸ್ತ್ರ, ಕಲೆ ಮುಂತಾದ ಕ್ಷೇತ್ರಗಳಲ್ಲಿ ಭಾರತೀಯರ ಕಾರ್ಯವು ಪ್ರಪಂಚದಾದ್ಯಂತ ಮೆಚ್ಚುಗೆ ಪಡೆದಿದೆ. ಈ ಕ್ಷೇತ್ರಗಳಲ್ಲಿ ಎಷ್ಟು ಭಾರತೀಯರು ಜಗತ್ತಿಗೆ ಸ್ಫೂರ್ತಿಯಾಗಿದ್ದಾರೆಂದು ಹೇಳುವುದಕ್ಕೆ ಸಾಧ್ಯವೇ? ನಿಸ್ಸಂಶಯವಾಗಿ, ನಮ್ಮ ದೇಶದ ಶಿಕ್ಷಕರಿಲ್ಲದೆ ಈ ಸ್ಥಾನವು ಅಸಾಧ್ಯವಾಗುತ್ತಿತ್ತು, ಇದಕ್ಕಾಗಿ ಅವರಿಗೆ ನೀಡಬಹುದಾದ ಕೃತಜ್ಞತೆಯ ಪ್ರಮಾಣವು ಕಡಿಮೆಯಾಗಿದೆ. ॐ

**ಸಂಪ್ರೀತಿ ಸಮೃದ್ಧಿ** ಮಾಸ ಪತ್ರಿಕೆ

#66, ಸಂಪ್ರೀತಿ – ಸದನ, ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ, ಮಾಗಡಿ ಟೌನ್, ರಾಮನಗರ ಜಿಲ್ಲೆ – 562 120


ದೂರವಾಣಿ : 8971608213. ಇ–ಮೇಲ್ : sampreethisamruddhi@gmail.com

**ಪತ್ರಿಕೆಯ ಚಂದಾವಿವರ**

10 ವರ್ಷಕ್ಕೆ ರೂ. 2000/– (ಎರಡು ಸಾವಿರ ರೂಗಳು),
05 ವರ್ಷಕ್ಕೆ ರೂ. 1000/– (ಒಂದು ಸಾವಿರ ರೂಗಳು)
02 ವರ್ಷಕ್ಕೆ ರೂ. 500/– (ಐದು ನೂರು ರೂಗಳು)

ಚಂದಾ ಹಣವನ್ನು ಚೆಕ್ ಮೂಲಕ : Publisher Sampreethi Samruddhi monthly magazine,
ಅಥವಾ ಗೂಗಲ್ ಪೇ ಸಂಖ್ಯೆ : 98455 65696 ಮೂಲಕ ಸಂದಾಯ ಮಾಡಬಹುದು.
ಹೆಚ್ಚಿನ ವಿವರಗಳಿಗೆ ಈ ಸಂಖ್ಯೆಯನ್ನು ಸಂಪರ್ಕಿಸಿ : 8971608213

# ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನ



2007 ರಲ್ಲಿ ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿಯು ಪ್ರಜಾಪ್ರಭುತ್ವದ ತತ್ವಗಳನ್ನು ಉತ್ತೇಜಿಸುವ ಮತ್ತು ಎತ್ತಿಹಿಡಿಯುವ ಉದ್ದೇಶದಿಂದ ಸೆಪ್ಟೆಂಬರ್ 15 ಅನ್ನು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನಾಗಿ ಆಚರಿಸಲು ನಿರ್ಧರಿಸಿತು ಹಾಗೂ ಎಲ್ಲಾ ಸದಸ್ಯ ರಾಷ್ಟ್ರಗಳು ಮತ್ತು ಸಂಸ್ಥೆಗಳನ್ನು ಈ ದಿನವನ್ನು ಸರಿಯಾದ ರೀತಿಯಲ್ಲಿ ಸ್ಮರಿಸಲು ಆಹ್ವಾನಿಸಿತು.

ಶಾಂತಿಯುತ "ಪೀಪಲ್ ಪವರ್ ರೆವಲ್ಯೂಷನ್" ಎಂದು ಕರೆಯಲ್ಪಡುವ ಫರ್ಡಿನಾಂಡ್ ಮಾರ್ಕೋಸ್ ಅವರ 20 ವರ್ಷಗಳ ಸರ್ವಾಧಿಕಾರವನ್ನು ಉರುಳಿಸಿದ ನಂತರ ಫಿಲಿಪೈನ್ಸ್‌ನ ಅಧ್ಯಕ್ಷ ಕೊರಾಜನ್ ಸಿ. ಅಕ್ವಿನೊ ಅವರ ಉಪಕ್ರಮದ ಅಡಿಯಲ್ಲಿ 1988 ರಲ್ಲಿ ಹೊಸ ಮತ್ತು ಮರುಸ್ಥಾಪಿತ ಪ್ರಜಾಪ್ರಭುತ್ವಗಳ ಕುರಿತು ಅಂತರರಾಷ್ಟ್ರೀಯ ಸಮ್ಮೇಳನಗಳು ಪ್ರಾರಂಭವಾದವು. ಆರಂಭದಲ್ಲಿ ಅಂತರ–ಸರ್ಕಾರಿ ವೇದಿಕೆ, ICNRD ಪ್ರಕ್ರಿಯೆಯು ಸರ್ಕಾರಗಳು, ಸಂಸತ್ತುಗಳು ಮತ್ತು ನಾಗರಿಕ ಸಮಾಜದ ಭಾಗವಹಿಸುವಿಕೆಯೊಂದಿಗೆ ತ್ರಿಪಕ್ಷೀಯ ರಚನೆಯಾಗಿ ಅಭಿವೃದ್ಧಿಗೊಂಡಿತು. 2006 ರಲ್ಲಿ ಕತಾರ್‌ನ ದೋಹಾದಲ್ಲಿ ನಡೆದ ಆರನೇ ಸಮ್ಮೇಳನವು (ICNRD-6) ಪ್ರಕ್ರಿಯೆಯ ತ್ರಿಪಕ್ಷೀಯ ಸ್ವರೂಪವನ್ನು ಬಲಪಡಿಸಿತು ಮತ್ತು ಪ್ರಜಾಪ್ರಭುತ್ವದ ಮೂಲಭೂತ ತತ್ವಗಳು ಮತ್ತು ಮೌಲ್ಯಗಳನ್ನು ಪುನರುಚ್ಚರಿಸುವ ಘೋಷಣೆ ಮತ್ತು ಕ್ರಿಯಾ ಯೋಜನೆಯೊಂದಿಗೆ ಮುಕ್ತಾಯವಾಯಿತು.

ICNRD-6 ರ ಫಲಿತಾಂಶದ ನಂತರ, ಪ್ರಕ್ರಿಯೆಯ ಅಧ್ಯಕ್ಷ ಕತಾರ್ ಸ್ಥಾಪಿಸಿದ ಸಲಹಾ ಮಂಡಳಿಯು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಉತ್ತೇಜಿಸಲು ನಿರ್ಧರಿಸಿತು. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ನಿರ್ಣಯದ ಪಠ್ಯವನ್ನು ರಚಿಸುವಲ್ಲಿ ಕತಾರ್ ಮುಂದಾಳತ್ವ ವಹಿಸಿತು ಮತ್ತು UN ಸದಸ್ಯ ರಾಷ್ಟ್ರಗಳೊಂದಿಗೆ ಸಮಾಲೋಚನೆಗಳನ್ನು ನಡೆಸಿತು. IPUನ ಸಲಹೆಯ ಮೇರೆಗೆ, ಸೆಪ್ಟೆಂಬರ 15 ರಂದು (ಪ್ರಜಾಪ್ರಭುತ್ವದ ಸಾರ್ವತ್ರಿಕ ಘೋಷಣೆಯ ದಿನಾಂಕ) ಅಂತರರಾಷ್ಟ್ರೀಯ ಸಮುದಾಯವು ಪ್ರತಿ ವರ್ಷ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವದ ದಿನವನ್ನು ಆಚರಿಸುವ ದಿನವಾಗಿ ಆಯ್ಕೆಮಾಡಲಾಯಿತು. "ಹೊಸ ಅಥವಾ ಮರುಸ್ಥಾಪಿತ ಪ್ರಜಾಪ್ರಭುತ್ವಗಳನ್ನು ಉತ್ತೇಜಿಸಲು ಮತ್ತು ಕ್ರೋಢೀಕರಿಸಲು ಸರ್ಕಾರಗಳ ಪ್ರಯತ್ನಗಳ ವಿಶ್ವಸಂಸ್ಥೆಯ ವ್ಯವಸ್ಥೆಯಿಂದ ಬೆಂಬಲ," ಎಂಬ ಶೀರ್ಷಿಕೆಯ ನಿರ್ಣಯವನ್ನು 8 ನವೆಂಬರ್ 2007 ರಂದು ಒಮ್ಮತದಿಂದ ಅಂಗೀಕರಿಸಲಾಯಿತು.

**ಇತಿಹಾಸ**

15 ಸೆಪ್ಟೆಂಬರ್ 2008 ರಂದು ಮೊದಲ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಗುರುತಿಸಲು, ಐಪಿಯು ಜಿನೀವಾದಲ್ಲಿ ಹೌಸ್ ಆಫ್ ಪಾರ್ಲಿಮೆಂಟ್ಸ್‌ನಲ್ಲಿ ವಿಶೇಷ ಕಾರ್ಯಕ್ರಮವನ್ನು ನಡೆಸುತ್ತದೆ. ಪ್ರಜಾಪ್ರಭುತ್ವದ ಮೂಲಾಧಾರವಾಗಿರುವ ಸಂಸತ್ತಿನ ಪಾತ್ರವನ್ನು ಎತ್ತಿ ಹಿಡಿಯಲು ಆ ದಿನದಂದು ತಮ್ಮದೇ ಆದ ಪ್ರಜಾಪ್ರಭುತ್ವ-ಸಂಬಂಧಿತ ಚಟುವಟಿಕೆಗಳನ್ನು ಆಯೋಜಿಸಲು ರಾಷ್ಟ್ರೀಯ ಸಂಸತ್ತುಗಳನ್ನು ಆಹ್ವಾನಿಸಲಾಗುತ್ತದೆ.

2013 ರಲ್ಲಿ, IPU ಪ್ರಪಂಚದಾದ್ಯಂತ 162 ದೇಶಗಳಲ್ಲಿ ತನ್ನ ಸದಸ್ಯ ಸಂಸತ್ತುಗಳ ಮೂಲಕ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಪ್ರಚಾರ ಮಾಡಿತು. ಇದರ ಪರಿಣಾಮವಾಗಿ, ಪ್ರಪಂಚದಾದ್ಯಂತದ ಹಲವಾರು ಸಂಸತ್ತುಗಳು ತಮ್ಮ ಕಾರ್ಯಕ್ರಮಗಳನ್ನು ಸೆಪ್ಟೆಂಬರ್ 15 ರಂದು ಅಥವಾ ಅದರ ಹತ್ತಿರ ನಡೆಸುವುದಾಗಿ ಘೋಷಿಸಿದವು.

ಪ್ರಪಂಚದಾದ್ಯಂತ ಭ್ರಮನಿರಸನಗೊಂಡಿರುವ ಮತ್ತು ದೂರವಾದ ಯುವಕರು ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದರೆ ಕ್ರಮ ಮತ್ತು ಮನಸ್ಥಿತಿಯಲ್ಲಿ ಬದಲಾವಣೆಗಳನ್ನು IPU ಒತ್ತಾಯಿಸಿದೆ. ತನ್ನ ಪತ್ರಿಕಾ ಪ್ರಕಟಣೆಯಲ್ಲಿ, ಐಪಿಯು ಅಧ್ಯಕ್ಷ ಅಬ್ದೆಲ್‌ವಾಹದ್ ರಾಡಿ, "ಯುವಕರನ್ನು ಯಾವಾಗಲೂ ಭವಿಷ್ಯದೊಂದಿಗೆ ಜೋಡಿಸುವುದು ಕ್ಲೀಷೆಯಾಗಿದೆ. ಯುವಕರು ಭವಿಷ್ಯವನ್ನು ವ್ಯಾಖ್ಯಾನಿಸುವ ಶಕ್ತಿಯನ್ನು ಹೊಂದಿರುತ್ತಾರೆ, ಆದರೆ ವರ್ತಮಾನವನ್ನು ನಿರ್ಧರಿಸುತ್ತಾರೆ. ಆದರೆ, ಅವರು ಹೆಚ್ಚಾಗಿ ಇರುವುದಿಲ್ಲ. ಔಪಚಾರಿಕ ನಿರ್ಧಾರ ತೆಗೆದುಕೊಳ್ಳುವ ರಾಜಕೀಯ ಇದು ಬದಲಾಗಬೇಕು ಎಂದು ತಿಳಿಸಿತು.

ಯುವಕರ ಭಾಗವಹಿಸುವಿಕೆಗೆ ವಿಶೇಷ ಅರ್ಥವಿದೆ ಮತ್ತು 2010ರಲ್ಲಿ IPU ಅಸೆಂಬ್ಲಿ ಅಂಗೀಕರಿಸಿದ ನಿರ್ಣಯದ ಅನುಸರಣೆಯಲ್ಲಿ, ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಯುವಕರು ಮತ್ತು ಮಹಿಳೆಯರ ಒಳಗೊಳ್ಳುವಿಕೆಯನ್ನು ಉತ್ತೇಜಿಸುವ ಕಾರ್ಯಕ್ರಮವು ಚಾಲನೆಯಲ್ಲಿದೆ ಎಂದು IPU ಹೇಳುತ್ತದೆ. 10 ಮತ್ತು 11 ಅಕ್ಟೋಬರ್ 2014 ರಂದು ಯುವ ಸಂಸದರ ಮೊದಲ ಜಾಗತಿಕ ಸಮ್ಮೇಳನವನ್ನು ಆಯೋಜಿಸುವುದಾಗಿ ಘೋಷಿಸಿತು ಮತ್ತು ಎಲ್ಲಾ ಸಂಸತ್ತುಗಳಿಗೆ ಹಾಜರಾಗಲು ಆಹ್ವಾನಿಸಲಾಯಿತು. ॐ

## ಸಂತನ ಸಂದೇಶಗಳು ನೀಗಲಿವೆ ಸಂದೇಹಗಳು

ಸಿದ್ದೇಶ್ವರ ಗುರೂಜಿ, ಪುಸ್ತಕಗಳಿಂದ

ಜನರ ಜೀವನ, ಪರಿಪೂರ್ಣ ಬದುಕಿಗೆ ದಾರದೀಪವಾಗಿದ್ದ ಸಿದ್ದೇಶ್ವರ ಸ್ವಾಮೀಜಿಗಳ ಸಂದೇಶಗಳು ಜ್ಞಾನಯೋಗಾಶ್ರಮದ ಸಿದ್ದೇಶ್ವರ ಶ್ರೀಗಳು ಜನರ ಜೀವನ, ಪರಿಪೂರ್ಣ ಬದುಕಿಗೆ ದಾರಿ ದೀಪವಾಗಿದ್ದರು.

ವಿಜಯಪುರದ ಜ್ಞಾನಯೋಗಾಶ್ರಮದ ಸ್ವಾಮೀಜಿಗಳು, ಶತಮಾನದ ಸಂತ ಸಿದ್ದೇಶ್ವರ ಶ್ರೀಗಳು ಇವತ್ತು ನಮ್ಮೊಂದಿಗೆ ಇಲ್ಲದಿದ್ದರೂ ಅವರ ಪ್ರವಚನ, ಜನರ ಜೀವನ, ಪರಿಪೂರ್ಣ ಬದುಕಿಗೆ ದಾರಿ ದೀಪವಾಗಿದ್ದ ಸಂದೇಶಗಳು, ಹಿತ ನುಡಿಗಳು ಎಂದೆಂದಿಗೂ ಜೀವಂತ.

ಸಿದ್ದೇಶ್ವರ ಸ್ವಾಮೀಜಿಗಳು ರಾಜ್ಯ, ರಾಷ್ಟ್ರ ಹಾಗೂ ವಿದೇಶಗಳಲ್ಲೂ ಪ್ರವಚನಗಳನ್ನು ನೀಡಿದ್ದಾರೆ. ಆಧ್ಯಾತ್ಮಿಕ ಚಿಂತಕರು ಹಾಗೂ ಖ್ಯಾತ ಪ್ರವಚನಕಾರರಾಗಿದ್ದ ಸಿದ್ದೇಶ್ವರ ಸ್ವಾಮೀಜಿಗಳು ಹಿತ ನುಡಿಗಳು ಮತ್ತು ಸಂದೇಶಗಳು ಇಲ್ಲಿವೆ.

1. ಅಡವಿಯಲ್ಲಿ ದನಗಳನ್ನು ಕಾಯುವ ದನಗಾಹಿ ಕೂಡ ನಿಸರ್ಗದ ಮಡಿಲಲ್ಲಿ ಹಾಡುತ್ತ–ಆಡುತ್ತ ಆನಂದವಾಗಿರುತ್ತಾನೆ. ದನಗಳು ಕೂಡ ಅಷ್ಟೇ ಆನಂದವಾಗಿರುತ್ತವೆ. ಇನ್ನು ಅರಮನೆಯಂಥ ಮನೆಯಲ್ಲಿದ್ದೂ ಸಿರವಂತರು ಆನಂದವಾಗಿರದಿದ್ದರೆ ಆ ದನಗಾಯಿ ಮತ್ತು ದನಗಳೇ ಸಿರಿವಂತರಿಗಿಂತ ಭಾಗ್ಯವಂತರೆಂದು ಹೇಳಬಹುದಲ್ಲವೇ? ಇದರರ್ಥ ನಮ್ಮಲ್ಲಿ ಸಂಪತ್ತು ಇರಬಾರದೆಂದಲಲ್ಲ. ಸಂಪತ್ತು ಸಾಕಷ್ಟಿರಲಿ ಜೊತೆಗೆ ಸಂತೃಪ್ತಿ ಇರಲಿ.

2. ಮಾನವನ ದುರಾಸೆಯಿಂದಾಗಿ ಇಂದು ನಿಸರ್ಗ ಸ್ವರ್ಗವೂ ನರಕವಾಗುತ್ತಿದೆ. ನೀರಿನಿಂದ ಹಿಡಿದು ಎಲ್ಲವೂ ಮಾರಾಟವಾಗುತ್ತಿದೆ. ನಾಳೆ ಗಾಳಿಯೂ ಮಾರಾಟವಾಗಬಹುದು. ಇದಕ್ಕೆಲ್ಲ ಒಂದೇ ಪರಿಹಾರವೆಂದರೆ ಮನುಷ್ಯನು ಬರೀ ಸಂಪತ್ತನ್ನು ಗಳಿಸಬಾರದು ಜೊತೆಗೆ ಸಂತೃಪ್ತಿಯನ್ನು ಗಳಿಸಬೇಕು.

3. ಮನಸ್ಸಿದ್ದರೆ ದಾರಿ ಖಂಡಿತ ದೊರಕುತ್ತದೆ. ಇಲ್ಲವಾದರೆ ಅದೇ ಮನಸ್ಸು ಕಾರಣ ಹುಡುಕುತ್ತದೆ.

4. ಯಾರ ನೋವಿಗೆ ಯಾರು ಹೊಣೆಗಾರರು, ನಿನ್ನ ಕಣ್ಣೀರಿಗೆ ಯಾರು ಮಗುವರು?
ನಿನಗೆ ನೀನೆ ಮಿತ್ರ, ನಿನಗೆ ನೀನೆ ಶತ್ರು, ನಿನ್ನಿಂದಲೇ ಶಾಂತಿ, ನಿನ್ನಿಂದಲೇ ಕ್ರಾಂತಿ.

5. ಸತ್ಯವೂ ಇಲ್ಲ, ಅಸತ್ಯವೂ ಇಲ್ಲ. ಸಹಜವೂ ಇಲ್ಲ, ಅಸಹಜವೂ ಇಲ್ಲ. ನಾನೂ ಇಲ್ಲ. ನೀನೂ ಇಲ್ಲ. ಇಲ್ಲ, ಇಲ್ಲ ಎಂಬುದು ತಾನಿಲ್ಲ. ಗುಹೇಶ್ವರನೆಂಬುದು ತಾ ಬಯಲು ಅಂತ್ಯಃ ಪ್ರಣಾಮಾಂಜಲಿ

6. ಈ ಜಗತ್ತು ದೇವ ನಿರ್ಮಿತಿಯೇ ವಿನಃ ಮಾನವ ನಿರ್ಮಿತವಲ್ಲ. ಇದು ಕ್ಷುಲ್ಲಕವಲ್ಲ, ತುಚ್ಛವಲ್ಲ, ದುಃಖಮಯವೂ ಅಲ್ಲ, ಬದುಕಲು ಬಂದರೆ ಇದೇ ಜಗತ್ತು ಸ್ವರ್ಗವಾಗುತ್ತದೆ. ದೇವನಿರ್ಮಿತವಾದ ಈ ಜಗತ್ತಿನಲ್ಲಿ ಪವಿತ್ರ ಅಪವಿತ್ರ ಎಂದಿಲ್ಲ. ಇಲ್ಲ ಹಗಲು ಎಷ್ಟು ಪವಿತ್ರವೋ ರಾತ್ರಿಯೂ ಅಷ್ಟೇ ಪವಿತ್ರ. ರಾತ್ರಿಯಿರುವುದಿಂದಲೇ ತಾನೆ ಚರಾಚರ ಜಗವೆಲ್ಲವೂ ವಿಶ್ರಾಂತಿಯನ್ನು ನಿದ್ರಾನಂದವನ್ನು ಪಡೆಯುವುದು. ಜನನವೂ ಪವಿತ್ರ, ಮರಣವೂ ಪವಿತ್ರ. ಮರಣವಿದ್ದರೇ ಜನನಕ್ಕೆ ಅವಕಾಶ. ಅರಳಿದ ಹೂ ಬಾಡೇ ಇದ್ದರೆ ಮತ್ತೊಂದು ಹೂ ಅರಳುವುದಾರೂ ಹೇಗೆ? ಇಂಥ ಪವಿತ್ರವಾದ ಜಗದಲ್ಲಿ ನಾವು ಹೇಗೆ ಬದುಕಬೇಕೆಂಬುದನ್ನು ಈಶಾವಾಸ್ಯೋಪನಿಷತ್ತಿನ ಒಂದು ಮಂತ್ರವು ತುಂಬಾ ಸ್ವಾರಸ್ಯಕರವಾಗಿ ತಿಳಿಸತ್ತದೆ.

7. ಸೂರ್ಯನ ಕಿರಣಗಳು ಕೊಳಕು ಇರುವ ಜಾಗಕ್ಕೂ ಹೋಗುತ್ತದೆ. ಆದರೆ ಅದು ಕೊಳಕಾಗುವುದಿಲ್ಲ. ನಾವು ಬದುಕಿನಲ್ಲಿ ಸೂರ್ಯನ ಕಿರಣಗಳಂತೆ ಆಗಬೇಕು. ಯಾವ ಜಾಗಕ್ಕೆ ಹೋದರೂ ಯಾರ ಜೊತೆ ಇದ್ದರೂ ನಾವು ನಾವಾಗಿರಬೇಕು. ಕೊಳಕಾಗಬಾರದು.

8. ಲೋಕದ ವಸ್ತುಗಳನ್ನು ಇಂದ್ರಿಯಗಳ ಮೂಲಕಕ ಅನುಭವಿಸಿ ಆನಂದಿಸುವವರು ಲೌಕಿಕರು. ಅಲೌಕಿಕವಾದ ಸತ್ಯ ವಸ್ತುವನ್ನು ಅರಿತು ಅಂತರಂಗದಲ್ಲಿ ಅನುಭವಿಸಿ ಆನಂದಿಸುವವರು ಅಲೌಕಿಕರು.

9. ಸತ್ಯದ ಶೋಕನಾದ ಸಾಧಕನು ಮೊಟ್ಟಮೊದಲು ಮಾಡಬೇಕಾದ ಮಹತ್ತರ ಕಾರ್ಯವೆಂದರೆ ತನ್ನ ಹೃದಯದಲ್ಲಿ ಪ್ರೇಮದ ಜ್ಯೋತಿಯನ್ನು ಹೊತ್ತಿಸುವುದು.

10. ಕುದಿಯುವವರು ಕುದಿಯಲಿ, ಉರಿಯುವವರು ಉರಿಯಲಿ, ನಿನ್ನ ಪಾಡಿಗೆ ನೀನಿರು...! ಕುದಿಯುವವರು ಆವಿಯಾಗುತ್ತಾರೆ, ಉರಿಯುವವರು ಬೂದಿಯಾಗುತ್ತಾರೆ.

11. ಮನೆ ಕಟ್ಟುವಾಗ ಯಾರೂ ಬಂದು ಸಹಾಯ ಮಾಡುವುದಿಲ್ಲಾ ನಂತರ ಗೃಹ ಪ್ರವೇಶಕ್ಕೆ ಎಲ್ಲರು ಬಂದು ಹಾರೈಸಿ ಉಡುಗೊರೆ ಕೊಡುತ್ತಾರೆ. ಹಾಗೆ ಜೀವನದಲ್ಲಿ ನಾವು ಸಾಧನೆ ಮಾಡಲು ಹೊರಟಾಗ ಯಾರು ಸಹಾಯ ಮಾಡುವುದಿಲ್ಲ. ನಂತರ ಗುರಿ ತಲುಪಿದ ಮೇಲೆ ಎಲ್ಲರೂ ಬಂದು ಹಾರೈಸುತ್ತಾರೆ. ಇದೆ ನಿಜವಾದ ಪ್ರಪಂಚ.

12. ನೀವು ಶೂನ್ಯದಂತೆ ಮೌನವಾಗಿದ್ದರೆ ನಿಮಗೆ ಬೆಲೆ ಬರತೈತಿ. ಬೆಲೆ ಹೆಚ್ಚಾಗ್ತದ. 1 ಸಂಖ್ಯೆ ಮುಂದ ಎಷ್ಟು ಶೂನ್ಯ ಇರತಾವ ಅಷ್ಟ ಆ ಸಂಖ್ಯೆಯ ಬೆಲೆ ಹೆಚ್ಚಾಗ್ತದ. ಅಕಸ್ಮಾತ್ ಶೂನ್ಯ ತೆಗೆದಬಿಟ್ಟರ ಸಂಖ್ಯೆಗೆ ಬೆಲೆ ಎಲ್ಲ ಬರತಹ ಹೇಳಿ! ಆದರ ಆ ಶೂನ್ಯ ಯಾವಾಗಲೂ ಗರ್ವ ಪಡೋದಿಲ್ಲ. ಮೌನವಾಗಿ ಕುಳಿತಿರದ. ಹಂಗ ಎಲ್ಲರೂ ಕುಳಿತಾರ ಅಂತ ನಮಗೆ ಬೆಲೆ ಬಂದಾದ. ನಮ್ಮಷ್ಟಕ್ಕೆ ನಾವು ಸ್ವತಂತ್ರರಲ್ಲ. ಜಗತ್ತಿನ ಮೇಲೆ ಅವಲಂಬಿತರಾಗಿದ್ದೇವೆ. ಸಣ್ಣೋರ ಅದಾರ ಅಂತ ದೊಡ್ಡವರು ಕುಂತಾರ. ಇಲ್ಲಿ ಯಾರೂ ದೊಡ್ಡವರಲ್ಲ. ಯಾರೂ ಸಣ್ಣವರಲ್ಲ. ಎಲ್ಲರೂ ಕೂಡಿ ಬದುಕಬೇಕು. ಸಣ್ಣೋರ, ದೊಡ್ಡವರು ಅಂತ ತಿರಸ್ಕರಿಸಬಾರದು. ಎಲ್ಲರೂ ಬೇಕಾಗ್ತಾರ. ॐ

Printed by Arvind, Published Edited and Owned by Dr. D.C. Ramachandra, No.66, Doddasomanahalli, Magadi Tq, Ramanagar Dist. and Printed at Computer World, Near G.T. Mall, Mallige Thota, Magadi Road, Bengaluru - 560 023. **Editor: Dr. C. Nanjundaiah.**



|| JAI SRI GURUDEV ||

SRI ADICHUNCHANAGIRI SHIKSHANA TRUST(R)


# Adichunchanagiri Institute of Technology

**APPROVED BY AICTE NEW DELHI AND RECOGNIZED BY GOVT. OF KARNATAKA. ACCREDITED BY NAAC WITH "A" GRADE (CYCLE - II)**

CHIKKAMAGALURU







GOVERNMENT OF KARNATAKA HAS RECOGNIZED ADICHUNCHANAGIRI INSTITUTE OF TECHNOLOGY IN " SUPER " 30

GRADED A BY NAAC

CERTIFICATE OF ACCREDITATION

200+ UNIVERSITY RANKS

**B.E.**
**CET CODE - E064,**
**COMEDK CODE - E004**

**M.Tech**
**CET CODE - T803**

**MBA**
**CET CODE - B109**

- A — WASTE MANAGEMENT
- A+ — GREEN COVER ON CAMPUS
- A+ — SURFACE WATER HARVESTING
- A+ — ROOFTOP WATER HARVESTING
- A+ — ROOFTOP SOLAR SYSTEM

## ADMISSIONS OPEN

## COURSES OFFERED

### B.E.COURSES

1. ARTIFICIAL INTELLIGENCE AND MACHINE LEARNING
2. CIVIL ENGINEERING
3. COMPUTER SCIENCE AND ENGINEERING
4. COMPUTER SCIENCE AND ENGINEERING (DATA SCIENCE)
5. ELECTRONICS AND COMMUNICATION ENGINEERING
6. ELECTRICAL AND ELECTRONICS ENGINEERING
7. INFORMATION SCIENCE AND ENGINEERING
8. MECHANICAL ENGINEERING

### MASTER DEGREE COURSES

1. STRUCTURAL ENGINEERING (Civil. Engg.,)
2. COMPUTER SCIENCE AND ENGINEERING (CS & Engg.,)
3. DIGITAL ELECTRONICS AND COMMUNICATION SYSTEM (E & C Engg.,)
4. MBA (MASTER OF BUSINESS ADMINISTRATION)

## OUR TOP RECRUITERS

Clarivate Analytics, TCS, Cognizant, Rakuten, TEKsystems, HITACHI, Mercedes-Benz, wipro, HEXAWARE, IBM, Infosys, Capgemini

## OUR PLACEMENT HIGHLIGHTS

- MINIMUM 500+ JOB OFFERS EVERY YEAR
- 50+ CAMPUS DRIVES EVERY YEAR
- MINIMUM 3.25LPA TO MAXIMUM 15LPA PACKAGE OFFERS
- 50+ PLACEMENTS IN FORTUNE 500 COMPANIES
- TRAINING AND PLACEMENT CELL FOR STUDENTS

**STUDENTS PLACED IN MERCEDES BENZ -2023 BATCH**




**10 LAKHS PER ANNUM**

**STUDENTS PLACED IN CLARIVATE ANALYTICS -2023 BATCH**




**8.25 LAKHS PER ANNUM**

**PLACED IN AMADUES LABS**




**11.79 LAKHS PER ANNUM**

PRINCIPAL: 9448665711, DIRECTOR: 9448480343, REGISTRAR:9141133697/08262 220444 WWW.AITCKM.IN

Registered with Registrar of News Papers for India No.KARKAN/2018/76081, **Sampreethi Samruddhi,** September- 2023.
License to post without prepayment. License No.**KA/BG/CNA/119/2022-2024,**
Date of publication: **28.08.2023.** Posted at **Magadi Sub Post Office-562120** on **29th** of every month

|| Jai Sri Gurudev ||





# Adichunchanagiri University

## BGS Institute of Technology

BG Nagara-571448, Nagamangala Taluk, Mandya District, Karnataka-NH-75

# Admissions Open

BGSIT CET Code: E142




**BE Courses:**

- Civil Engg.
- Mechanical Engg.
- Computer Science & Engg.
- Information Science & Engg.
- Electronics & Communication Engg.
- Artificial Intelligence & Machine Learning(AI&ML)

**P.G Courses:**

- MBA
- Structural Engg.
- Computer Science & Engg.
- Infrastructure Management
- VLSI Design & Embedded Systems

**Ph.D. Programmes**

- Civil Engineering
- Mechanical Engg
- Computer Science & Engineering
- Electronics & Communication Engineering

**For Admissions Contact**

**Dr. M.B. Anandaraju**
Admission Officer
9886108095

**Dr. B.K. Narendra**
Principal
9880100556

**www.bgsit.ac.in | CET Code: E142**

To,

If undelivered please return to :
The Editor
**Sampreethi Sadan**
Govt. Hospital Parallel Road,
Magadi Town, Magadi - 562120